# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 20 | ಮೇ 10–16, 2021 | ಪುಟ 16 | ರೂ. 10

s://janashakthi.wordpress.com e-mail : js_weekly@yahoo.com




## ವಿಧಾನಸಭಾ ಚುನಾವಣೆಗಳು


## ಬಿಜೆಪಿಗೆ ಮತದಾರರ ಬಲವಾದ ಏಟು





## ಕೇರಳ : ಎಲ್‌ಡಿಎಫ್ ಗೆ ಚಾರಿತ್ರಿಕ ವಿಜಯ

## ಲಸಿಕೆ ಬೆಲೆಗಳಲ್ಲೂ ಹಗರಣ!




## ಲಾಲ್ ಸಲಾಂ



ವಿಠ್ಠಲ ಭಂಡಾರಿ ಭಾಸ್ಕರ್ ಮಯ್ಯ

## ಚಿತಾಗಾರಗಳು ಹೌಸ್‌ಫುಲ್: ಹೊರಟಿದೆ ಶವಗಳ ಮೆರವಣಿಗೆ

# ನಿಲ್ಲದೆ ಸಾಗಿದೆ ಕೊವಿಡ್ ಉಬ್ಬರ-ತಪ್ಪಿಸಬಹುದಾಗಿದ್ದ ಸಾವುಗಳು

## ತಕ್ಷಣವೇ ಆಕ್ಸಿಜನ್ ಹರಿವು, ಸಾಮೂಹಿಕ ಲಸಿಕೀಕರಣಕ್ಕೆ ಕ್ರಮ ಕೈಗೊಳ್ಳಬೇಕು

**ಕೊವಿಡ್ ಮಹಾಸೋಂಕಿನ ಉಬ್ಬರ ದೇಶಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಮಾನವ ಜೀವಗಳ ಬಲಿ ತೆಗೆದುಕೊಳ್ಳುತ್ತಲೇ ಇದೆ. ಎಷ್ಟೆಲ್ಲ ಮನವಿ ಮಾಡಿಕೊಂಡರೂ ಕೇಂದ್ರ ಸರಕಾರ ಮಾನವ ಜೀವಗಳನ್ನು ಉಳಿಸಲು ಆಮ್ಲಜನಕದ ಹರಿವನ್ನು ಖಚಿತಗೊಳಿಸುವಲ್ಲಿ ವಿಫಲವಾಗಿದೆ. ಎಲ್ಲ ಆಸ್ಪತ್ರೆಗಳಿಗೆ, ಆರೋಗ್ಯ ಕೇಂದ್ರಗಳಿಗೆ ಮತ್ತು ಮನೆಯಲ್ಲಿ ಚಿಕಿತ್ಸೆ ಪಡೆಯುವವರಲ್ಲಿ ಅಗತ್ಯವಿರುವವರಿಗೆ ಆಕ್ಸಿಜನ್ ಪೂರೈಕೆ ಅಬಾಧಿತವಾಗಿ ಹರಿಯುವಂತೆ ಮಾಡಬೇಕೆಂದು ಪೊಲಿಟ್‌ಬ್ಯುರೊ ಮತ್ತೊಮ್ಮೆ ಆಗ್ರಹಿಸಿದೆ. ತಕ್ಷಣವೇ ಒಂದು ಸಾಮೂಹಿಕ ಲಸಿಕೀಕರಣ ಕಾರ್ಯಕ್ರಮವನ್ನು ಆರಂಭಿಸಬೇಕು ಎಂದೂ ಅದು ಆಗ್ರಹಿಸಿದೆ.**

**ಕೊವಿಡ್ ಮಹಾಸೋಂಕಿನ ತಲ್ಲಣಕಾರೀ ಉಬ್ಬರದ ಬಗ್ಗೆ ಮಾತ್ರವಲ್ಲದೆ ಅದರಿಂದಾಗಿ ಎದ್ದಿರುವ ಜೀವನೋಪಾಯದ ಪ್ರಶ್ನೆಗಳು, ಸೆಂಟ್ರಲ್ ವಿಸ್ತಾವನ್ನು ಮುಂದುವರೆಸುವ ಅಸಹ್ಯಕರ ಸಂಗತಿ, ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು, ತದನಂತರದ ಹಿಂಸಾಚಾರ ಹಾಗೂ ಕೊವಿಡ್ ಉಬ್ಬರದ ಹಿನ್ನೆಲೆಯಲ್ಲಿ ರೈತರ ಬೇಡಿಕೆಗಳನ್ನು ಸ್ವೀಕರಿಸಬೇಕಾದ ಅಗತ್ಯ ಬಗ್ಗೆ ಚರ್ಚಿಸಿದ ಪೊಲಿಟ್‌ಬ್ಯುರೊ ಸಭೆಯ ನಂತರ ನೀಡಿರುವ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:**

ಕೊವಿಡ್ ಮಹಾಸೋಂಕಿನ ಉಬ್ಬರ ದೇಶಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಮಾನವ ಜೀವಗಳ ಬಲಿ ತೆಗೆದುಕೊಳ್ಳುತ್ತಲೇ ಇದೆ. ಸಿಪಿಐ(ಎಂ) ಈ ತಪ್ಪಿಸಬಹುದಾಗಿದ್ದ ಸಾವುಗಳಿಗೆ ದುಃಖವನ್ನು ವ್ಯಕ್ತಪಡಿಸುತ್ತದೆ. ಮತ್ತು ಈ ರೀತಿ ಪ್ರಾಣ ಕಳಕೊಂಡವರ ಕುಟುಂಬಗಳಿಗೆಲ್ಲ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಎಷ್ಟೆಲ್ಲ ಮನವಿ ಮಾಡಿಕೊಂಡರೂ ಕೇಂದ್ರ ಸರಕಾರ ಮಾನವ ಜೀವಗಳನ್ನು ಉಳಿಸಲು ಆಮ್ಲಜನಕದ ಹರಿವನ್ನು ಖಚಿತಗೊಳಿಸುವಲ್ಲಿ ವಿಫಲವಾಗಿದೆ. ಎಲ್ಲ ಆಸ್ಪತ್ರೆಗಳಿಗೆ, ಆರೋಗ್ಯ ಕೇಂದ್ರಗಳಿಗೆ ಮತ್ತು ಮನೆಯಲ್ಲಿ ಚಿಕಿತ್ಸೆ ಪಡೆಯುವವರಲ್ಲಿ ಅಗತ್ಯವಿರುವವರಿಗೆ ಆಕ್ಸಿಜನ್ ಪೂರೈಕೆ ಅಬಾಧಿತವಾಗಿ ಹರಿಯುವಂತೆ ಮಾಡಬೇಕೆಂದು ಪೊಲಿಟ್‌ಬ್ಯುರೊ ಮತ್ತೊಮ್ಮೆ ಆಗ್ರಹಿಸುತ್ತದೆ.

ತಕ್ಷಣವೇ ಒಂದು ಸಾಮೂಹಿಕ ಲಸಿಕೀಕರಣ ಕಾರ್ಯಕ್ರಮವನ್ನು ಆರಂಭಿಸಬೇಕು. ಲಸಿಕೆಗಳನ್ನು ಎಲ್ಲ ಅಂತರ್ರಾಷ್ಟ್ರೀಯ ಮತ್ತು ದೇಶದೊಳಗೆ ಲಭ್ಯವಿರುವ ಮೂಲಗಳಿಂದ ಪಡೆಯಬೇಕು. ಎಲ್ಲ ಸಾರ್ವಜನಿಕ ವಲಯದ ಲಸಿಕೆ ಉತ್ಪಾದನಾ ಸೌಕರ್ಯಗಳನ್ನು ಲಸಿಕೆ ಉತ್ಪಾದನೆಗೆ ಬಳಸಿಕೊಳ್ಳಬೇಕು. ಲಸಿಕೆ ಕಾರ್ಯಕ್ರಮಕ್ಕೆಂದು ಬಜೆಟಿನಲ್ಲಿ ನೀಡಿದ ರೂ.35,000 ಕೋಟಿಯನ್ನು ಇಂತಹ ಒಂದು ಲಸಿಕೆ ಕಾರ್ಯಕ್ರಮವನ್ನು ದೇಶಾದ್ಯಂತ ರಭಸದಿಂದ ಆರಂಭಿಸಲು ಬಳಸಿಕೊಳ್ಳಬೇಕು.

**ಜೀವನೋಪಾಯದ ಪ್ರಶ್ನೆಗಳು:** ಮಹಾಸೋಂಕು ಮತ್ತು ದೇಶದ ಹಲವು ಭಾಗಗಳಲ್ಲಿ ಹಾಕಿರುವ ಲಾಕ್‌ಡೌನ್‌ಗಳಿಂದಾಗಿರುವ ಅಡೆ–ತಡೆಗಳಿಂದಾಗಿ ಲಕ್ಷಾಂತರ ಜನಗಳು ತಮ್ಮ ಉದ್ಯೋಗಗಳನ್ನು ಕಳಕೊಂಡಿದ್ದಾರೆ. ಈ ಅವಧಿಯಲ್ಲಿ ಉದ್ಯೋಗಗಳಿಗೆ ರಕ್ಷಣೆ ಕೊಡಬೇಕು ಎಂದು ನಿರ್ದೇಶನ ನೀಡುವ ಅಧಿಕಾರ ಕೇಂದ್ರ ಸರಕಾರಕ್ಕೆ ಇದೆ. ಜನಗಳ ಜೀವನೋಪಾಯಗಳನ್ನು ರಕ್ಷಿಸಲು ಈ ಅಧಿಕಾರವನ್ನು ಬಳಸಿಕೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸುತ್ತದೆ.

ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲ ಕುಟುಂಬಗಳಿಗೆ ತೊಂಗಳಿಗೆ ರೂ.7500 ನಗದು ವರ್ಗಾವಣೆ ಮಾಡಬೇಕಾದ್ದು ಈಗ ಅತ್ಯಗತ್ಯವಾಗಿದೆ. ಇದು ಕೂಡಲೆ ಆರಂಭವಾಗಬೇಕು.

**ಆಹಾರಧಾನ್ಯಗಳು:** ಕೋಟ್ಯಂತರ ಟನ್ ಆಹಾರಧಾನ್ಯಗಳು ಕೇಂದ್ರೀಯ ಗೋಡೌನುಗಳಲ್ಲಿ ಕೊಳೆಯುತ್ತಿವೆ. ಇವನ್ನು ಅಗತ್ಯವಿರುವ ಎಲ್ಲರಿಗೂ ಹಂಚಬೇಕು.

### ಸೆಂಟ್ರಲ್ ವಿಸ್ತಾ ನಿರ್ಮಾಣ ಮುಂದುವರಿಕೆ ಅಸಹ್ಯಕಾರಿ–ಅದನ್ನು ನಿಲ್ಲಿಸಬೇಕು

ಇಂತಹ ಮಾನವ ಆರೋಗ್ಯ ದುರಂತದ ಸಮಯದಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಸೆಂಟ್ರಲ್ ವಿಸ್ತಾ ಪರಿಯೋಜನೆಯನ್ನು ಮುಂದುವರೆಸುತ್ತಿರುವುದು ಅಸಹ್ಯಕರವಾದ ಸಂಗತಿ. ಇದನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಆ ಹಣವನ್ನು ಜನಗಳಿಗೆ ಆಕ್ಸಿಜನ್ ಮತ್ತು ಇತರ ಸೌಕರ್ಯಗಳನ್ನು ಒದಗಿಸಲು ವರ್ಗಾಯಿಸಬೇಕು.

## ಅಡೆತಡೆಯಿಲ್ಲದೆ ಆಕ್ಸಿಜನ್. ಸಾರ್ವತ್ರಿಕ ಉಚಿತ ಲಸಿಕೆ –13 ಪ್ರತಿಪಕ್ಷಗಳ ಆಗ್ರಹ

ನಮ್ಮ ದೇಶಾದ್ಯಂತ ಮಹಾಸೋಂಕು ನಿಯಂತ್ರಿಸಲಾರದ ರೀತಿಯಲ್ಲಿ ಉಕ್ಕೇರಿ ಬರುತ್ತಿರುವ ಸಮಯದಲ್ಲಿ ಕೇಂದ್ರ ಸರಕಾರ ಎಲ್ಲ ಗಮನವನ್ನು ಆಮ್ಲಜನಕದ ಪೂರೈಕೆ ದೇಶಾದ್ಯಂತ ಎಲ್ಲ ಆಸ್ಪತ್ರೆಗಳಿಗೆ ಮತ್ತು ಆರೋಗ್ಯ ಕೇಂದ್ರಗಳಿಗೆ ಯಾವುದೇ ತಡೆಯಿಲ್ಲದಂತೆ ಹರಿದು ಬರುವಂತೆ ಖಚಿತ ಪಡಿಸುವುದರ ಮೇಲೆ ಕೇಂದ್ರೀಕರಿಸಬೇಕು ಮತ್ತು ತಕ್ಷಣವೇ ದೇಶಾದ್ಯಂತ ಒಂದು ಉಚಿತ ಸಾಮೂಹಿಕ ಲಸಿಕೀಕರಣ ಕಾರ್ಯಕ್ರಮವನ್ನು ಆರಂಭಿಸಬೇಕು ಮತ್ತು ಇದಕ್ಕೆ ಲಸಿಕೀಕರಣ ಕಾರ್ಯಕ್ರಮಕ್ಕೆಂದು ಬಜೆಟ್ ನಲ್ಲಿ ನೀಡಿರುವ ರೂ.35,000 ಕೋಟಿಯನ್ನು ಬಳಸಬೇಕು ಎಂದು 13 ರಾಜಕೀಯ ಪಕ್ಷಗಳ ಮುಖಂಡರು ಜಂಟಿ ಹೇಳಿಕೆಯೊಂದರಲ್ಲಿ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ರವರಲ್ಲದೆ ಹೆಚ್.ಡಿ.ದೇವೇಗೌಡ(ಜೆಡಿ–ಎಸ್), ಶರದ್ ಪವಾರ್(ಎನ್‌ಸಿಪಿ) ಉದ್ಧವ್ ಠಕ್ರೆ(ಶಿವಸೇನಾ), ಮಮತಾ ಬ್ಯಾನರ್ಜಿ(ಟಿಎಂಸಿ), ಹೇಮಂತ್ ಸೋರೆನ್(ಜೆಎಂಎಂ), ಎಂ.ಕೆ.ಸ್ಟಾಲಿನ್ (ಡಿಎಂಕೆ), ಮಾಯಾವತಿ (ಬಿಎಸ್‌ಪಿ), ಫಾರುಕ್ ಅಬ್ದುಲ್ಲ(ಜಮ್ಮು–ಕಾಶ್ಮೀರ ಜನತಾ ಮೈತ್ರಿಕೂಟ), ಅಖಿಲೇಶ ಯಾದವ್(ಎಸ್‌ಪಿ) ಮತ್ತು ತೇಜಸ್ವಿ ಯಾದವ್(ಆರ್‌ಜೆಡಿ)) ಈ ಕುರಿತ ಜಂಟಿ ಹೇಳಿಕೆ ಪ್ರಕಟಿಸಿದ್ದಾರೆ.

## ವಿಧಾನಸಭಾ ಚುನಾವಣೆಗಳು–ಬಿಜೆಪಿಗೆ ತೀವ್ರ ಹಿನ್ನಡೆ

ಕೇರಳ, ತಮಿಳುನಾಡು, ಪಶ್ಚಿಮ ಬಂಗಾಲ ಮತ್ತು ಅಸ್ಸಾಂ ಈ ನಾಲ್ಕು ಪ್ರಮುಖ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಬಿಜೆಪಿಗೆ ಒಂದು ತೀವ್ರ ಹಿನ್ನಡೆ. ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಿ, ಅಪಾರ ಹಣವನ್ನು ಖರ್ಚುಮಾಡಿ, ಕೇಂದ್ರೀಯ ಸಂಸ್ಥೆಗಳನ್ನು ಆಕ್ರಮಣಕಾರೀ ರಿತಿಯಲ್ಲಿ ದುರುಪಯೋಗಪಡಿಸಿಕೊಂಡು ಮತ್ತು ಚುನಾವಣಾ ಯಂತ್ರದಲ್ಲಿಯೇ ಕೈಯಾಡಿಸಿ ಸರ್ವಪ್ರಯತ್ನಗಳನ್ನು ಮಾಡಿದರೂ ಬಿಜೆಪಿ ಜನಗಳ ಬೆಂಬಲ ಪಡೆಯುವಲ್ಲಿ ವಿಫಲವಾಗಿದೆ, ಮತ್ತು ನಿರ್ಣಾಯಕ ರೀತಿಯಲ್ಲಿ ಸೋತಿದೆ.

ಈ ಫಲಿತಾಂಶಗಳು ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಪ್ರಭುತ್ವ ಚಾರಿತ್ರ್ಯವನ್ನು ಕಾಯ್ದುಕೊಳ್ಳಲು ಮತ್ತು ನಮ್ಮ ಜನಗಳ ಬದುಕುಗಳನ್ನು ಬಹಳಷ್ಟು ಉತ್ತಮಪಡಿಸಲು ದೇಶದಲ್ಲಿ ನಡೆಯುತ್ತಿರುವ ಹೋರಾಟಗಳನ್ನು ಜನತಾ ಆಂದೋಲನಗಳನ್ನು ಮತ್ತಷ್ಟು ಬಲಿಷ್ಟಗೊಳಿಸಬೇಕು.

**ಕೇರಳ:** ಪೊಲಿಟ್‌ಬ್ಯುರೊ ಕೇರಳದ ಎಡ ಪ್ರಜಾಪ್ರಭುತ್ವ ರಂಗ ಭಾರೀ ವಿಜಯ ಗಳಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸುತ್ತದೆ. ಎಲ್‌ಡಿಎಫ್‌ನಲ್ಲಿ ಮತ್ತೊಮ್ಮೆ ವಿಶ್ವಾಸವಿಟ್ಟು ಮುಂದಿನ ಸರಕಾರವನ್ನು ರಚಿಸಲು ಅದನ್ನು ಮತ್ತೆ ಚುನಾಯಿಸಿರುವುದಕ್ಕೆ ಕೇರಳದ ಜನತೆಗೆ ಧನ್ಯವಾದವನ್ನು ಅರ್ಪಿಸುತ್ತದೆ. ಅಧಿಕಾರದಲ್ಲಿರುವ ಸರಕಾರವನ್ನು ಮತ್ತೆ ಚುನಾಯಿಸಿರುವ ಈ ಘಟನೆ ನಾಲ್ಕು ದಶಕಗಳ ನಂತರ ಸಂಭವಿಸಿದೆ. ಈ ಬಾರಿ ಎಲ್‌ಡಿಎಫ್ ಕಳೆದ ಬಾರಿಗಿಂತಲೂ ಉತ್ತಮ ಫಲಿತಾಂಶವನ್ನು ಪಡೆದಿದೆ.

ಕೇರಳದ ಜನತೆ ಈಗಿರುವ ಸರಕಾರದ ಕಾರ್ಯನಿರ್ವಹಣೆ, ಅದು ಅನುಸರಿಸಿದ ಪರ್ಯಾಯ ಧೋರಣೆಗಳು, ನೈಸರ್ಗಿಕ ವಿಪತ್ತುಗಳನ್ನು, ಮಹಾಸೋಂಕಿನ ಪರಿಣಾಮಗಳನ್ನು ನಿಭಾಯಿಸಿದ ವೈಖರಿ, ಕೈಗೊಂಡ ಜನಕಲ್ಯಾಣ ಕ್ರಮಗಳು ಮತ್ತು ಕೇರಳ ಸಮಾಜದ ಜಾತ್ಯತೀತ ಪ್ರಜಾಸತ್ತಾತ್ಮಕ ಸಾಮರಸ್ಯಭರಿತ ಸ್ವರೂಪವನ್ನು ರಕ್ಷಿಸಿಕೊಂಡಿರುವುದಕ್ಕೆ ಮತ ನೀಡಿದ್ದಾರೆ.

**ಪಶ್ಚಿಮ ಬಂಗಾಳ:** ಬಿಜೆಪಿ ತನ್ನ ಹಣಬಲ ಮತ್ತು ಕೈಚಳಕಗಳ ಹೊರತಾಗಿಯೂ ಒಂದು ತೀವ್ರ ಹಿನ್ನಡೆಯನ್ನು ಅನುಭವಿಸಿದೆ. ಬಂಗಾಳದ ಜನತೆ ಕೋಮುವಾದಿ ಧ್ರುವೀಕರಣದ ತತ್ವವನ್ನು ಅತ್ಯಂತ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳ ಫಲಿತಾಂಶ ಅತ್ಯಂತ ನಿರಾಶಾದಾಯಕವಾಗಿದೆ. ಬಿಜೆಪಿಯನ್ನು ಸೋಲಿಸುವ ಜನಗಳ ಆಕಾಂಕ್ಷೆಯಿಂದಾಗಿ ಉಂಟಾದ ತೀಕ್ಷ್ಣವಾದ ಧ್ರುವೀಕರಣದ ಮಧ್ಯೆ ಸಂಯುಕ್ತ ಮೋರ್ಚಾ ಹಿಂಡಿಹಿಪ್ಪೆಯಾಗಿದೆ. ಪಕ್ಷ ಇದರಿಂದ ಅಗತ್ಯ ಪಾಟಗಳನ್ನು ಕಲಿಯಲು ಈ ಫಲಿತಾಂಶಗಳ ಸ್ವವಿಮರ್ಶಾತ್ಮಕ ಪರಾಮರ್ಶೆಯನ್ನು ನಡೆಸುತ್ತದೆ.

**ತಮಿಳುನಾಡು:** ಡಿಎಂಕೆ ನೇತೃತ್ವದ ರಂಗ ಒಂದು ಪ್ರಭಾವಪೂರ್ಣ ವಿಜಯವನ್ನು ಗಳಿಸಿದೆ. ತಮಿಳುನಾಡಿನ ಜನತೆ ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟವನ್ನು ತಿರಸ್ಕರಿಸಿದ್ದಾರೆ ಮತ್ತು ಅಧಿಕಾರದಲ್ಲಿದ್ದ ಎಐಎಡಿಎಂಕೆ ಸರಕಾರವನ್ನು ಸೋಲಿಸಿದ್ದಾರೆ.

**ಅಸ್ಸಾಂ:** ಇಲ್ಲಿ ಮಾತ್ರವೇ ಬಿಜೆಪಿ ತನ್ನ ಸರಕಾರವನ್ನು ಹೇಗೋ ಉಳಿಸಿಕೊಂಡಿದೆ. ಮತಗಳಿಕೆಯ ಪಾಲನ್ನು ನೋಡಿದರೆ ಬಿಜೆಪಿ ಮೈತ್ರಿಕೂಟ ಮತ್ತು ಮಹಾಜೋತ್‌ನಡುವಿನ ಅಂತರ ಕಡಿಮೆಯಿದೆ.

### ಮತದಾನದ ನಂತರದ ಹಿಂಸಾಚಾರವನ್ನು ನಿಲ್ಲಿಸಬೇಕು

ಚುನಾವಣಾ ಫಲಿತಾಂಶಗಳನ್ನು ಪ್ರಕಟಿಸಿದ ನಂತರ ನಮ್ಮ ಸದಸ್ಯರು ಮತ್ತು ಬೆಂಬಲಿಗರ ಮೇಲೆ ಹಿಂಸಾಚಾರದಲ್ಲಿ ತೊಡಗಿರುಉವದನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸುತ್ತದೆ. ಇಂತಹ ದಾಳಿಗಳು ಹೆಚ್ಚುತ್ತಿವೆ. ಈಗಾಗಲೇ ಪಕ್ಷದ ಒಬ್ಬ ಸಂಗಾತಿ ಕಾಕೀಲಿ ಖೇತ್ರಪಾಲ್ ಮತ್ತು ಐಎಸ್‌ಎಫ್‌ನ ಹಸನುರ್ಝ್ಝಮಾನ್ ಜೀವಗಳನ್ನು ಅವರು ತೆಗೆದಿದ್ದಾರೆ. ಇಂತಹ ಭಯೋತ್ಪಾದನೆ ಮತ್ತು ಹಿಂಸಾಚಾರದ ರಾಜಕೀಯವನ್ನು ನಿಲ್ಲಿಸಬೇಕು ಎಂದು ಪೊಲಿಟ್ ಬ್ಯುರೊ ತೃಣಮೂಲ ಕಾಂಗ್ರೆಸ್‌ಗೆ ಕರೆ ನೀಡಿದೆ. ಇದನ್ನು ಪ್ರತಿರೋಧಿಸಲಾಗುವುದು ಮತ್ತು ಹಿಮ್ಮೆಟ್ಟಿಸಲಾಗುವುದು.

ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ಅದರ ಬೆಂಬಲಿಗರ ವಿರುದ್ಧ ದುಷ್ಟ ದಾಳಿಗಳನ್ನು ಹರಿಯ ಬಿಟ್ಟಿರುವುದು ಬಿಜೆಪಿ. ಇತ್ತೀಚೆಗೆ ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣೆಗಳಲ್ಲಿ ಸೋತ ನಂತರ ಅದು ಈ ದಾಳಿಗಳನ್ನು ನಡೆಸಿದೆ.

### ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾದ ಸಮಯ

ಕೋವಿಡ್ ಉಬ್ಬರ ತೀವ್ರಗೊಳ್ಳುತ್ತಿರುವಾಗ, ಇದೀಗ ಕೇಂದ್ರ ಸರಕಾರ ಸುಮಾರು ಆರು ತಿಂಗಳಿಂದ ಹೋರಾಟ ನಡೆಸಿರುವ ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾದ ಸಮಯ.

ಕೇಂದ್ರ ಸರಕಾರ ತಕ್ಷಣವೇ ಹೋರಾಟನಿರತ ರೈತರ ಮುಖಂಡರನ್ನು ಮಾತುಕತೆಗೆ ಕರೆಯಬೇಕು ಮತ್ತು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕೆಂಬ ಅವರ ಆಗ್ರಹವನ್ನು ಒಪ್ಪಿಕೊಳ್ಳಬೇಕು.

## ಬಿಜೆಪಿ–ವಿರೋಧಿ ಚುನಾವಣಾ ತೀರ್ಪುಗಳಿಗೆ ರೈತ ಹೋರಾಟದ ಸ್ವಾಗತ

ದಿಲ್ಲಿಯ ಗಡಿಗಳಲ್ಲಿ ಕಳೆದ ಐದು ತಿಂಗಳಿಂದ ಹೋರಾಟದಲ್ಲಿ ತೊಡಗಿರುವ ರೈತರು ಮೇ ತಿಂಗಳ 1 ಮತ್ತು 2 ನ್ನು ಬಹಳ ಸಂಭ್ರಮದಲ್ಲಿ ಕಳೆದಿದ್ದಾರೆ.

ಮೇ 1 ರಂದು ದಿಲ್ಲಿಯ ಸಾವಿರಾರು ಕಾರ್ಮಿಕರು ಈ ಹೋರಾಟನಿರತ ರೈತರೊಂದಿಗೆ ಸೇರಿಕೊಂಡು ಮೇದಿನವನ್ನು "ರೈತ–ಕಾರ್ಮಿಕ ಐಕ್ಯತಾ ದಿನ'ವಾಗಿ ಆಚರಿಸಿದರು. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೇಂದ್ರೀಯ ಕಾಮಿಕ ಸಂಘಟನೆಗಳು ಈ ದಿನಾಚರಣೆಗೆ ಕರೆ ನೀಡಿದ್ದವು.

ಮರುದಿನ ಒಂದು ತಿಂಗಳಿಂದಲೂ ಹೆಚ್ಚು ಸಮಯದಿಂದ ನಡೆಯುತ್ತಿದ್ದ ವಿಧಾನಸಭಾ ಚುನಾವಣೆಗಳ ತೀರ್ಪಿನ ದಿನ. ಕೇರಳ, ಪಶ್ಚಿಮ ಬಂಗಾಲ ಮತ್ತು ತಮಿಳುನಾಡಿನಲ್ಲಿ ಬಿಜೆಪಿ ಅನುಭವಿಸಿರುವ ತೀವ್ರ ಸೋಲು ಮೋದಿ–ಷಾ ಆಳ್ವಿಕೆಯ ವಿರುದ್ಧ ಕೋಪೋದ್ರಿಕ್ತರಾಗಿರುವ ರೈತರಲ್ಲಿ ಹೊಸ ಹರ್ಷ ಮೂಡಿಸಿದೆ.

ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ವಿಧಾನ ಸಭಾ ಚುನಾವಣೆಗಳು ನಡೆಯುತ್ತಿದ್ದ ರಾಜ್ಯಗಳಿಗೆ ತಮ್ಮ ಮುಖಂಡರನ್ನು ಕಳಿಸಿ ಬಿಜೆಪಿ ವಿರುದ್ಧ ಮತ ನೀಡುವಂತೆ ಪ್ರಚಾರ ನಡೆಸಿದವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಚುನಾವಣಾ ತೀರ್ಪುಗಳು ರೈತರ ಚಳುವಳಿಯ ನಿಲುವನ್ನು ಎತ್ತಿ ಹಿಡಿದಿವೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಕೊವಿಡ್ ದಾಳಿಯನ್ನು ಎದುರಿಸಲು ಸರಿಯಾದ ಯೋಜನೆಯಿಲ್ಲದ್ದರಿಂದ, ಕೇಂದ್ರ ಸರಕಾರದ ನಿರ್ಲಕ್ಷ್ಯದಿಂದ ಸಾವಿರಾರು ಜನಗಳ ಜೀವಗಳು ಬಲಿಯಾಗುತ್ತಿರುವಾಗ, ಇನ್ನೊಂದೆಡೆಯಲ್ಲಿ ಬಹುಪಾಲು ಜನಗಳ ಜೀವನೋಪಾಯಗಳಿಗೆ ತೀವ್ರ ಸಂಚಕಾರ ಬಂದಿರುವಾಗ, ಮೂರು ಕೃಷಿ ಕಾಯ್ದೆಗಳು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳ ವಿರುದ್ಧ ರೈತರು ಮತ್ತು ಕಾರ್ಮಿಕರು ವಿರೋಧ ವ್ಯಕ್ತಪಡಿಸುತ್ತಿರುವಾಗ ಅವನ್ನು ಚುನಾವಣಾ ವಿಷಯಗಳಾಗಿ ಮಾಡದೆ, ಬಿಜೆಪಿ ಮುಖಂಡರುಗಳಿಗೆ ಈ ಚುನಾವಣೆಗಳಲ್ಲಿ ಕೋಮು ಧ್ರುವೀಕಕರಣವೇ ಮುಖ್ಯ ವಿಷಯವಾಗಿ ಬಿಟ್ಟಿತ್ತು. ಇದನ್ನು ಮತದಾರರು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಚುನಾವಣಾ ಆಯೋಗವನ್ನೇ ಬಳಸಿಕೊಂಡರೂ, ಮತದಾನವನ್ನು ದೀರ್ಘವಾಗಿ ಎಳೆದರೂ ಪ್ರಯೋಜನವಾಗಲಿಲ್ಲ ಎಂದಿರುವ ಮೋರ್ಚಾ, ಈಗಾಗಲೇ ಬಿಜೆಪಿಯ ಕೋಮುವಾದಿ ಧ್ರುವೀಕರಣದ ಅಜೆಂಡಾವನ್ನು ಯಾರೂ ಒಪ್ಪಲು ಸಾಧ್ಯವಿಲ್ಲ, ಇಂತಹ ಅಜೆಂಟಾಕ್ಕೆ ತಕ್ಕ ಶಾಸ್ತಿ ಮಾಡಬೇಕು ಎಂಬ ರೈತರ ಪ್ರಚಾರಕ್ಕೆ ಗೆಲುವಾಗಿದೆ ಎಂದಿದೆ.

ಬಿಜೆಪಿ ಜನಾದೇಶಗಳಿಗೆ ಕಿವಿಗೊಡಬೇಕು, ತಕ್ಷಣವೇ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಮತ್ತು ಕನಿಷ್ಟ ಬೆಂಬಲ ಬೆಲೆಗಳಿಗೆ ಕಾನೂನಿನ ಖಾತ್ರಿ ಕೊಡಬೇಕು ಅದು ಆಗ್ರಹಿಸಿದೆ, ಇದರ ಹೊರತು ರೈತರ ಹೋರಾಟ ನಿಲ್ಲುವುದಿಲ್ಲ ಎಂದೂ ಅದು ಸ್ಪಷ್ಟಪಡಿಸಿದೆ. ಸರಕಾರ ರೈತರನ್ನು, ಕಾರ್ಮಿಕರನ್ನು ತಮ್ಮ ಶತ್ರುಗಳಾಗಿ ಕಾಣುವ ಬದಲು, ಕೊರೊನ, ಜೀವನೋಪಾಯಗಳು ಮತ್ತು ಆರ್ಥಿಕ ಬಿಕ್ಕಟ್ಟಿನ ವಿರುದ್ಧ ಸಮರ ನಡೆಸಬೇಕು ಎಂದು ಅದು ಕರೆ ನೀಡಿದೆ.

ಸಂಪಾದಕೀಯ

# ಚಿತಾಗಾರಗಳು ಹೌಸ್‌ಫುಲ್ ಶವಗಳು ಹೊರಟಿವೆ ಮೆರವಣಿಗೆಯಲ್ಲಿ!

ರಾಜ್ಯದಲ್ಲಿ ಕೊರೊನಾ ಆರ್ಭಟಿಸುತ್ತಿದೆ. ಚಿತ್ರಮಂದಿರಗಳು ಹೌಸ್‌ಫುಲ್ ಆಗಿ ಬಂದ್ ಆಗುತ್ತಿರುವಂತೆ ಚಿತಾಗಾರಗಳು ಹೌಸ್‌ಫುಲ್ ಎಂದು ಫಲಕ ಹಾಕಿ ಕೊಂಡಿದ್ದವಂತೆ! ಇದು ನಡೆದದ್ದು ಚಾಮರಾಜ ಪೇಟೆಯ ಟಿ.ಆರ್.ಮಿಲ್ ಸಮೀಪದ ಸ್ಮಶಾನದಲ್ಲಿ! ಇಲ್ಲಿ ನಿತ್ಯ 20 ಶವಗಳ ಅಂತ್ಯಕ್ರಿಯೆ ಮಾಡಲಾಗುತಿತ್ತು. ಅಂದು ಮಧ್ಯಾಹ್ನದ ವೇಳೆಗೆ 19 ಶವಗಳ ದಹನಕ್ಕೆ ಬುಕ್ಕಿಂಗ್ ಆಗಿದ್ದರಿಂದ ಗೇಟಿಗೆ ಹೌಸ್ ಫುಲ್ ಫಲಕ ಹಾಕಲಾಗಿತ್ತು. ಎಷ್ಟು ವಿಚಿತ್ರವಾದ ವಿದ್ಯಮಾನ! ಇಲ್ಲಿಯ ಬಯಲು ಚಿತಾಗಾರದಲ್ಲಿ ದಿನದ 3 ಪಾಳಿಗಳಲ್ಲಿ ಸುಮಾರು 78 ಕೊವಿಡ್ ಶವಗಳ ದಹನ ಮಾಡಲಾಗುತಿತ್ತು.

ಇಲ್ಲಿಯವರೆಗೆ ಸಿನಿಮಾ ಮಂದಿರಗಳ ಹೊರಗೆ ಕಾಣುತ್ತಿದ್ದ ಹೌಸ್‌ಫುಲ್ ಫಲಕ ಈಗ ಸ್ಮಾಶಾನಗಳ ಗೇಟ್‌ನಲ್ಲಿಯೂ ಕಾಣುವ ಪರಿಸ್ಥಿತಿ ಒದಗಿ ಬಂದಿದೆ. ಈ ಚಿತಾಗಾರದಲ್ಲಿನ ಬಯಲು ಚಿತಾಗಾರಗಳಲ್ಲಿ 58 ಶವಗಳ ದಹನ ಮಾಡಲು ಅವಕಾಶವಿದೆ. ಆದರೂ ಶವಗಳನ್ನು ಹೊತ್ತು ತರುವ ಅಂಬುಲೆನ್ಸ್‌ಗಳ ಸರತಿ ಸಾಲು ಕರಗುತ್ತಿಲ್ಲ. ಇಲ್ಲಿ ಕೋವಿಡ್‌ಗೆ ಒಳಗಾಗಿ ಸಾಯುತ್ತಿರುವವರಿಗಾಗಿ ಬಯಲು ಚಿತಾಗಾರ ನಿರ್ಮಿಸಲಾಗಿದ್ದು ಅಲ್ಲಿ ಶವಗಳನ್ನು ಸುಡುವ ಒಲೆಗಳನ್ನು ಹಾಕಲಾಗಿದೆ. ಪ್ರತಿನಿತ್ಯ ಕೋವಿಡ್ ಶವಗಳು ಬರುವ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮೊದಲು ಬಂದವರಿಗೆ ಟೋಕನ್ ವ್ಯವಸ್ಥೆ ಮಾಡಲಾಗಿದೆ. ಅಂಬುಲೆನ್ಸ್ ಚಾಲಕರು ಅಥವ ಮೃತರ ಕುಟುಂಬ ಸದಸ್ಯರು ಟೋಕನ್ ಪಡೆದು ತಮ್ಮ ಪಾಳಿಗಾಗಿ ಕಾಯುವರು. ಶವಗಳ ಸಂಖ್ಯೆ ಲೆಕ್ಕವಿಲ್ಲದಷ್ಟು ಹೆಚ್ಚಾಗುತ್ತಿದ್ದು ಚಿತಾಗಾರ ಹೌಸ್‌ಫುಲ್ ಆಗಿದೆ ಎಂದು ಗೇಟಿನಲ್ಲಿ ಫಲಕ ತೂಗುಹಾಕಬೇಕಾದ ಪರಿಸ್ಥಿತಿ ಬಂದಿದೆ. ಎಂತಹ ಕ್ರೂರ ವ್ಯವಸ್ಥೆ! ವ್ಯವಸ್ಥೆಯ ಅವ್ಯವಸ್ಥೆ!

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಸಾಯುತ್ತಿರುವ ಕೋವಿಡ್ ಸೋಂಕಿತರ ಪರಿಸ್ಥಿತಿ ಇಷ್ಟೊಂದು ಆಘಾತಕಾರಿಯಾಗಿದ್ದರೆ ದೇಶದ ರಾಜಧಾನಿ ದೆಹಲಿಯಲ್ಲಿ ಪರಿಸ್ಥಿತಿ ಇನ್ನೊಂದು ರೀತಿಯಲ್ಲಿ ಅನಾವರಣಗೊಳ್ಳುತ್ತಿದೆ. ದೆಹಲಿಯಲ್ಲಿ ಪೊಲೀಸರು ರಾಜ್ಯ ಸರ್ಕಾರದ ಮಾತು ಕೇಳುವುದಿಲ್ಲ. ಅಲ್ಲಿ ಪ್ರಧಾನಿ ಮೋದಿರವರ ಆದೇಶ ಮಾತ್ರ ಜಾರಿಯಲ್ಲಿರುತ್ತದೆ. ಮೋದಿ ಪೊಲೀಸರು ದೆಹಲಿಯಲ್ಲಿ ಕಠಿಣವಾದ ಲಾಕ್‌ಡೌನ್ ಜಾರಿಗೆ ತಂದಿದ್ದಾರೆ. ಅಲ್ಲಿ ಎಲ್ಲಾ ರೀತಿಯ ಪ್ರತಿಭಟನೆಗಳನ್ನು, ಮೆರವಣಿಗೆಗಳನ್ನು ನಿಷೇಧಿಸಿದ್ದಾರೆ. ಇಂತಹ ಪ್ರತಿಭಂಧಗಳ ಮೂಲಕ ಜನರ ಸಂವಿಧಾನಾತ್ಮಕ ಹಕ್ಕುಗಳನ್ನು ತಡೆಹಿಡಿಯಲಾಗುತ್ತಿದೆ. ದೇಶದಲ್ಲಿ ಮೋದಿ ನೇತೃತ್ವದಲ್ಲಿ ತುರ್ತುಪರಿಸ್ಥಿತಿಯೊಂದನ್ನು ಹೇರಲಾಗಿದೆ.

ಆದರೆ ಅಲ್ಲಿ ಕೋವಿಡ್ ಶವಗಳು ಮೋದಿ ಆದೇಶಗಳನ್ನು ಬಹಿರಂಗವಾಗಿ ಉಲ್ಲಂಘಿಸುತ್ತಿವೆ. ಇಲ್ಲಿ ಮಾನವ ಶವಗಳು, ಚಿತಾಗಾರದ ಹೊರಗಡೆ ಸರತಿ ಸಾಲುಗಳಲ್ಲಿ ನಿಲ್ಲುತ್ತವೆ. ಜನ ತಮಗೆ ಬೇಕಾಗುವ ವಸ್ತುಗಳನ್ನು ಖರೀದಿ ಮಾಡಲು ಅಂಗಡಿಗಳ ಎದುರು ಸಾಲಾಗಿ ನಿಲ್ಲುವುದನ್ನು ನಾವು ನೋಡುತ್ತಿರುತ್ತೇವೆ. ಚಿತಾಗಾರಗಳ ಮುಂದೆ ಅಂತ್ಯಸಂಸ್ಕಾರಕ್ಕಾಗಿ ಶವಗಳನ್ನು ಸರತಿಯಲ್ಲಿ ಇರಿಸಿದ್ದು ಯಾರೂ ಇಲ್ಲಿಯವರೆಗೆ ಕಂಡರಿಯಲಿಕ್ಕಿಲ್ಲ. ಇದು ಸಹ ಕೋವಿಡ್ ಕರಾಳತೆಯ ಒಂದು ಚಿತ್ರವಾಗಿದೆ.

ಈ ವಿದ್ಯಮಾನದ ಹಿಂದೆ ಅನೇಕ ಹೃದಯ ವಿದ್ರಾವಕ ಸಂಗತಿಗಳಿವೆ. ಕುಷ್ಟಗಿಯಲ್ಲಿ ವೃದ್ಧೆಯೊಬ್ಬಳು ಕುಸಿದು ಬಿದ್ದು ಮೃತಪಟ್ಟಿದ್ದಳು. ಯಾರೊ ಅವಳ ಮೃತದೇಹವನ್ನು ಗಮನಿಸಿರಲಿಲ್ಲ. ಎರಡನೇ ದಿನ ಆ ಮಹಿಳೆಯ ಶವವನ್ನು ಬಿಡಾಡಿ ನಾಯಿಗಳು ಎಳೆದಾಡಿ ಶವದ ಕೆಲವು ಭಾಗಗಳನ್ನು ತಿಂದುಹಾಕಿದ್ದವು.

ಕೋವಿಡ್ ದಾಳಿ ಮುಂದುವರೆದಿದೆ. ಈಗಾಗಲೇ ಸಾವಿರಾರು ಜನರನ್ನು ಬಲಿತೆಗೆದುಕೊಂಡಿದೆ. ಈ ಸಂಖ್ಯೆ ಹೆಚ್ಚಾಗುವ ಲಕ್ಷಣಗಳೇ ಕಾಣುತ್ತಿವೆ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಮಾತ್ರ ತಮ್ಮ ವೈಫಲ್ಯವನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ, ಬಡವರಿಗೆ ಜೀವ ರಕ್ಷಕ ಔಷಧಿಗಳ ಉಚಿತ ಪೂರೈಕೆಯ ವ್ಯವಸ್ಥೆ ಇಲ್ಲ. ಆಮ್ಲಜನಕದ ಪೂರೈಕೆ ಇಲ್ಲದೆ ಅಸಾಯಕರು ಅಸಂಖ್ಯ ಸಂಖ್ಯೆಯಲ್ಲಿ ಸಾವನ್ನಪ್ಪುತ್ತಿದ್ದಾರೆ. ಜನರ ಜೀವ ರಕ್ಷಣೆಯ ಜವಾಬ್ದಾರಿಯನ್ನು ಒಪ್ಪಿಕೊಳ್ಳದ ಅನಿಷ್ಟ ಸರ್ಕಾರಗಳನ್ನು ನಾವು ಸಹಿಸಿಕೊಂಡಿದ್ದೇವೆ. ಇನ್ನೆಷ್ಟು ಜನರ ಪ್ರಾಣ ಹೋಗಬೇಕು ಈ ಸರ್ಕಾರಗಳು ಎಚ್ಚರಗೊಳ್ಳಲು? ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳು ತಮ್ಮ ಆತಂಕ ವ್ಯಕ್ತಪಡಿಸಿವೆ. ಆದರೆ ಜನ ಸೇವೆಗಾಗಿ ಪ್ರಮಾಣಮಾಡಿ ಅಧಿಕಾರದ ಗದ್ದುಗೆಯನ್ನು ಅಲಂಕರಿಸಿದವರಿಗೆ ಪರಿಸ್ಥಿತಿಯ ಗಂಭೀರತೆ ಅರ್ಥವಾಗುತ್ತಿಲ್ಲ. ಬದುಕಿನ ಹಕ್ಕಿಗಾಗಿ ಎಲ್ಲಾ ಕಾನೂನು–ಅಡೆತಡೆಗಳನ್ನೂ ಮೀರಿ ಹೋರಾಟ ನಡೆಸುವುದೊಂದೇ ಉಳಿದಿರುವ ದಾರಿ.

# ಆರೋಗ್ಯ ಇಲಾಖೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳನ್ನು ಬಲಪಡಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಿಲ್ಲವೇಕೆ

ಇವರಿಗೆ,
ಮಾನ್ಯ ಪ್ರಧಾನ ಮಂತ್ರಿಗಳು,
ಭಾರತ ಸರಕಾರ,

ಮಾನ್ಯ ಶ್ರೀ ಯಡಿಯೂರಪ್ಪರವರು,
ಮುಖ್ಯ ಮಂತ್ರಿಗಳು, ಕರ್ನಾಟಕ ಸರಕಾರ

ಮಾನ್ಯರೇ,

ಕರ್ನಾಟಕ ರಾಜ್ಯ ಮತ್ತೊಮ್ಮೆ ಕೋವಿಡ್–19 ರ ಎರಡನೇ ಅಲೆಯ ಅತ್ಯಂತ ಗಂಭೀರವಾದ ಬಾಧೆಗೊಳಗಾಗುತ್ತಿರುವುದು ತೀವ್ರ ನೋವಿನ ಸಂಗತಿಯಾಗಿದೆ.

ಮಾಹಿತಿಯಂತೆ, ಪ್ರತಿ ದಿನ ಸುಮಾರು 40 ಸಾವಿರ ಹೊಸ ಸೋಂಕಿತರು ಕಂಡು ಬಂದಿದ್ದಾರೆ. ಕಳೆದೆರಡು ವಾರಗಳಿಂದ ಸೋಂಕಿತರ ಸಂಖ್ಯೆ ತೀವ್ರ ಆಘಾತಕಾರಿಯಾಗಿ ಬೆಳೆಯುತ್ತಲೇ ಇದೆ. ಸಾವುಗಳ ಸಂಖ್ಯೆಯು ಬೆಳೆಯುತ್ತಲೇ ಇದೆ. ಇನ್ನೂ ಮುಂದೆಯೂ ಮತ್ತಷ್ಟು ವೇಗವಾಗಿ ಹೆಚ್ಚಳಗೊಳ್ಳುವ ಅಪಾಯದ ಕುರಿತು ತಜ್ಞರು ಎಚ್ಚರಿಸಿದ್ದಾರೆ.

ಆದರೇ, ಕೋವಿಡ್–19 ಎರಡನೇ ಅಲೆಯ ಸೋಂಕಿನ ಬೆಳವಣಿಗೆಯ ಅಪಾಯದ ಕುರಿತು ತಜ್ಞರು ಮಾಹಿತಿ ನೀಡಿದ್ದರೂ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಕಾಲಿಕ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೇ ಇರುವುದು ತೀವ್ರ ಅಪರಾಧಿ ದುಷ್ಕೃತ್ಯದ ಉದಾಸೀನವಾಗಿದೆ. ಈ ದುಷ್ಕೃತ್ಯವನ್ನು ಬಲವಾಗಿ ಖಂಡಿಸುತ್ತೇವೆ. ಸರಕಾರಗಳ ನಿರ್ಲಕ್ಷ್ಯದಿಂದಾಗಿ ರಾಜ್ಯದ ಜನತೆ ಈ ಸಾಂಕ್ರಾಮಿಕಕ್ಕೆ ವ್ಯಾಪಕವಾಗಿ ಬಲಿಯಾಗುವಂತಾಗಿದೆ. ಅದರ ಹೊಣೆಗಾರಿಕೆ ನಿಮ್ಮದೇ ಆಗಿರುತ್ತದೆ ಸರಕಾರಗಳು ಕೇವಲ ತೋರಿಕೆಯ ಆತಂಕವನ್ನು ಕಪಟತನದಿಂದ ವ್ಯಕ್ತಪಡಿಸುತ್ತಿರುವುದನ್ನು ಬಿಟ್ಟರೇ, ಅದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕೈಗೊಂಡ ಕ್ರಮಗಳು ಏನೇನು ಇಲ್ಲವಾಗಿದೆ. ಜಗತ್ತಿನ ಅನುಭವದಂತೆ ಮಾರ್ಪಾಟುಗೊಂಡ ಅಥವಾ ಎರಡನೇ ಅಲೆಯ ವೈರಾಣು ಧಾಳಿ ನಿಯಂತ್ರಿಸಲು, ಅದನ್ನು ಎದುರಿಸಲು ಬೇಕಾದ ಸಿದ್ಧತೆಗಳನ್ನು ಎರಡೂ ಸರಕಾರ ಮಾಡಿಕೊಳ್ಳಲಿಲ್ಲವೆಂದು ಹೇಳಲೇ ಬೇಕಾಗಿದೆ.

ಕಳೆದ ವರ್ಷದ ಕೋವಿಡ್ ಧಾಳಿಯ ಅನುಭವವನ್ನು ಕ್ರೋಢೀಕರಿಸಿಕೊಂಡು ಆರೋಗ್ಯ ಇಲಾಖೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳನ್ನು ಬಲಪಡಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಿಲ್ಲವೇಕೆ ಎಂದು ತಾವು ನಾಗರೀಕರಿಗೆ ಉತ್ತರಿಸಬೇಕಾಗಿದೆ.

ಪರಿಣಾಮವಾಗಿ, ಈಗ ಬೆಳೆಯುತ್ತಿರುವ ಸೋಂಕಿತರ ಸಂಖ್ಯೆಗೆ ಅನುಸಾರವಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಮತ್ತು ವೆಂಟಿಲೇಟರ್ ಗಳು, ಆಮ್ಲಜನಕ, ಔಷಧಿಗಳು,ಲಸಿಕೆಗಳು ಮತ್ತು ಶೂಶ್ರೂಕರು ದೊರೆಯುತ್ತಿಲ್ಲವೆಂಬುದು ಸೋಂಕಿತರ ಹಾಗೂ ಅವರ ಕುಟುಂಬದ ಸದಸ್ಯರ ಅಳಲಾಗಿದೆ. ಇದರಿಂದಾಗಿ ಹಲವು ಸೋಂಕಿತರು ಮರಣ ಹೊಂದಿದ್ದಾರೆ. ಖಾಸಗೀ ಆಸ್ಪತ್ರೆಗಳು, ಜನಗಳ ಈ ದುಸ್ಥಿತಿಯನ್ನು ಬಳಸಿಕೊಂಡು ಸುಲಿಗೆಗೆ ನಿಂತಿವೆ. ಔಷಧಿಗಳನ್ನು ಹಾಗೂ ಬೆಡ್ ಗಳನ್ನು ಕಾಳ ಸಂತೆಯಲ್ಲಿ ಮಾರಾಟಮಾಡಲು ಬಿಡಲಾಗಿದೆ. ಮಾತ್ರವಲ್ಲಾ, ಸದರಿ ಸಂದರ್ಭಗಳನ್ನು ಕೋಮುವಾದಿ ಮತಾಂಧ ಶಕ್ತಿಗಳು ಜನತೆಯನ್ನು ವಿಭಜಿಸಿ ಆಳಲು ಬಿಡಲಾಗಿದೆ. ಇದೆಲ್ಲವೂ, ರಾಜ್ಯದ ನಾಗರೀಕರಲ್ಲಿ ಮತ್ತಷ್ಟು ಭೀತಿಯುಂಟಾಗಿದೆ.

ಮೊದಲೇ, ರಾಜ್ಯವು ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಜೊತೆಗೆ ಕಳೆದ ಎರಡು– ಮೂರು ವರ್ಷಗಳ ಬರಗಾಲ ಮತ್ತು ಪ್ರವಾಹಗಳು ಇನ್ನಷ್ಟು ಸಂಕಷ್ಟಗಳನ್ನು ಜನತೆಯ ಮೇಲೆ ಅದಾಗಲೇ ಹೇರಿದ್ದವು. ಕಳೆದ ವರ್ಷದಿಂದ ಈ ಕೋವಿಡ್ ಬಾಧೆ, ಅವೈಜ್ಞಾನಿಕ ಲಾಕ್ ಡೌನ್ ಅದರ ದುಷ್ಪರಿಣಾಮಗಳು ಮತ್ತು ಇದೀಗ ಮುಂದುವರೆದ ವೈರಸ್ ದಾಳಿ ಅದನ್ನೆದುರಿಸಲು ಮತ್ತೊಮ್ಮೆ ಮುಂಜಾಗ್ರತಾ ಕ್ರಮಗಳಿಲ್ಲದ ಲಾಕ್ ಡೌನ್ ಘೋಷಣೆ ರಾಜ್ಯವನ್ನು ಮತ್ತಷ್ಟು ನಲುಗುವಂತೆ ಮಾಡಿದೆ.

ಇಂತಹ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಅಗತ್ಯ ಪರಿಹಾರದ ಕ್ರಮಗಳನ್ನು ಕೈಗೊಳ್ಳುವಂತೆ ನಾವು ಹಲವು ಬಾರಿ ಒತ್ತಾಯ ಮಾಡುತ್ತಾ ಬಂದರೂ ತಮ್ಮ ಸರಕಾರ ಆ ಕುರಿತು ಗಮನವನ್ನೇ ಹರಿಸಲಿಲ್ಲ.

ಇದರಿಂದಾಗಿ, ಜನತೆಯ ಸಂಕಷ್ಟಗಳನ್ನು, ಅವರುಗಳೇ ಪರಿಹರಿಸಿಕೊಳ್ಳುವಂತೆ ಅವರ ಮೇಲೆಯೇ ನಿರ್ಧಯಿಯಾಗಿ ತಮ್ಮ ಸರಕಾರಗಳು ಬಿಟ್ಟು ಬಿಟ್ಟುದರಿಂದ, ಸಾಮಾನ್ಯರು, ಬಡವರು, ತಮ್ಮ ಬಳಿ ಇದ್ದ ಸಣ್ಣ ಪುಟ್ಟ ಆಸ್ತಿಗಳನ್ನು ಉಳ್ಳವರಿಗೆ ದುಬಾರಿ ಬಡ್ಡಿಯ ಸಾಲಕ್ಕಾಗಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ ಮತ್ತು ಸಾಲಬಾಧಿತರಾಗಿದ್ದಾರೆ. ಇದರಿಂದ ಶ್ರೀಮಂತರು ಭಾರೀ ಶ್ರೀಮಂತರಾದರೇ, ಬಡವರು ಮತ್ತಷ್ಟು ಕಡುಬಡವರಾಗುತ್ತಿದ್ದಾರೆ.

ಈಗ ರಾಜ್ಯವು ಮರಳಿ ಮತ್ತಷ್ಟು ದುಸ್ಥಿತಿಯ ಕಡೆ ಚಲಿಸುವಂತಾಗಿದೆ. ಒಂದೆರಡು ತಿಂಗಳಿನಿಂದ ಉದ್ಯೋಗ ಹರಸಿ ಹೊರಟಿದ್ದ ವಲಸೆ ಕಾರ್ಮಿಕರು, ಬೆಳೆಯುತ್ತಿರುವ ಸೋಂಕಿನ ಕಾರಣದಿಂದ ಆತಂಕಗೊಂಡು ಮರಳಿ ಸ್ವಂತ ಊರುಗಳ ಕಡೆ ಮುಖ ಮಾಡುತ್ತಿದ್ದಾರೆ. ಈಗಿನ ಲಾಕ್ಡೌನ್ ಕಾರಣದಿಂದ ನಿರುದ್ಯೋಗ ಮತ್ತೊಮ್ಮೆ ಬೃಹದಾಕಾರವಾಗಿ ಬೆಳೆಯಲಿದೆ. ಇವರಿಗೆ ಯಾವುದೇ ಪರಿಹಾರವನ್ನು ಘೋಷಿಸಿಲ್ಲ. ಅಪೌಷ್ಠಿಕತೆಯಿಂದ ಬಳಲುವ ಜನರು, ಪೌಷ್ಠಿಕತೆಯನ್ನು ಪಡೆದು ರೋಗ ನಿರೋಧಕ ಶಕ್ತಿ ವಿಸ್ತರಿಸಿಕೊಳ್ಳಲು ಯಾವುದೇ ಕ್ರಮಗಳಿಲ್ಲ.

ಮತ್ತೊಂದು ಕಡೆ, ತಮ್ಮ ಹಾಗೂ ಕೇಂದ್ರ ಸರಕಾರಗಳು ಜಾರಿ ಮಾಡುತ್ತಿರುವ ಲೂಟಿ ಕೋರ ಕಾರ್ಪೋರೇಟ್ ಪರವಾದ ನೀತಿಗಳು, ಜನತೆಯನ್ನು ಇನ್ನಷ್ಟು ಆತಂಕಿತರನ್ನಾಗಿಸಿ ಇಂತಹ ವೈರಾಣು ಧಾಳಿಯ ನಡುವೆಯೂ ಅವರು ಬೀದಿಗಿಳಿಯುವಂತೆ ಬಲವಂತ ಮಾಡಿದೆ.

ಆದ್ದರಿಂದ, ರಾಜ್ಯವನ್ನು ಇಂತಹ ದುಸ್ಥಿತಿಯಿಂದ ಮತ್ತು ತೀವ್ರತರವಾದ ಆತಂಕಗಳಿಂದ ಮೇಲೆತ್ತಲು ಮತ್ತು ಈ ಸಂಕಷ್ಟಗಳನ್ನು ಜನತೆ ಐಕ್ಯತೆಯಿಂದ ಎದುರಿಸುವಂತಾಗಲು, ಈ ಕೂಡಲೇ, ರಾಜ್ಯದಲ್ಲಿ ಕೋವಿಡ್ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಕೆಳಕಂಡ ಕ್ರಮಗಳನ್ನು ಗಂಭೀರವಾಗಿ ಕೈಗೊಳ್ಳುವಂತೆ ಈ ಮೂಲಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಒತ್ತಾಯಿಸುತ್ತದೆ.

**ಹಕ್ಕೊತ್ತಾಯಗಳು:**

1) ರೈತರು ಹಾಗೂ ಕಾರ್ಮಿಕರ ಮತ್ತು ನಾಗರೀಕರ ವಿರೋಧಿಯಾದ ಕಾಯ್ದೆಗಳು, ಭೂಸುಧಾರಣಾ ತಿದ್ದುಪಡಿ ಕಾಯ್ದೆ – 2020, ಏಪಿಎಂಸಿ ತಿದ್ದುಪಡಿ ಕಾಯ್ದೆ– 2020, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ಹಾಗೂ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ ಮತ್ತು ಕಾರ್ಮಿಕ ಸಂಹಿತೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಗಳನ್ನು ತಕ್ಷಣ ವಾಪಾಸು ಪಡೆಯಬೇಕು.
2) ಕೋವಿಡ್ ಸೋಂಕಿತರಿಗೆ ಉಚಿತ ಶೂಶ್ರೂಷೆ ಒದಗಿಸಲು ಮತ್ತು ಖಾಸಗೀ ಆಸ್ಪತ್ರೆಗಳ ಸುಲಿಗೆಗಳಿಂದ ರಕ್ಷಿಸಲು ಎಲ್ಲಾ ಖಾಸಗೀ ಆಸ್ಪತ್ರೆಗಳನ್ನು ತಾತ್ಕಾಲಿಕವಾಗಿ ಸರಕಾರದ ವಶಕ್ಕೆ ಪಡೆಯ ಬೇಕು. ಎಲ್ಲಾ ಆಸ್ಪತ್ರೆಗಳಲ್ಲಿ ಅರ್ಧದಷ್ಟು ಹಾಸಿಗೆಗಳನ್ನು ಕೋವಿಡ್ ಬಾಧಿತರಿಗೆ ಮೀಸಲಿಡಬೇಕು. ಮುಂಜಾಗ್ರತೆಯ ಕ್ರಮವಾಗಿ, ಶಾಲಾ ಕಾಲೇಜ್, ಹಾಸ್ಟೆಲ್ ಹಾಗೂ ಕಲ್ಯಾಣ ಮಂಟಪ, ಹೋಟೆಲ್ ಮುಂತಾದವುಗಳನ್ನು ಆಸ್ಪತ್ರೆಗಳಾಗಿ ಬಳಸಲು ಅಗತ್ಯ ಸಿದ್ಧತೆಯನ್ನು ಕೈಗೊಳ್ಳಬೇಕು. ಈ ಎಲ್ಲದರ ನಿರ್ವಹಣೆಗೆ ಅಗತ್ಯ ಸಿಬ್ಬಂದಿ, ಔಷಧಿ, ಆಮ್ಲಜನಕ, ವೆಂಟಿಲೇಟರ್ ಗಳನ್ನು ಹಾಗೂ ಅದಕ್ಕಾಗಿ ಹಣಕಾಸು ನೆರವನ್ನು ಘೋಷಿಸಬೇಕು.

ರಾಜ್ಯದ ಎಲ್ಲ ವಯೋ

ಪುಟ 4 ಕ್ಕೆ

# ಕೋವಿಡ್ ನಿರ್ವಹಣೆಯಲ್ಲಿರುವ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ

## ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ ರಾಜಕೀಯ ಪಕ್ಷಗಳು

**ಕೋವಿಡ್ ನಿರ್ವಹಣೆಯಲ್ಲಿರುವ ಸಮಸ್ಯೆಗಲನ್ನು ಕೂಡಲೇ ಪರಿಹರಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ, ಸೋಷಲಿಸ್ಟ್ ಯೂನಿಟಿ ಸೆಂಟರ ಆಫ್ ಇಂಡಿಯಾ (ಕಮ್ಯೂನಿಸ್ಟ್)–ಎಸ್‌ಯುಸಿಐ(ಸಿ), ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ–ಲೆನಿನ್‌ವಾದಿ)–ಲಿಬರೇಷನ್–ಸಿಪಿಐ(ಎಂಎಲ್) ಎಲ್, ಫಾರ್ವಡ್ ಬ್ಲಾಕ್, ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ–ಆರ್‌ಪಿಐ, ಸ್ವರಾಜ್ ಇಂಡಿಯಾ ಪಕ್ಷಗಳ ರಾಜ್ಯ ಸಮಿತಿಗಳು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಜಂಟಿ ಮನವಿ ಸಲ್ಲಿಸಿವೆ.**

ಇವರಿಗೆ,
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಕೋವಿಡ್ ಎರಡನೇ ಅಲೆ ಕರ್ನಾಟಕವನ್ನು ಆವರಿಸಿದೆ. ಇಂತಹ ವಿಪತ್ತಿನ ಕುರಿತು ತಜ್ಞರು ಮುನ್ನೆಚ್ಚರಿಕೆ ನೀಡಿದ್ದರೂ ಕೂಡ ಕೊನೆಘಳಿಗೆಯವರೆಗೆ ತಮ್ಮ ಸರ್ಕಾರ ಅಗತ್ಯ ಕ್ರಮ ಕೈಗೊಂಡಿಲ್ಲದಿರುವುದು ಅತ್ಯಂತ ವಿಷಾದನೀಯ. ಐಸಿಯು ಮತ್ತು ವೆಂಟಿಲೇಟರ್‌ಗಳ ಕೊರತೆಯಿಂದ ರಾಜ್ಯದಾದ್ಯಂತ ನೂರಾರು ರೋಗಿಗಳು ಜೀವ ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು ದೊರಕುತ್ತಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ನೋಡಲ್ ಕಚೇರಿಯಿಂದ ಕಳುಹಿಸಿದಾಗಲೂ ದಾಖಲಿಸಲು ನಿರಾಕರಿಸಿದ ಘಟನೆಗಳಿವೆ.

ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದ ರೋಗಿಗಳಿಗೆ ತಾರತಮ್ಯದ ಕಳಪೆ ಸೇವೆ ನೀಡುವ ಪ್ರಕರಣಗಳು ನಡೆಯುತ್ತಿವೆ. ಯಾವ ಆಸ್ಪತ್ರೆಯಲ್ಲಿ ಎಷ್ಟು ಹಾಸಿಗೆಗಳು ಲಭ್ಯವಿದೆ ಎಂಬ ಪಾರದರ್ಶಕ ಮಾಹಿತಿ ಸಾರ್ವಜನಿಕರಿಗೆ ದೊರಕದೆ ರೋಗಿಗಳ ಜೊತೆಗೆ ಅಲೆದಾಡುವ ಪರಿಸ್ಥಿತಿ ಬಂದಿದೆ. ಬಹುಮುಖ್ಯವಾದ ಬಿಯು ಸಂಖ್ಯೆಯನ್ನು ಒದಗಿಸುವಲ್ಲಿ ತುಂಬಾ ವಿಳಂಬವಾಗುತ್ತಿದೆ. ಈ ಸಂಖ್ಯೆ ಇಲ್ಲದಿದ್ದರೆ ಆಸ್ಪತ್ರೆಗಳಲ್ಲಿ ಪ್ರವೇಶ ಸಾಧ್ಯವಿಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆಗಳು ಮತ್ತು ಆಮ್ಲಜನಕ ಸಿಲಿಂಡರ್‌ಗಳ ತೀವ್ರ ಕೊರತೆಯಿಂದಾಗಿ ಪ್ರವೇಶ ನಿರಾಕರಿಸಲ್ಪಟ್ಟ ರೋಗಿಗಳು ಆಂಬ್ಯುಲೆನ್ಸ್‌ಗಳೊಳಗೆ, ಬೀದಿಗಳಲ್ಲಿ ಮತ್ತು ಆಸ್ಪತ್ರೆಗಳ ಮುಂದೆ ಸಾವನ್ನಪ್ಪುತ್ತಿದ್ದಾರೆ. ಲಭ್ಯವಿರುವ ಹಾಸಿಗೆಗಳನ್ನು ಅಗತ್ಯಕ್ಕೆ ತಕ್ಕಂತೆ ವಿತರಿಸುವ ಕೇಂದ್ರೀಕೃತ ವ್ಯವಸ್ಥೆಯೂ ಇಲ್ಲ.

ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಬಡವರು ಸಾಧ್ಯವಾಗದೆ ಜೀವ ಬಿಡುತ್ತಿದ್ದಾರೆ. ಸಾವಿರಾರು ವಲಸೆ ಕಾರ್ಮಿಕರ ಬದುಕು ಬೀದಿಗೆ ಬಿದ್ದಿದೆ, ಅತಂತ್ರವಾಗಿದೆ. ಇನ್ನೊಂದೆಡೆ ಕೊರತೆ ಸೃಷ್ಟಿಯಾಗುತ್ತಿದ್ದಂತೆ ಜೀವರಕ್ಷಕ ಔಷಧಿಗಳ ಬೆಲೆಯೂ ಗಗನಕ್ಕೇರುತ್ತಿದೆ, ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಬೆಂಗಳೂರಿನ ಆಸ್ಪತ್ರೆಗಳಲ್ಲಿ ಅಧಿಕಾರಿಗಳು ಶಾಮೀಲಾಗಿ ಕೋವಿಡ್ ರೋಗಿಗಳ ಹಾಸಿಗೆ ಮೀಸಲಿಡುವಲ್ಲಿ ಅವ್ಯವಹಾರ ನಡೆಸಿರುವ ವರದಿಯಾಗಿರುವುದು ಅಘಾತಕಾರಿ ಸಂಗತಿಯಾಗಿದೆ. ಸರ್ಕಾರವು ಮೇ 1 ರಿಂದ 18 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಎಲ್ಲರಿಗೂ ಲಸಿಕೆ ನೀಡಲಾಗುವುದು ಎಂದು ಘೋಷಿಸಿದ್ದರೂ ಸಹ ಇದುವರೆಗೆ ಯಾವ ಸೂಕ್ತ ಕ್ರಮವನ್ನೂ ಕೈಗೊಂಡಿಲ್ಲ. ಒಟ್ಟಿನಲ್ಲಿ ರಾಜ್ಯದ ಜನರ ಪರಿಸ್ಥಿತಿ ಶೋಚನೀಯವಾಗಿದೆ. ಬಡಜನರ ಬಗೆಗಿನ ಸರ್ಕಾರದ ದಿವ್ಯ ನಿರ್ಲಕ್ಷ್ಯದ ಬಗ್ಗೆ ಜನತೆ ತೀವ್ರ ಅತೃಪ್ತರಾಗಿದ್ದಾರೆ.

ಮೊದಲನೇ ಅಲೆಯಲ್ಲಿ ಹೋಂ ಐಸೋಲೇಷನ್‌ನಲ್ಲಿರುವ ರೋಗಿಗಳಿಗೆ ಕನಿಷ್ಠ ಔಷಧಿಗಳನ್ನಾದರೂ ತಮ್ಮ ಸರ್ಕಾರ ಉಚಿತವಾಗಿ ವಿತರಿಸಿತ್ತು. ಈಗ ಅದೂ ಇಲ್ಲವಾಗಿದೆ. ಲಾಕ್‌ಡೌನ್‌ನಿಂದ ಆದಾಯವೂ ಇಲ್ಲದೆ, ಬಡ ಸೋಂಕಿತರು ಕೈಚೆಲ್ಲಿ ಕೂರುವಂತಾಗಿದೆ. ಅಲ್ಲದೆ ಆರ್‌ಟಿ–ಪಿಸಿಆರ್ ಪರೀಕ್ಷಾ ವರದಿ ವಿಳಂಬವಾಗುತ್ತಿದೆ. ಸೋಂಕಿತರ ಪತ್ತೆ ಮತ್ತು ಐಸೋಲೇಷನ್ ಕೂಡ ವಿಳಂಬವಾಗುತ್ತಿದೆ. ಇರುವ ವೆಂಟಿಲೇಟರ್‌ಗಳನ್ನು ಬಳಸಲು ತರಬೇತಿಯುಳ್ಳ ಅರಿವಳಿಕೆ ತಜ್ಞರ ಮತ್ತು ತಂತ್ರಜ್ಞರ ಕೊರತೆಯೂ ಇದೆ. ನುರಿತ ವೈದ್ಯರು, ದಾದಿಯರು, ಪ್ರಯೋಗಾಲಯ ತಜ್ಞರು, ಡಿ–ಗ್ರೂಪ್ ನೌಕರರು ಬೇಕಾಗಿದ್ದಾರೆ. ಕೋವಿಡ್ ಈಗ ನಗರಗಳಿಂದ ಹಳ್ಳಿಗಳಿಗೂ ವ್ಯಾಪಿಸುತ್ತಿರುವ ಸಂದರ್ಭದಲ್ಲಿ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಚಿಕಿತ್ಸಾ ಸೌಕರ್ಯಗಳನ್ನು ಸಜ್ಜುಗೊಳಿಸಬೇಕು.

ಇಂದು ಇಡೀ ಆರೋಗ್ಯ ವ್ಯವಸ್ಥೆಯ ಖಾಸಗೀಕರಣ ಮತ್ತು ವ್ಯಾಪಾರೀಕರಣದ ಪರಿಣಾಮವಾಗಿ ಇಡೀ ದೇಶವೇ ಪರಿತಪಿಸುವಂತಾಗಿದೆ. ಲಾಭದ ದಾಹ ಮಾನವೀಯತೆಯನ್ನೇ ನಾಶಗೊಳಿಸುತ್ತಿದೆ. ಲೂಟಿಕೋರ ಬಂಡವಾಳಶಾಹಿ ವ್ಯವಸ್ಥೆಯ ನಿಜಬಣ್ಣ ಬಯಲಾಗಿದೆ. ಸರ್ಕಾರಗಳ ಬಂಡವಾಳಶಾಹಿಗಳ ಪರವಾದ ನೀತಿಗಳ ಅನಾವರಣವಾಗುತ್ತಿದೆ.

ಇದಲ್ಲದೆ, ಪ್ರಸಕ್ತ ಪರಿಸ್ಥಿತಿಯಿಂದಾಗಿ ಭಾರಿ ನಿರುದ್ಯೋಗ ಕಂಡುಬರುತ್ತಿದೆ. ನಿರ್ಮಾಣ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದ ಲಕ್ಷಾಂತರ ನಿರ್ಮಾಣ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಸಹಸ್ರಾರು ಬೀದಿ ಬದಿ ವ್ಯಾಪಾರಿಗಳು ಮತ್ತು ಸಣ್ಣ ಅಂಗಡಿ ಮಾಲೀಕರು ಸಂಪಾದನೆ ಮಾಡಲಾಗದೆ ಬವಣೆಗೆ ಒಳಗಾಗಿದ್ದಾರೆ. ಇನ್ನೊಂದೆಡೆ ಸಾಕಷ್ಟು ಕೆಲಸ ಇರುವವರಿಗೆ ಈಗ ಅರ್ಧದಷ್ಟು ಸಂಬಳವನ್ನೂ ನೀಡುತ್ತಿಲ್ಲ. ಈ ಆತಂಕಕಾರಿ ಆರ್ಥಿಕ ಪರಿಸ್ಥಿತಿಯಲ್ಲಿ ಸರ್ಕಾರವು ಅವರಿಗೆ ಅಗತ್ಯ ಆಹಾರ ಧಾನ್ಯಗಳ ಉಚಿತ ಪೂರೈಕೆಯೊಂದಿಗೆ ತಿಂಗಳ ಹಣವನ್ನೂ ಒದಗಿಸಬೇಕು. ನಮ್ಮಲ್ಲಿ ಬಹಳ ಹೆಚ್ಚಿನ ಮಟ್ಟಿಗೆ ಬಡ ಜನರು ಪೌಷ್ಟಿಕಾಂಶದಿಂದ ಬಳಲುತ್ತಿರುವ ಇಂದಿನ ವಾಸ್ತವದ ಹಿನ್ನೆಲೆಯಲ್ಲಿ ಇದು ಬಹಳ ಹೆಚ್ಚು ಅಗತ್ಯವಾಗಿದೆ.

ಇತ್ತೀಚೆಗೆ ಚಾಮರಾಜನಗರ, ಕಲಬುರ್ಗಿ ಸೇರಿದಂತೆ ರಾಜ್ಯದ ಹಲವೆಡೆಗಳಲ್ಲಿ ಆಮ್ಲಜನಕದ ಕೊರತೆಯಿಂದ ಸಾವನ್ನಪ್ಪಿದ ಜೀವಗಳಿಗೆ ನಮ್ಮ ಸಂತಾಪ ಸಲ್ಲಿಸುತ್ತಾ, ಮೃತರಾದವರ ಕುಟುಂಬಗಳಿಗೆ ಪರಿಹಾರ ನೀಡಬೇಕು ಹಾಗೂ ಇನ್ನಾದರೂ ಎಚ್ಚೆತ್ತುಕೊಂಡು ಇಂತಹ ದಾರುಣ ಪ್ರಕರಣಗಳು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇವೆ. ಕೇಂದ್ರ – ರಾಜ್ಯ ಸರ್ಕಾರಗಳು ಸಮನ್ವಯದಿಂದ ಕೆಲಸ ಮಾಡದೇ ಹೋದರೆ ಜನತೆ ಇನ್ನಷ್ಟು ತೀವ್ರ ಸಂಕಷ್ಟಕ್ಕೀಡಾಗಲಿದ್ದಾರೆ.

ಭಾರತ ಇಂದು ಸ್ವಾತಂತ್ರ್ಯಾನಂತರದ ಅತ್ಯಂತ ಘೋರ ಆರೋಗ್ಯ ಬಿಕ್ಕಟ್ಟಿನ ಹಿಡಿತಕ್ಕೆ ಒಳಗಾಗಿದೆ. ಅಷ್ಟೇ ಅಲ್ಲ, ಮಹಾಸೋಂಕಿನ ಪಿಡುಗು ಇನ್ನಷ್ಟು ತೀವ್ರಗೊಳ್ಳುತ್ತಿದೆ. ಇದನ್ನು ಎದುರಿಸಲು, ಜನರು ಮತ್ತು ಜೀವನೋಪಾಯಗಳನ್ನು ರಕ್ಷಿಸಲು ರಾಜ್ಯ ಸರಕಾರ ಸಮರೋಪಾದಿಯಲ್ಲಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಡಪಕ್ಷಗಳು ಆಗ್ರಹಿಸುತ್ತವೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದ ಅತೃಪ್ತ ಜನತೆ ಬೀದಿಗಿಳಿಯುವುದು ಅನಿವಾರ್ಯವಾಗುತ್ತದೆಂದು ಹೇಳಲು ಇಚ್ಛಿಸುತ್ತವೆ:

**ಹಕ್ಕೊತ್ತಾಯಗಳು:**

1) ರಾಜ್ಯದಲ್ಲಿ ಆಮ್ಲಜನಕದ ಕೊರತೆಯನ್ನು ನೀಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ರಾಜ್ಯದ ಉತ್ಪಾದನೆ ಕೊರತೆಯಾದರೆ ಕೇಂದ್ರವನ್ನು ಆಗ್ರಹಿಸಬೇಕು.
2) ಆರ್‌ಟಿ–ಪಿಸಿಆರ್ ಪರೀಕ್ಷೆಯ ವರದಿಯನ್ನು ಒಂದೇ ದಿನದಲ್ಲಿ ದೊರಕಿಸಿ, ಅದಕ್ಕೆ ಬೇಕಾದ ಪರಿಕರಗಳು ಮತ್ತು ಸಿಬ್ಬಂದಿಯನ್ನು ಒದಗಿಸಿ. ಸೋಂಕಿತರ ಪತ್ತೆ ಮತ್ತು ಐಸೋಲೇಷನ್ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು.
3) ಹೋಂ ಐಸೋಲೇಷನ್‌ನಲ್ಲಿರುವ ರೋಗಿಗಳಿಗೆ ಹಿಂದಿನಂತೆ ಅಗತ್ಯ ಔಷಧಿಗಳನ್ನು ಉಚಿತವಾಗಿ ಒದಗಿಸಬೇಕು.
4) ಐಸಿಯು, ವೆಂಟಿಲೇಟರ್ ಹಾಸಿಗೆಗಳ ಕೊರತೆಯಿಂದ ಸಾವು ಸಂಭವಿಸುತ್ತಿದೆ. ತಾಲೂಕುಗಳಲ್ಲಿ ವೆಂಟಿಲೇಟರ್‌ಗಳ ಕೊರತೆ, ಅವುಗಳ ಬಳಕೆಗೆ ತಜ್ಞರ ಕೊರತೆ ಕಾಡುತ್ತಿದೆ. ಇವುಗಳನ್ನು ಈ ಕೂಡಲೇ ಸರಿಪಡಿಸಬೇಕು.
5) ತಕ್ಷಣವೇ ಸಮರ್ಪಕ ಪ್ರಮಾಣದಲ್ಲಿ ಆಸ್ಪತ್ರೆ ಹಾಸಿಗೆಗಳು, ವೆಂಟಿಲೇಟರುಗಳು, ಐಸಿಯು ಹಾಸಿಗೆಗಳು, ಮತ್ತು ವೈರಾಣು ವಿರೋಧಿ ಔಷಧಿಗಳು ಮತ್ತು ಲಸಿಕೆಗಳ ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಸೋಂಕು ತ್ವರಿತವಾಗಿ ಹರಡುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ ಇವುಗಳು ಸಿಗುವಂತೆ ಮಾಡಬೇಕು.
6) ಸರ್ಕಾರಿ ಆಸ್ಪತ್ರೆಗಳಲ್ಲಿ ಬೈಪಾಪ ಯಂತ್ರ, ನಾನ್ ಇನ್ವೇಸಿವ್ ವೆಂಟಿಲೇಟರ್‌ಗಳ ಸಂಖ್ಯೆಯನ್ನು ಹೆಚ್ಚಿಸಿದರೆ ರೋಗಿಗಳಿಗೂ ಉತ್ತಮ, ಆಮ್ಲಜನಕದ ಬಳಕೆ ಕಡಿಮೆಯಾಗಬಹುದು, ಇದನ್ನು ಅಳವಡಿಸಬೇಕು.
7) ಹಾಸಿಗೆಗಳ ಲಭ್ಯತೆಯ ಮಾಹಿತಿಯ ಕೊರತೆಯಿಂದಾಗಿ ರೋಗಿಗಳು ಅಲೆದಾಡುವುದನ್ನು ತಪ್ಪಿಸಲು ಪ್ರತಿ ಜಿಲ್ಲೆಯಲ್ಲಿ ಕೇಂದ್ರೀಕೃತ ವ್ಯವಸ್ಥೆ ಬೇಕು. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳ ಮಾಹಿತಿಯನ್ನು ನೀಡುವ ವೆಬ್ ಪೋರ್ಟಲ್ ಸಿದ್ಧಪಡಿಸಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದ ರೋಗಿಗಳನ್ನು ದಾಖಲಿಸಲು ಕೆಲವೊಮ್ಮೆ ನಿರಾಕರಿಸುತ್ತಿದ್ದು, ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಬೇಕು.
8) ಕೋವಿಡ್ ಪರೀಕ್ಷೆಯಲ್ಲಿ ನೆಗೆಟಿವ್ ಬಂದು, ಗಂಭೀರ ರೋಗ ಲಕ್ಷಣಗಳು ಇರುವವರಿಗೆ ಚಿಕಿತ್ಸೆ ದೊರಕುವುದು ಕಷ್ಟವಾಗುತ್ತಿದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.
9) ಆಮ್ಲಜನಕ ವ್ಯವಸ್ಥೆ ಇರುವ ಕೋವಿಡ್ ಅಂಬುಲೆನ್ಸ್‌ಗಳ ಕೊರತೆಯನ್ನು ನೀಗಿಸಬೇಕು.
10) ಕೋವಿಡ್ ಸೆಂಟರ್‌ಗಳಾಗಿ ಕೆಲಸ ಮಾಡುವ ಖಾಸಗಿ ಆಸ್ಪತ್ರೆಗಳಿಗೂ ಸರ್ಕಾರದ ನಡುವೆ ಸಮನ್ವಯ ಬೇಕು. ಅಲ್ಲಿರುವ ಸೋಂಕಿತರ ಪರಿಸ್ಥಿತಿ ಗಂಭೀರವಾದಾಗ ಅವರು ಕೈಚೆಲ್ಲುತ್ತಾರೆ. ಚಿಕಿತ್ಸೆ ನೀಡುವ ಖಾಸಗಿ ಆಸ್ಪತ್ರೆಗಳಲ್ಲಿ ರೆಮ್ಡಿಸಿವಿರ್ ಖಾತ್ರಿಪಡಿಸಬೇಕು.
11) ಆರ್‌ಟಿ–ಪಿಸಿಆರ್ ವರದಿ ಇಲ್ಲದ ಗಂಭೀರ (ಹೃದಯಾಘಾತ, ಪಾರ್ಶ್ವವಾಯು, ಕ್ಯಾನ್ಸರ್ ಇತ್ಯಾದಿ) ರೋಗಿಗಳಿಗೆ ತುರ್ತುಚಿಕಿತ್ಸೆ ಪಡೆಯುವುದೂ ಕಷ್ಟವಾಗುತ್ತಿದ್ದು, ಈ ಕುರಿತು ಒಂದು ಸರಿಯಾದ ನೀತಿ ರೂಪಿಸಬೇಕು.
12) ತಜ್ಞ ವೈದ್ಯರು, ದಾದಿಯರು, ಲ್ಯಾಬ್ ತಂತ್ರಜ್ಞರು, ಬಯೋ ಮೆಡಿಕಲ್ ಇಂಜಿನಿಯರುಗಳು ಮುಂತಾದ ಪರಿಣಿತ ಸಿಬ್ಬಂದಿಯ ತೀವ್ರ ಕೊರತೆ ಇದ್ದು ಇವರ ನೇಮಕಾತಿಗೆ ತಕ್ಷಣ ಕ್ರಮಕೈಗೊಳ್ಳಬೇಕು.
13) ಆವಶ್ಯಕ ಔಷಧಿಗಳ ಮತ್ತು ಆಮ್ಲಜನಕಗಳ ಬೆಲೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು ಮತ್ತು ಅವುಗಳ ಕಳ್ಳ ದಾಸ್ತಾನು ಹಾಗೂ ಕಾಳಸಂತೆಯನ್ನು ನಿಗ್ರಹಿಸಬೇಕು.
14) ಲಸಿಕೆಗಳನ್ನೂ, ಜೀವ ಉಳಿಸುವ ಔಷಧಿಗಳನ್ನು ತಯಾರಿಸಬಲ್ಲ ಸಾಮರ್ಥ್ಯ–ಸೌಕರ್ಯಗಳು ಇರುವ ಎಲ್ಲರೂ ಉತ್ಪಾದಿಸಲು ಸಾಧ್ಯವಾಗುವಂತೆ ಕಾಯ್ದೆಯ ‘ಕಡ್ಡಾಯ ಲೈಸೆನ್ಸಿಂಗ್’ ಉಪಬಂಧವನ್ನು ಬಳಸಿಕೊಳ್ಳಬೇಕು.
15) ಪರಿಸ್ಥಿತಿ ಕೈಮೀರಿಹೋದಲ್ಲಿ ಖಾಸಗಿ ಆಸ್ಪತ್ರೆಗಳನ್ನು ಸರ್ಕಾರದ ವಶಕ್ಕೆ ಪಡೆದು ನಿರ್ವಹಿಸಲು ಮುಂದಾಗಬೇಕು.
16) ಮೃತರ ಗೌರವಯುತ ಅಂತ್ಯಸಂಸ್ಕಾರಕ್ಕೆ ಬೇಕಾದ ಪೂರ್ವತಯಾರಿ ಮಾಡಿಕೊಳ್ಳಬೇಕು.
17) ಉಚಿತ ಸಾರ್ವತ್ರಿಕ ಲಸಿಕೀಕರಣ ಕಾರ್ಯವನ್ನು ಆರಂಭಿಸಿ ಶೀಘ್ರವಾಗಿ ಪೂರೈಸಬೇಕು.
18) ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೆ 10,000 ರೂಪಾಯಿಗಳನ್ನು ಪ್ರತಿ ತಿಂಗಳು ನೀಡಬೇಕು ಮತ್ತು ಎಲ್ಲರಿಗೆ ಉಚಿತ ಆಹಾರಧಾನ್ಯಗಳ ಕಿಟ್‌ಗಳ ವಿತರಣೆಯನ್ನು ಮಾಡಬೇಕು.
19) ಹಾಸಿಗೆ ಮೀಸಲಿಡುವಿಕೆ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸಬೇಕು.

## ಆರೋಗ್ಯ ಇಲಾಖೆ ಹಾಗೂ ಸಾರ್ವಜನಿಕ...... ಪುಟ 3 ರಿಂದ

ಮಾನದವರಿಗೆ ಕೇಂದ್ರ ಸರಕಾರ ಉಚಿತವಾಗಿ ಲಸಿಕೆಯನ್ನು ಒದಗಿಸಬೇಕು.

ಔಷದಿಗಳ ಹಾಗೂ ಬೆಡ್‌ಗಳ ಕಾಳಸಂತೆಯನ್ನು ತಡೆಯಲು ಕಠಿಣ ಕ್ರಮವಹಿಸಬೇಕು. ಇವುಗಳ ಲಭ್ಯತೆಯ ಪರಿಸ್ಥಿತಿಯ ಮಾಹಿತಿ ರಾಜ್ಯದಾದ್ಯಂತ ಸಾಮಾನ್ಯರಿಗೆ ಆನ್ ಲೈನ್ ಹಾಗೂ ಮತ್ತಿತರೆಡೆ ತಿಳಿಯುವಂತೆ ಅಗತ್ಯ ಪಾರದರ್ಶಕತೆಗೆ ಕ್ರಮವಹಿಸಬೇಕು.

ಈ ಅಪಾರಾಧಧ ದಂಧೆಯಲ್ಲಿ ಪಾಲ್ಗೊಂಡವರನ್ನು ಶಿಕ್ಷಿಸಲು ತನಿಖೆಗೆ ಕ್ರಮವಹಿಸಬೇಕು. ಸದರಿ ಸಂದರ್ಭವನ್ನು ಕೋಮುವಾದಕ್ಕೆ ಬಳಸಿ ವಿಭಜನೆಗೆ ಕ್ರಮ ವಹಿಸುವ ಎಲ್ಲರ ಮೇಲೆ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.

3) ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲಾ ಕುಟುಂಬಗಳಿಗೆ ಮತ್ತು ದೇವದಾಸಿ ಮಹಿಳೆಯರ ಕುಟುಂಬಗಳಿಗೆ ಮಾಸಿಕ10,000 ರೂಗಳ ನೆರವು ಒದಗಿಸಬೇಕು. ಈ ಎಲ್ಲರಿಗೆ ತಲಾ 10 ಕೇಜಿ ಸಮಗ್ರ ಆಹಾರಧಾನ್ಯಗಳನ್ನು ಮತ್ತು ಕೋವಿಡ್ ಸುರಕ್ಷಿತ ಕ್ರಮಗಳನ್ನು ಕೋವಿಡ್ ನಿಯಂತ್ರಣಕ್ಕೆ ಬಂದು ಜನ ಜೀವನ ಸಾಮಾನ್ಯ ಸ್ಥಿತಿಗೆ ಮರಳುವವರೆಗೆ ಒದಗಿಸಬೇಕು. ನ್ಯಾಯಬೆಲೆ ಅಂಗಡಿಗಳ ಬಿಪಿಎಲ್ ಕಾರ್ಡದಾರರ ತಲಾ ಪಡಿತರವನ್ನು 2 ಕೇಜಿಗೆ ಕಡಿತ ಮಾಡಿರುವುದನ್ನು ವಾಪಾಸು ಪಡೆಯಬೇಕು.

ಎಲ್ಲಾ ಸಾಮಾಜಿಕ ಪಿಂಚಣಿದಾರರ ಬಾಕಿ ಪಿಂಚಣಿಯನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಈ ಮಾಸಿಕ ಸಹಾಯಧನವನ್ನು ಕನಿಷ್ಠ 3,000 ರೂಗಳಿಗೆ ಹೆಚ್ಚಿಸಬೇಕು.

4) ಉದ್ಯೋಗ ಖಾತ್ರಿ ಕೆಲಸವನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಕನಿಷ್ಠ 200 ದಿನಗಳ ಕಾಲ ಕನಿಷ್ಠ 424 ರೂಗಳ ಕೂಲಿಯಂತೆ ಕೋವಿಡ್ ಸುರಕ್ಷತೆಯೊಂದಿಗೆ ಜಾರಿಗೊಳಿಸಲು ಕ್ರಮ ವಹಿಸಬೇಕು. ಅಗತ್ಯ ಹಣಕಾಸು ಒದಗಿಸಬೇಕು.
5) ರೈತರ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ನೀಡಿ ಸರಕಾರವೇ ನೇರವಾಗಿ ಖರೀದಿಸಬೇಕು. ರಸಾಯನಿಕ ಗೊಬ್ಬರಗಳ ಬೆಲೆ ಏರಿಕೆಯ ಪ್ರಸ್ತಾಪವನ್ನು ವಾಪಾಸಾಗುವಂತೆ ಕ್ರಮವಹಿಸಬೇಕು.
6) ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಉತ್ಪಾದಕ ಘಟಕಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಕಾರ್ಮಿಕರಿಗೆ ವೇತನ ಸಹಿತ ರಜೆ ಘೋಷಿಸಬೇಕು. ಅಗತ್ಯ ಸೇವೆಯಲ್ಲೂ ಶೇ.50 ರಷ್ಟು ಸಿಬ್ಬಂದಿಯನ್ನು ಸುರಕ್ಷತಾ ಕ್ರಮಗಳೊಂದಿಗೆ .ಬಳಸಬೇಕು
7) ವೃದ್ಧರು ಅಂಗವಿಕಲರು, ಒಂಟಿ ಜೀವನ ನಡೆಸುವ ಅಸಹಾಯಕರುಗಳನ್ನು ಗುರುತಿಸಿ ಅವರಿಗೆ ನೇರ ಊಟದ ಪಾಕೇಟ್ ಗಳನ್ನು ವಹಿಸಲು ಕ್ರಮ ಕೈಗೊಳ್ಳಬೇಕು.
8) ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲಾ ಕುಟುಂಬಗಳ ಎಲ್ಲ ರೀತಿಯ ಸಾಲಗಳನ್ನು ಕೂಡಲೇ ಮನ್ನಾ ಮಾಡಬೇಕು.
9) ಕೋವಿಡ್ ಮರಣಗಳಿಗೆ ಕನಿಷ್ಠ 10 ಲಕ್ಷ ರೂಗಳ ಪರಿಹಾರವನ್ನು ಘೋಷಿಸಬೇಕು.

## ಬೆಡ್ ಮತ್ತಿತರೇ ವಿಚಾರಗಳ ಕಾಳ ಸಂತೆ ಹಗರಣಗಳನ್ನು ನ್ಯಾಯಾಂಗ ತನಿಖೆಗೊಳಪಡಿಸಲು ಮತ್ತು ಕೋಮು ವಿಭಜನೆಯ ತಂತ್ರದ ಮೂಲಕ ತನಿಖೆಯ ಜಾಡು ತಪ್ಪಿಸಲು ಯತ್ನಿಸಿದ ಚುನಾಯಿತ ಪ್ರತಿನಿಧಿಗಳ ಮೇಲೆ ಕಾನೂನಿನ ಕ್ರಮವಹಿಸಲು ಸಿಪಿಐಎಂ ಒತ್ತಾಯ



ರಾಜ್ಯದಲ್ಲಿ ಎರಡನೇ ಕೋವಿಡ್ ಅಲೆ ವ್ಯಾಪಕ ಗೊಳ್ಳುತ್ತಿರುವಾಗ ಸರಕಾರ ಮುಂಜಾಗ್ರತಾ ಕ್ರಮಗಳನ್ನು ವಹಿಸುವಲ್ಲಿ ಪಾತಕ ನಿರ್ಲಕ್ಷ್ಯ ವಹಿಸುದುದರಿಂದ ಕೋವಿಡ್ ಬಾಧಿತರು ಮತ್ತು ಅವರ ಕುಟುಂಬಗಳು ತೀವ್ರ ರೀತಿಯಲ್ಲಿ ಪರಿತಪಿಸುವಂತಾಯಿತು. ಅನೇಕರಿಗೆ, ಆಸ್ಪತ್ರೆಗಳ ಬೆಡ್ ಗಳು, ಆಮ್ಲಜನಕ, ವೆಂಟಿಲೇಟರ್, ಔಷಧಿಗಳು ದೊರೆಯದೇ ಅವರು ಬೀದಿಗಳಲ್ಲಿ, ಅಂಬುಲೆನ್ಸಗಳಲ್ಲಿಯೇ ಸಾವಿಗೀಡಾಗುವ ದುರಂತ ಸಂಭವಿಸಿತು. ಇದನ್ನು ರಾಜ್ಯದ ಜನತೆ ಗಮನಿಸಿದೆ.

ಇದಕ್ಕೆ ಪ್ರಮುಖವಾದ ಕಾರಣಗಳು ಎರಡು, ಮೊದಲನೆಯದು, ಸರಕಾರ ತಜ್ಞರ ಮುನ್ಸೂಚನೆಯ ವರದಿಯಂತೆ ಕೋವಿಡ್ ಎರಡನೇ ಅಲೆಯನ್ನು ನಿರೀಕ್ಷಿಸಿ ಅದನ್ನು ಪರಿಣಾಮಕಾರಿಯಾಗಿ ಎದುರಿಸಲು ಅಗತ್ಯ ಸಿದ್ದತೆ, ವ್ಯವಸ್ಥೆಗೆ ಕ್ರಮ ವಹಿಸದಿರುವುದಾದರೇ, ಎರಡನೇಯದು, ಕೋವಿಡ್ ಬಾಧಿತರ ಪ್ರಮಾಣವು ದಿನದಿನಕ್ಕೆ ಹೆಚ್ಚುತ್ತಿರುವುದರಿಂದ ಆಸ್ಪತ್ರೆಗಳು ಮತ್ತು ಮೆಡಿಕಲ್ ಹಾಗೂ ಆಮ್ಲಜನಕ ವ್ಯವಹಾರಿಗಳು, ಒಂದೆಡೆ ಬೆಡ್ ಗಳನ್ನು ಮತ್ತೊಂದೆಡೆ ಔಷಧಿ ಮೆಡಿಕಲ್ ಆಮ್ಲಜನಕವನ್ನು ಮತ್ತು ಲಸಿಕೆಗಳ ಕೃತಕ ಅಭಾವ ಸೃಷ್ಟಿ ಮಾಡಿ, ಲೂಟಿಗೆ ಮುಂದಾದ ಲೂಟಿಕೋರ ಕಾಳ ಸಂತೆಯಾಗಿದೆ. ರಾಜ್ಯದ ಜನರು ಈ ರೀತಿಯಲ್ಲಿ ಧಾರುಣ ಸಾವುಗಳಿಗೆ ತುತ್ತಾಗುತ್ತಿರುವಾಗ ಸರಕಾರ ಅದನ್ನು ವ್ಯಾಪಕವಾಗಿ ತಡೆಯಲು ಅಗತ್ಯ ಕ್ರಮಗಳಿಗೆ ಮುಂದಾಗದಿರುವುದು ಕಾರಣವಾಗಿದೆ.

ಇದು ಬಹು ದೊಡ್ಡ ಕೊಲೆಗಡುಕ ಅಪರಾಧವಾಗಿದೆ. ಪ್ರಜೆಗಳನ್ನು ಕೊಲ್ಲುವ ಇಂತಹ ನೀಚ ಹಾಗೂ ಕೊಲೆಗಡುಕ ಅಪರಾಧ ಮತ್ತು ಸರಕಾರದ ಪಾತಕ ನಿರ್ಲಕ್ಷ್ಯವನ್ನು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಅತ್ಯಂತ ಉಗ್ರವಾಗಿ ಖಂಡಿಸುತ್ತದೆ.

ಸಾವಿರಾರು ಅಮಾಯಕ ನಾಗರೀಕರ ಸಾವಿಗೆ ಕಾರಣವಾದ ಈ ಬೆಡ್ ಗಳ, ಆಮ್ಲಜನಕ ಹಾಗೂ ಔಷಧಿ ಮತ್ತು ಲಸಿಕೆಗಳ ಅಭಾವ ಉಂಟುಮಾಡಿ ಲೂಟಿ ಮಾಡಲು ಮುಂದಾದ ಈ ಕಾಳ ಸಂತೆಯನ್ನು ಅಮೂಲಾಗ್ರವಾಗಿ ಪರಿಶೋಧಿಸಿ ಇವುಗಳ ಹಿಂದಿನ ಅಪರಾಧಿ ಶಕ್ತಿಗಳನ್ನು ಮತ್ತು ಜನತೆಯ ಮುಂದೆ ತೆರೆದಿಡಲು, ಉನ್ನತ ಮಟ್ಟದ ಸ್ವತಂತ್ರ ನ್ಯಾಯಾಂಗ ತನಿಖೆಯನ್ನು ನಡೆಸಲು ಅಗತ್ಯ ಕ್ರಮವಹಿಸಬೇಕೆಂದು ಮುಖ್ಯಮಂತ್ರಿಗಳನ್ನು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸುತ್ತದೆ.

ಸರಕಾರದ ಬಹುದೊಡ್ಡ ಪಾತಕ ನಿರ್ಲಕ್ಷ್ಯವು, ಕಾಳ ಸಂತೆಗೆ ಅಪ್ರತ್ಯಕ್ಷ ಬೆಂಬಲವು ಇದರಲ್ಲಿರುವುದರಿಂದ ಅಧಿಕಾರಿಗಳ ಮಟ್ಟದ ತನಿಖೆ ಖಂಡಿತಾ ಇಂತಹ ಪಾತಕ ದುಷ್ಕೃತ್ಯವನ್ನು ಬಯಲುಗೆಳೆಯಲಾರದಾದುದರಿಂದ ಉನ್ನತ ಮಟ್ಟದ ಸ್ವತಂತ್ರ ನ್ಯಾಯಾಂಗ ತನಿಖೆಯ ಅಗತ್ಯವಿದೆಯೆಂದು ಸಿಪಿಐ(ಎಂ) ವಿವರಿಸಿದೆ.

ಕೋವಿಡ್ ಎರಡನೇ ಧಾಳಿಯ ಪ್ರಕೃತಿ ವಿಕೋಪದ ಅಲೆಯನ್ನು ಕೇವಲ ರಾಜ್ಯ ಸರಕಾರ ಮಾತ್ರವಲ್ಲಾ ಇಡೀ ರಾಜ್ಯದ ನಾಗರೀಕರು, ರೈತರು, ಕಾರ್ಮಿಕರನ್ನು ಒಳಗೊಂಡು ಬಲವಾದ ಒಕ್ಕೊರಲಿನ ಐಕ್ಯತೆಯಿಂದ ಎದುರಿಸಲು ಅಗತ್ಯ ಕ್ರಮ ವಹಿಸಬೇಕೆಂದು ರಾಜ್ಯ ಸರಕಾರವನ್ನು ಕೋವಿಡ್ ಮೊದಲ ಅಲೆಯಿಂದಲೂ ನಿರಂತರವಾಗಿ ಸಿಪಿಐಎಂ ಒತ್ತಾಯಿಸುತ್ತಲೇ ಬರುತ್ತಿದೆ. ಆದರೇ ಸರಕಾರ ಈ ಕುರಿತು ಕಿಂಚಿತ್ತೂ ಕ್ರಮ ವಹಿಸುತ್ತಿಲ್ಲ.

ಬದಲಿಗೆ, ಆಡಳಿತ ಪಕ್ಷದ ಸಂಸದ ಹಾಗೂ ಶಾಸಕರುಗಳು ಕೋಮು ಆಧಾರದಲ್ಲಿ ಜನತೆಯನ್ನು ವಿಭಜಿಸಿ ಜನರ ಗಮನವನ್ನು ಬೇರೆಡೆ ಸೆಳೆದು, ಕೋವಿಡ್ ನಿಭಾಯಿಸುವಲ್ಲಿ ಸರಕಾರದ ಪಾತಕ ಉಪೇಕ್ಷೆಯನ್ನು ಮತ್ತು ಕಾಳಸಂತೆಯ ದಂಧೆಯನ್ನು ಮುಚ್ಚಿ ಹಾಕುವ ಹಾಗೂ ತನಿಖೆಯ ಜಾಡಿನ ದಿಕ್ಕು ತಪ್ಪಿಸುವ ದುಷ್ಕೃತ್ಯದಲ್ಲಿ ತೊಡಗಿರುವುದನ್ನು ಕಣ್ಣು ಮುಚ್ಚಿಕೊಂಡು ಗಮನಿಸುತ್ತದೆ. ಚುನಾಯಿತ ಪ್ರತಿನಿಧಿಗಳ ಇಂತಹ ದುರ್ನಡೆಯನ್ನು ಸಿಪಿಐಎಂ ಬಲವಾಗಿ ಖಂಡಿಸುತ್ತದೆ.

ಇಂತಹ ದುಷ್ಕೃತ್ಯವನ್ನು ಬಲವಾಗಿ ವಿರೋಧಿಸಿ, ಇವರ ಮೇಲೆ ಅಗತ್ಯ ಕಠಿಣ ಕಾನೂನಿನ ಕ್ರಮಗಳನ್ನು ಕೈಗೊಳ್ಳುವ ಬದಲು, ಅಂತಹ ದುಷ್ಠ ಸಂಚುಗಳಿಗೆ ಮೌನ ಸಮ್ಮತಿಯನ್ನು ನೀಡಿ, ನೆರವಾಗುವಂತೆ ರಾಜ್ಯ ಸರಕಾರ ನಡೆದುಕೊಳ್ಳುತ್ತಿರುವುದು ತೀವ್ರ ಕಳವಳಕಾರಿಯಾದ ಸಂಗತಿಯಾಗಿದೆ. ಇದು, ರಾಜ್ಯ ಸರಕಾರಕ್ಕೆ ಪಾತಕ ಕಾಳಸಂತೆಯನ್ನು ನಿಗ್ರಹಿಸಲು ಮತ್ತು ಜನತೆಯನ್ನು ರಕ್ಷಿಸಲು ನಿಜವಾದ ಖಾಳಜಿ ಇಲ್ಲವೆಂಬುದನ್ನು ಎತ್ತಿ ತೋರಿಸುತ್ತದೆ.

ರಾಜ್ಯ ಸರಕಾರ, ಈ ಕೂಡಲೇ ಜನತೆಯನ್ನು ಕೋಮು ಆಧಾರದಲ್ಲಿ ವಿಭಜಿಸುವ ದುಷ್ಟ ತಂತ್ರವನ್ನು ಹೆಣೆದ ಇವರ ಮೇಲೆ ಕಠಿಣ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಸಿಪಿಐಎಂ ಒತ್ತಾಯಿಸುತ್ತದೆ.

## ಕೋವಿಡ್-19 ರ ವಿಮಾ ರಕ್ಷಣೆ ಮತ್ತು ಪರಿಹಾರ ಮನವಿ

ರಾಜ್ಯದ ಲಕ್ಷಾಂತರ ಸಾರ್ವಜನಿಕ ಹಾಗೂ ಸಮುದಾಯಗಳ ಮಸಣಗಳಲ್ಲಿ ಬರುವ ನಾಗರೀಕರ ಮೃತ ದೇಹಗಳನ್ನು ಕುಣಿ ಅಗೆದು ಹೂಳುವ ಮತ್ತು ಚಿತೆಗಳನ್ನು ಸಿದ್ದಪಡಿಸುವ ಕೆಲಸದಲ್ಲಿ ಸಾವಿರಾರು ವರ್ಷಗಳಿಂದ ನಮ್ಮನ್ನು ಇದಕ್ಕಾಗಿಯೇ ಸಮರ್ಪಿಸಿಕೊಂಡಿದ್ದೇವೆ. ಸಮಾಜ ನಮ್ಮನ್ನು ಬಹುತೇಕ ಬಿಟ್ಟಿ ಚಾಕರಿಗಾಗಿ ಬಲವಂತವಾಗಿ ಇದರಲ್ಲಿ ತೊಡಗಿಸಿಕೊಂಡಿದೆ. ನಮ್ಮಲ್ಲಿ ಬಹುತೇಕರು, ಅಸ್ಪೃಶ್ಯ ರು ಮತ್ತು ಪರಿಶಿಷ್ಟ ಸಮುದಾಯಕ್ಕೆ ಸೇರಿದವರಾಗಿದ್ದೇವೆ. ಆದಾಗಲೂ ನಮ್ಮ ಈ ಸಾರ್ವಜನಿಕ ಸೇವೆಯನ್ನು ಇದುವರೆಗೆ ಎಲ್ಲಾ ಸರಕಾರಗಳು ಸಾರ್ವಜನಿಕ ಸೇವೆಯೆಂದು ಪರಿಗಣಿಸದೇ ಉಪೇಕ್ಷಿಸಿವೆ. ನಾವು ಹಲವು ಬಾರಿ ಈ ಕುರಿತು ಮನವಿ ಮಾಡಿದ್ದೇವೆ ಹಾಗೂ ಪ್ರತಿಭಟನೆಗಳನ್ನು ನಡೆಸಿದ್ದೇವೆ. ಆದಾಗಲೂ, ಬಹುತೇಕ ಯಾವುದೇ ಸ್ಥಳೀಯ ಸಂಸ್ಥೆಗಳು ನಮ್ಮನ್ನು ತಮ್ಮ ಸಾರ್ವಜನಿಕ ಸೇವಕರೆಂದು ನೇಮಿಸಿಕೊಳ್ಳಲಿಲ್ಲ. ಕೇವಲ ಮಹಾನಗರ ಪಾಲಿಕೆಗಳ ಒಂದೆರಡು ಕಡೆ, ಬಿಬಿಎಂಪಿಯ ಚಿತಾಗಾರ ಮತ್ತಿತರೇ ಮಸಣಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೈ ಬೆರಳೆಣಿಕೆಯ ಕೆಲವರನ್ನು ನೇಮಿಸಿಕೊಳ್ಳಲಾಗಿದೆ ಎನ್ನಲಾಗಿದೆ. ಹೀಗಾಗಿ, ಈಗಲೂ ನಾವು ಬಹುತೇಕ ಬಿಟ್ಟಿಯಾಗಿ ದುಡಿಯುತ್ತಿದ್ದೇವೆ. ನಮಗೆಂದು ನಮ್ಮ ರಕ್ಷಣೆಗೆಂದು ಇದುವರೆಗೆ ಯಾವುದೇ ಕಾನೂನುಗಳನ್ನು ರೂಪಿಸಿಲ್ಲ.

ಇದೀಗ ರಾಜ್ಯವು ವ್ಯಾಪಕವಾಗಿ ಎರಡನೇ ಕೋವಿಡ್ ಅಲೆಗೆ ಸಿಲುಕಿದೆ. ಬಹುತೇಕರಿಗೆ ಆಸ್ಪತ್ರೆಗಳಲ್ಲಿ ಸೇರಲು ಅವಕಾಶವಿಲ್ಲ. ಮಾತ್ರವಲ್ಲಾ, ಕೋವಿಡ್ ಸೋಂಕಿತರು ಅಲ್ಲಲ್ಲೇ ಸ್ಥಳೀಯವಾಗಿ ಲಭ್ಯವಿರುವ ವೈದ್ಯರು, ಆರ್ಎಂಪಿಗಳ ಸೇವೆ ಪಡೆಯುತ್ತಿದ್ದಾರೆ. ಉಲ್ಬಣಗೊಂಡು ಸಾವಿಗೀಡಾಗುತ್ತಾರೆ. ಆದರೇ ಅವರು ಕೋವಿಡ್ ರೋಗಿಗಳೆಂದು ತಿಳಿಯುವುದೇ ಇಲ್ಲ. ಇಂತಹ ಎಲ್ಲ ನಾಗರೀಕರ ಶವಗಳನ್ನು ನಾವು ಹೂಳಬೇಕಾಗಿದೆ. ನಮಗ್ಯಾವ ಸುರಕ್ಷತಾ ಕ್ರಮಗಳಿಲ್ಲವಾಗಿದೆ.

ಹೀಗಾಗಿ, ಮೊದಲ ಅಲೆಯಲ್ಲಿ, ಇದೇ ರೀತಿಯ ಕಾರಣದಿಂದ ಹಲವರು ರೋಗ ಬಾಧಿತರಾಗಿ ಸಾವಿಗೀಡಾದುದು ಇದೆ. ಆಗಲೂ ನಾವು ಸರಕಾರವನ್ನು ನಮಗೆ ಸುರಕ್ಷತಾ ವ್ಯವಸ್ಥೆ ಮಾಡಲು ಕೇಳಿದ್ದೆವು. ಯಾವ ಸಹಕಾರವೂ ಸಿಗಲಿಲ್ಲ. ಈಗಲಾದರೂ, ಸರಕಾರ ಗ್ರಾಮೀಣ ಹಾಗೂ ನಗರ ಪ್ರದೇಶದ ನಮ್ಮೆಲ್ಲಾ ಕಾರ್ಮಿಕರಿಗೆ ಸೂಕ್ತ ಸುರಕ್ಷತಾ ಕ್ರಮಗಳನ್ನು ಒದಗಿಸಬೇಕು ಹಾಗೂ ಕೋವಿಡ್ ವಿಮೆಯನ್ನು ಒದಗಿಸಬೇಕು.

ಬಹುತೇಕರು ನಾವು ಅತ್ಯಂತ ಕಡುಬಡತನದಲ್ಲಿ ಜೀವಿಸುವವರಾದ್ದರಿಂದ ಕೋವಿಡ್ ಅವಧಿ ಮುಗಿಯುವವರೆಗೆ ಕೋವಿಡ್ ಹಾಗೂ ಲಾಕ್ ಡೌನ್ ನಿರುದ್ಯೋಗ ನಿವಾರಣೆಗಾಗಿ ನಮ್ಮಗಳಿಗೆ ಪ್ರತಿ ತಿಂಗಳ ಹತ್ತು ಸಾವಿರ ರೂಗಳ ಮಾಸಿಕ ಸಹಾಯಧನವನ್ನು ಮತ್ತು ತಲಾ 10 ಕೇಜಿ ಆಹಾರ ಸಾಮಗ್ರಿಗಳನ್ನು ಒದಗಿಸಲು ಮತ್ತು ನಮ್ಮನ್ನು ಮಸಣಕ್ಕೊಬ್ಬರಂತೆ ಸ್ಥಳೀಯ ಸಂಸ್ಥೆಗಳ ನೌಕರರೆಂದು ನೇಮಿಸಿಕೊಳ್ಳಲು ಮತ್ತು ಶವ ಹೂಳಲು ಕುಣಿ ಅಗೆದು ಮುಚ್ಚುವ ಕೆಲಸವನ್ನು ಉದ್ಯೋಗ ಖಾತ್ರಿ ಕೆಲಸವೆಂದು ಪರಿಗಣಿಸಿ ಪ್ರತಿ ಕುಣಿಗೆ ಕನಿಷ್ಟ 3,000 ರೂ ದೊರೆಯುವಂತೆ ಕ್ರಮವಹಿಸಲು ಮತ್ತು ಮಾಸಿಕ ಪಿಂಚಣಿಯನ್ನು ನಿಗದಿಸಲು ಈ ಮೂಲಕ ಪುನಃ ಒತ್ತಾಯಿಸುವೆವು.

## ಆಮ್ಲಜನಕ ದೊರೆಯದೆ ಉಂಟಾದ ಚಾಮರಾಜನಗರದ ಸಾವುಗಳು ಸರಕಾರದ ದುರಾಡಳಿತಕ್ಕೆ ಹಿಡಿದ ಮತ್ತೊಂದು ಕನ್ನಡಿ

ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ 24 ಘಂಟೆಯಲ್ಲಿ ಆಮ್ಲಜನಕ ದೊರೆಯದೇ 24 ಸಾವುಗಳು ಸಂಭವಿಸಿವೆಯೆಂಬ ಅಘಾತಕಾರಿ ವರದಿ ಬಂದಿದೆ. ಇದು ಸರಕಾರದ ದಿವ್ಯ ನಿರ್ಲಕ್ಷ್ಯ ಮತ್ತು ದುರಾಡಳಿತದ ಫಲವಾಗಿದೆಯೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಇದರಿಂದಾಗಿ ಅಮಾಯಕ ಪ್ರಜೆಗಳು ಸಾವಿಗೀಡಾಗಬೇಕಾಯಿತು ಅದರಿಂದಾಗಿ ಆ ಕುಟುಂಬಗಳು ತೀವ್ರ ದುಃಖವನ್ನು ಅನುಭವಿಸ ಬೇಕಾಗಿ ಬಂದಿತು. ಈ ಸಾವುಗಳಿಗೆ ಸರಕಾರವೇ ನೇರ ಹೊಣೆಗಾರನಾಗಿದೆ.

ಉನ್ನತ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ತನಿಖೆ ನಡೆಸುವುದಾಗಿ ಸರಕಾರ ಹೇಳಿರುವುದು ತನ್ನ ಹೊಣೆಗಾರಿಕೆಯನ್ನು ಮುಚ್ಚಿಟ್ಟು ಕೊಳ್ಳುವ ದುರುಳ ತಂತ್ರವಾಗಿದೆ. ತಕ್ಷಣವೇ, ಸದರಿ ಪ್ರಕರಣವನ್ನು ಸ್ವತಂತ್ರವಾದ ಉನ್ನತ ನ್ಯಾಯಾಂಗ ತನಿಖೆಗೊಳಪಡಿಸಲು ಮತ್ತು ಆ ಮೂಲಕ ನಿಜವಾದ ಅಪರಾಧಿಗಳನ್ನು ಶಿಕ್ಷಿಸಲು ಅಗತ್ಯ ಕ್ರಮ ವಹಿಸಬೇಕೆಂದು ಸಿಪಿಐಎಂ ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸಿದೆ.

ಅದೇ ರೀತಿ, ಸಾವಿಗೀಡಾದ ನಾಗರೀಕರ ಕುಟುಂಬಗಳಿಗೆ ತೀವ್ರ ಸಂತಾಪವನ್ನು ಸಿಪಿಐ(ಎಂ) ವ್ಯಕ್ತ ಪಡಿಸುತ್ತದೆ. ಸದರಿ ಕುಟುಂಬಗಳಿಗೆ ತಕ್ಷಣವೇ, ರಾಜ್ಯ ಸರಕಾರ 10 ಲಕ್ಷ ರೂ. ಗಳ ಪರಿಹಾರವನ್ನು ನೀಡುವಂತೆ ಒತ್ತಾಯಿಸಿದೆ

## ಲೂಟಿಕೋರ ಕಾರ್ಪೋರೇಟ್ ಪರ, ಕಾರ್ಮಿಕ ವಿರೋಧಿ, ಕಾರ್ಮಿಕ ಸಂಹಿತೆಗಳ ಜಾರಿಯ ಎಲ್ಲ ಕ್ರಮಗಳನ್ನು ನಿಲ್ಲಿಸಲು ಸಿಪಿಐ(ಎಂ) ಒತ್ತಾಯ

ಇವರಿಗೆ,  
ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪರವರು  
ಮುಖ್ಯಮಂತ್ರಿಗಳು,

ಮಾನ್ಯರೇ,

ಕರ್ನಾಟಕ ರಾಜ್ಯ ಕೋವಿಡ್ – 19 ರಿಂದ ತೀವ್ರವಾಗಿ ಬಾಧೆಗೊಳಗಾಗಿರುವುದು ಮತ್ತು ರಾಜ್ಯದಲ್ಲಿ ಕೋವಿಡ್ – 19 ರ ತುರ್ತು ಪರಿಸ್ಥಿತಿ ಇರುವುದು ತಮಗೆ ತಿಳಿದಿದೆ. ಇಂತಹ ಸಂದರ್ಭದಲ್ಲಿ ರಾಜ್ಯದ ಎಲ್ಲ ಸಂಪನ್ಮೂಲ ಹಾಗೂ ಶಕ್ತಿಗಳನ್ನು ಬಳಸಿ ಅದನ್ನು ಎದುರಿಸ ಬೇಕಾದ ಸರಕಾರ, ತನ್ನ ಆಡಳಿತಾಧಿಕಾರಿಗಳನ್ನು ಕಾರ್ಪೋರೇಟ್ ಕಂಪನಿಗಳ ಲೂಟಿ ಬಲಪಡಿಸಲು ಬೇಕಾದ ಕೆಲಸಕ್ಕೆ, ಕಾರ್ಮಿಕ ಸಂಹಿತೆಗಳ ನಿಯಮಾವಳಿ ರಚನೆಗೆ ತೊಡಗಿಸಿಕೊಂಡಿರುವುದು ತೀವ್ರ ಖಂಡನೀಯವಾಗಿದೆ.

ಕೋವಿಡ್ – 19 ನ್ನು ಎದುರಿಸಲು ಕಾರ್ಮಿಕರನ್ನು ಅವರ ಸಂಘಟಿತ ಶಕ್ತಿಯನ್ನು ಬಳಸಿಕೊಳ್ಳ ಬೇಕಾದ ಈ ಸಂದರ್ಭದಲ್ಲಿ, ಕೋವಿಡ್ ಬಾಧೆಯ ಜೊತೆ, ಇದುವರೆಗೆ ಕಾರ್ಮಿಕರು ಸಮರ ಶೀಲ ಹೋರಾಟ ನಡೆಸಿ ಗಳಿಸಿದ ಎಲ್ಲಾ ಹಕ್ಕುಗಳನ್ನು ನಾಶಮಾಡಿ, ಮತ್ತಷ್ಟು ವ್ಯಾಪಕವಾದ ಗುಲಾಮಗಿರಿಗೆ ಅವರನ್ನು ದೂಡುವ ದುರುಳ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುವ ಆತಂಕಗಳನ್ನು ಅವರ ಮೇಲೆ ಬಲವಂತವಾಗಿ ಹೇರಿ, ಬೀದಿಗಿಳಿಯುವಂತೆ ಮಾಡುವುದು ಮತ್ತು ಜನತೆಯ ಸಂಕಷ್ಟದ ಸಮಯವನ್ನು ಈ ರೀತಿ ಕಾರ್ಪೋರೇಟ್ ಲೂಟಿಗಾಗಿ ಬಳಸಿಕೊಳ್ಳುತ್ತಿರುವುದು ತಮ್ಮ ಸರಕಾರದ ಅಮಾನವೀಯ ಕ್ರೌರ್ಯವನ್ನು ತೋರುತ್ತದೆ. ಇದೆಲ್ಲವೂ ಸ್ಪಷ್ಟವಾಗಿ ತಮ್ಮ ಸರಕಾರ ಕಾರ್ಪೋರೇಟ್ ಕಂಪನಿಗಳ ಒತ್ತಡಕ್ಕೆ ಮಣಿಯುತ್ತಿರುವುದನ್ನು ತೋರಿಸುತ್ತದೆ.

ತಕ್ಷಣವೇ, ಲೂಟಿಕೋರರ ಕಾರ್ಮಿಕ ಸಂಹಿತೆಗಳನ್ನು ರಾಜ್ಯದಲ್ಲಿ ಜಾರಿಗೊಳಿಸುವ ಎಲ್ಲಾ ಕ್ರಮಗಳನ್ನು ಕರ್ನಾಟಕ ಸರಕಾರ ಈ ಕೂಡಲೇ ನಿಲ್ಲಿಸಬೇಕೆಂದು ಮತ್ತು ರಾಜ್ಯವನ್ನು ಕೋವಿಡ್ ಸಂಕಟದಿಂದ ಪಾರು ಮಾಡಲು ಎಲ್ಲಾ ಶಕ್ತಿ ಹಾಗೂ ಸಂಪನ್ಮೂಲಗಳನ್ನು ಬಳಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಮತ್ತೊಮ್ಮೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ ) ರಾಜ್ಯ ಸಮಿತಿ ಬಲವಾಗಿ ಆಗ್ರಹಿಸುತ್ತದೆ.

# ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಅದರ ಖಾಸಗೀಕರಣ

ಅತಿಥಿ ಅಂಕಣ



**ಪ್ರೊ. ಟಿ.ಆರ್. ಚಂದ್ರಶೇಖರ**

**ಆರೋಗ್ಯ ಮತ್ತು ವೈದ್ಯಕೀಯ ಸೇವೆಯನ್ನು ಯಾವುದೇ ಕಾರಣಕ್ಕೂ ಖಾಸಗಿ ವಲಯಕ್ಕೆ ನೀಡಬಾರದು. ಇದನ್ನು ಸರ್ಕಾರವು ಆದ್ಯತೆಯ ಮೇಲೆ ನಿರ್ವಹಿಸಬೇಕು. ಇದಕ್ಕೆ ಸಂಪನ್ಮೂಲ ಕೊರತೆಯಾದರೆ ದೇಶ'ದಲ್ಲಿರುವ ನೂರಾರು ಬಿಲಿಯನೇರುಗಳು ಮತ್ತು ಸಾವಿರಾರು ಮಿಲಿಯನೇರುಗಳ ಮೇಲೆ ಮುಲಾಜಿಲ್ಲದೆ ತೆರಿಗೆ ವಿಧಿಸಬೇಕು. ಖಾಸಗಿ ವಲಯದ ರೆಗ್ಯುಲೇಶನ್ ಅತ್ಯಂತ ಅಗತ್ಯವಾದ ಕ್ರಮವಾಗಿದೆ. ಕೊವಿಡ್ ವಿರುದ್ಧ ವ್ಯಾಕ್ಸಿನ್ ನೀಡುವ ಬೃಹತ್ ರಾಷ್ಟ್ರೀಯ ಕಾರ್ಯಕ್ರಮವನ್ನು ಒಕ್ಕೂಟ ಸರ್ಕಾರವು ಹಮ್ಮಿಕೊಳ್ಳಬೇಕು. ರಾಜ್ಯ ಸರ್ಕಾರಗಳಿಗೆ ಒಕ್ಕೂಟ ಸರ್ಕಾರವು ಉಚಿತವಾಗಿ ವ್ಯಾಕ್ಸಿನ್‌ಗಳನ್ನು ಪೂರೈಸಬೇಕು. ಒಕ್ಕೂಟ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಬೃಹತ್ ಉಚಿತ ಆಹಾರ ಧಾನ್ಯ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇದು ಸಾರ್ವಜನಿಕ-ಸಾರ್ವತ್ರಿಕ ಕಾರ್ಯಕ್ರಮವಾಗಬೇಕು. ಸರ್ಕಾರದ ಮೇಲೆ ಒತ್ತಡ ತರಲು ಸಿವಿಲ್ ಸೊಸೈಟಿಯ ಸಂಘಟನೆ, ಹಕ್ಕೊತ್ತಾಯಗಳು, ಜನಾಭಿಪ್ರಾಯ ರೂಪಿಸುವುದು, ಜನಜಾಗೃತಿ ಮುಖ್ಯವಾಗುತ್ತದೆ.**

ನಮ್ಮ ದೇಶವು ಇಂದು ಅತ್ಯಂತ ಉಗ್ರವಾದ ಕೋವಿಡ್ ಪ್ರಣೀತ ಸಮಸ್ಯೆಯನ್ನು ಎದುರಿಸಲಾಗದೆ ಒದ್ದಾಡುತ್ತಿದೆ. ಪ್ರತಿನಿತ್ಯ ಸಾವಿರಾರು ಜನರು ಸಾವಿಗೀಡಾಗುತ್ತಿದ್ದಾರೆ. ನಿತ್ಯ ಲಕ್ಷಾಂತರ ಮಂದಿ ಕೋವಿಡ್ ಸೋಂಕಿಗೆ ಒಳಗಾಗುತ್ತಿದ್ದಾರೆ. ಕೋವಿಡ್-1 ಅಲೆಗಿಂತ ಅದೆಷ್ಟೋ ಪಟ್ಟು ಎರಡನೆಯ ಅಲೆಯು ತೀವ್ರ ಸ್ವರೂಪದ್ದಾಗಿದೆ. ಕೊವಿಡ್ ಮಹಾರೋಗವು ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಅತಿಹೆಚ್ಚಿನ ಒತ್ತಡ ಉಂಟುಮಾಡಿದೆ. ಎಲ್ಲಿಯವರೆಗೆ ಎಂದರೆ ಅದು ಒತ್ತಡವನ್ನು ನಿರ್ವಹಿಸುವಲ್ಲಿ ವಿಫಲವಾಗಿದೆ. ಮೊದಲ ಅಲೆಯ ನಂತರ ಸರ್ಕಾರವು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಉತ್ತಮ ಪಡಿಸುವುದಕ್ಕೆ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಈ ವಿಷಯದಲ್ಲಿ ಒಕ್ಕೂಟ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ವೈಫಲ್ಯವು ಅಕ್ಷಮ್ಯವಾಗಿದೆ. ಇಂದು ದೇಶದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಕೊವಿಡ್ ನಿಯಂತ್ರಣದಲ್ಲಿನ ವೈಫಲ್ಯಕ್ಕೆ ಅನೇಕ ಕಾರಣಗಳಿವೆ. ಕೋವಿಡ್ ಸೋಂಕಿನಿಂದ ಸಾವಿಗೀಡಾಗುವುದು ಒಂದು ಬಗೆ: ಔಷಧೋಪಚಾರ ದೊರೆಯದೆ. ಆಮ್ಲಜನಕರ ಅಲಭ್ಯತೆ/ಕೊರತೆಯಿಂದ ಜನರು ಅಸು ನೀಗುವುದು ಇನ್ನೊಂದು ಬಗೆ. ಮೊದಲನೆಯದನ್ನು ಅರ್ಥ ಮಾಡಿಕೊಳ್ಳಬಹುದು. ಎರಡನೆಯ ಸರ್ಕಾರದ ವೈಫಲ್ಯವನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಚಾಮರಾಜನಗರದಲ್ಲಿ, ಕಲಬುರಗಿಯಲ್ಲಿ, ಕೋಲಾರದಲ್ಲಿ ನಡೆದದ್ದು ಸರ್ಕಾರದ ವೈಫಲ್ಯದ ಘಟನೆಗಳಾಗಿವೆ.

ಮೊದಲನೆಯದಾಗಿ ಯಾವತ್ತೂ ನಮ್ಮ ದೇಶದಲ್ಲಿ ಆರೋಗ್ಯ ಸೇವೆಯು ಅಭಿವೃದ್ಧಿ ಕಾರ್ಯಕ್ರಮದ ಆದ್ಯತೆಯ ಸಂಗತಿಯಾಗಿಲ್ಲ. ಯು.ಎನ್.ಡಿ.ಪಿ 1990ರಿಂದಲೂ ಅಭಿವೃದ್ಧಿಯಲ್ಲಿ ವರಮಾನದಷ್ಟೇ ಶಿಕ್ಷಣ ಮತ್ತು ಆರೋಗ್ಯದ ಪಾತ್ರವಿದೆ ಎಂಬುದನ್ನು ಮಾನವ ಅಭಿವೃದ್ಧಿ ವರದಿಗಳ ಮೂಲಕ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕದ ಮೂಲಕ ಸಾರಿ ಸಾರಿ ಹೇಳುತ್ತಾ ಬಂದಿದೆ. ಭಾರತದ ಅಭಿವೃದ್ಧಿ ವಿನ್ಯಾಸದ ಬಗ್ಗೆ ಮಾತನಾಡುತ್ತಾ ಅಮರ್ತ್ಯ ಸೇನ್ ಮತ್ತೆ ಮತ್ತೆ ಆರೋಗ್ಯ-ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕೊರತೆಯ ಬಗ್ಗೆ ಗಮನ ಸೆಳೆಯುತ್ತಾ ಬಂದಿದ್ದಾರೆ. ಆದರೆ ಸರ್ಕಾರಗಳು ಅಭಿವೃದ್ಧಿಯಲ್ಲಿ ಆರೋಗ್ಯ ಸೇವೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಕಳೆದ ಮೂರು-ನಾಲ್ಕು ವರ್ಷಗಳಿಂದ ಎನ್.ಡಿ.ಎ ಸರ್ಕಾರವು ಬಂಡವಾಳ ಹೂಡಿಕೆ ಬಗ್ಗೆ, ಉದ್ದಿಮೆ ವಲಯದ ಪ್ರೋತ್ಸಾಹದ ಬಗ್ಗೆ, ಎಫ್‌ಡಿಐ ಬಗ್ಗೆ, ಜಿಡಿಪಿ ಬಗ್ಗೆ ಖಾಸಗಿ ವಲಯದ ಸದ್ಗುಣಗಳ ಬಗ್ಗೆ ಇನ್ನಿಲ್ಲದಂತೆ ಮಾತನಾಡುತ್ತಿದೆಯೇ ವಿನಾ ಆರೋಗ್ಯ ಸೇವೆಯ, ಸಾರ್ವಜನಿಕ ಆರೋಗ್ಯ ಮೂಲ ಸೌಲಭ್ಯಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಸರ್ಕಾರಕ್ಕೆ ವೆಲ್ತ್ ಕ್ರಿಯೇಟರ್ಸ್(ಉದ್ದಿಮೆದಾರರು-ಬಂಡವಳಿಗರು) ಆದ್ಯತೆಯಾದರೆ ವಿನಾ ಆರೋಗ್ಯ-ವೈದ್ಯಕೀಯ ವ್ಯವಸ್ಥೆಯಲ್ಲ. ಕಾರ್ಮಿಕರು, ದುಡಿಮೆಗಾರರು, ಬೀದಿಬದಿಯ ವ್ಯಾಪಾರಗಾರರು, ತಲೆಮೇಲೆ ಹೊತ್ತುಕೊಂಡು ಮಾರಾಟ ಮಾಡುವವರ ಬಗ್ಗೆ ಈ ಸರ್ಕಾರಕ್ಕೆ ಒಂದಿನಿತು ಕರುಣೆಯಿಲ್ಲ.

ಎರಡನೆಯದಾಗಿ, ಇಂದಿನ ಒಕ್ಕೂಟ ಸರ್ಕಾರಕ್ಕೆ 'ಸಾರ್ವಜನಿಕ ವಲಯ'ದ ಬಗ್ಗೆ ಗೌರವವಿಲ್ಲ. ಈ ಕಾರಣಕ್ಕೆ ಅದು ಆರ್ಥಿಕತೆಯ ಎಲ್ಲ ವಲಯಗಳನ್ನೂ(ಬ್ಯಾಂಕುಗಳು, ವಿಮೆ, ರೈಲುಸಾರಿಗೆ, ರಸ್ತೆಸಾರಿಗೆ ಮುಂತಾದವು) ಖಾಸಗೀಕರಣಕ್ಕೆ ಒಳಪಡಿಸುವ ಬಗ್ಗೆ ಉತ್ಸುಕವಾಗಿದೆ ಎಂಬುದು 2019-2020 ಮತ್ತು 2020-2021ರ ಒಕ್ಕೂಟ ಸರ್ಕಾರದ ಬಜೆಟ್ ಭಾಷಣಗಳನ್ನು ಅಧ್ಯಯನ ಮಾಡಿದರೆ ಅರ್ಥವಾಗುತ್ತದೆ (ಡಿಸ್‌ಇನ್‌ವೆಸ್ಟ್‌ಮೆಂಟ್). ಈ ಸರ್ಕಾರಕ್ಕೆ ಜನರ ಆರೋಗ್ಯಕ್ಕಿಂತ 'ಈಸ್ ಆಫ್ ಡೂಯಿಂಗ್ ಬಿಸಿನೆಸ್' ಸೂಚ್ಯಂಕ ಮುಖ್ಯವಾಗಿದೆ. ಆರೋಗ್ಯ ವ್ಯವಸ್ಥೆಯನ್ನು ಉತ್ತಮ ಪಡಿಸುವುದರ ಬಗ್ಗೆ ಅದಕ್ಕೆ ಆಸಕ್ತಿಯಿಲ್ಲ ಮತ್ತು ಅದು ಅದಕ್ಕೆ ಆದ್ಯತೆಯ ಸಂಗತಿಯೂ ಅಲ್ಲ.

ಕೋರೋನಾ ಮಹಾರೋಗದಿಂದ ಜನರ ಹೆಣಗಳು ಬೀದಿ ಬೀದಿಯಲ್ಲಿ ಬೀಳುತ್ತಿರುವಾಗ, ಆಮ್ಲಜನಕದ ಅಲಭ್ಯತೆಯಿಂದ ಆಸ್ಪತ್ರೆಗಳ ಎದುರಿಗೆ ಜನರು ಪ್ರಾಣ ಬಿಡುತ್ತಿರುವಾಗ, ಜೀವರಕ್ಷಕ ಔಷಧಿಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವಾಗ, ಖಾಸಗಿ ಆಸ್ಪತ್ರೆಗಳು ದುಡ್ಡಿಗಾಗಿ ಎಂತಹ ನೀಚ ಕೆಲಸಕ್ಕೂ ಸಿದ್ಧವಿರುವಾಗ(ಶುಲ್ಕ ಕಟ್ಟದಿದ್ದರೆ ಕಳೇಬರ ನೀಡುವುದಿಲ್ಲ) ನಮಗೆ ಸರ್ಕಾರಿ-ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮಹತ್ವ ಅರ್ಥವಾಗುತ್ತಿದೆ. ಖಾಸಗಿ ಆಸ್ಪತ್ರೆಗಳ ಮೂಲ ಉದ್ದೇಶ ತನ್ನ ಶೇರುದಾರರಿಗೆ ಲಾಭಾಂಶವನ್ನು ಕೊಡುವುದೊ ಅಥವಾ ಸಾರ್ವಜನಿಕರಿಗೆ ಸೇವೆ ನೀಡುವುದೋ? ಎರಡನೆಯ ಉದ್ದೇಶಕ್ಕಾಗಿ ಜನರ ಸೇವೆಗೆ ಮುಂದಾಗಿ ಎಂದು ಖಾಸಗಿ ಆಸ್ಪತ್ರೆಗಳನ್ನು ಸರ್ಕಾರಗಳು ಬೇಡುವ ಸ್ಥಿತಿ ಬಂದಿದೆ. ಖಾಸಗಿ ವೈದ್ಯಕೀಯ ವ್ಯವಸ್ಥೆಯಲ್ಲಿ ಬಡವರು, ಕೂಲಿಕಾರರು, ಕಾರ್ಮಿಕರು, ಬೀದಿಬದಿ ವ್ಯಾಪಾರಗಾರರು ದುಬಾರಿ ಹಣ ನೀಡಿ ಆರೋಗ್ಯ ಸೇವೆಯನ್ನು ಪಡೆದುಕೊಳ್ಳುವುದು ಸಾಧ್ಯವೇ?


ನಮ್ಮ ಸಂವಿಧಾನದ ಪರಿಚ್ಛೇದ 21 ರಲ್ಲಿ ಜನರಿಗೆ ಜೀವಿಸುವ ಹಕ್ಕನ್ನು ನೀಡಿದೆ. ಇಂದು ರಾಜಾರೋಷವಾಗಿ ಈ ಸಂವಿಧಾನಾತ್ಮಕ ಜೀವಿಸುವ ಹಕ್ಕಿನ ಉಲ್ಲಂಘನೆಯಾಗುತ್ತಿದೆ. ಪರಿಚ್ಛೇದ 21 ರ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಸರ್ವೋಚ್ಚ ನ್ಯಾಯಾಲಯವು ಅನೇಕ ಬಾರಿ ಜೀವಿಸುವ ಹಕ್ಕು 'ಯೋಗ್ಯ ರೀತಿ ಜೀವಿಸುವುದು' ಎಂಬುದನ್ನು ಒಳಗೊಂಡಿದೆ ಎಂದು ಹೇಳಿದೆ. ಜನರ ಜೀವ ಉಳಿಸುವುದರಲ್ಲಿ ಸರ್ಕಾರಗಳು ವಿಫಲವಾಗುತ್ತಿವೆ ಮಾತ್ರವಲ್ಲ. ಆಮ್ಲಜನಕದ ಅಲಭ್ಯತೆ/ಕೊರತೆ, ಜೀವರಕ್ಷ ಔಷಧಿಗಳ ಕೊರತೆಯಿಂದ ಅಸು ನೀಗಿದ ನತದೃಷ್ಟ ಜನರ ಹೆಣಗಳ ಯೋಗ್ಯ ರೀತಿಯ ಸಂಸ್ಕಾರಕ್ಕೂ ಅವಕಾಶ ನೀಡುವುದರಲ್ಲಿ ಸರ್ಕಾರಗಳು ಸೋತಿವೆ.

ಮೂರನೆಯದಾಗಿ ನಮ್ಮದು ಒಕ್ಕೂಟ(ಫೆಡರಲ್) ರಾಜಕೀಯ ವ್ಯವಸ್ಥೆ. ನಮ್ಮ ಸಂವಿಧಾನವು ಒಕ್ಕೂಟ ಮತ್ತು ರಾಜ್ಯ ಸರ್ಕಾರಗಳಿಗೆ ಸಮಾನವಾದ ಹಕ್ಕುಗಳನ್ನು ಮತ್ತು ಜವಾಬ್ದಾರಿಗಳನ್ನು ನೀಡಿದೆ. ಮಹಾಕ್ರೈಸಿಸ್ ಸಂದರ್ಭದಲ್ಲಿ ಒಕ್ಕೂಟ(ಕೇಂದ್ರ) ಸರ್ಕಾರವು ರಾಜ್ಯ ಸರ್ಕಾರಗಳ ನೆರವಿಗೆ ಧಾವಿಸಬೇಕು. ಇಂದು ಭಾರತ ಸರ್ಕಾರವು ತನ್ನ ಸಂವಿಧಾನಾತ್ಮಕ ಒಕ್ಕೂಟ ತತ್ವವನ್ನು ಪಾಲಿಸುವುದಿರಲಿ, ಅದನ್ನು ಪ್ರಜ್ಞಾಪೂರ್ವಕವಾಗಿ ಉಲ್ಲಂಘಿಸುತ್ತಿದೆ. ಉದಾ: ಒಕ್ಕೂಟ ಸರ್ಕಾರವು 1950ರಿಂದಲೂ ವಿವಿಧ ಮಾರಕ ರೋಗಗಳ ವಿರುದ್ಧ ರೋಗನಿರೋಧಕ ಚುಚ್ಚುಮದ್ದನ್ನು(ಸಿಡುಬು, ಪೋಲಿಯೋ, ಹೆಪಿಟೈಟಿಸ್, ನಾಯಿಕೆಮ್ಮು(ಮೆಸೆಲ್ಸ್) ಮುಂತಾದವು)ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ ದೇಶದಾದ್ಯಂತ ಉಚಿತವಾಗಿ ರಾಜ್ಯ ಸರ್ಕಾರಗಳ ಮೂಲಕ ನೀಡುತ್ತಾ ಬಂದಿದೆ. ಇಂದು ಕೋವಿಡ್ ಮಹಾದುರಂತದ ಸಂದರ್ಭದಲ್ಲಿ ಸಂಪನ್ಮೂಲ ದೃಷ್ಟಿಯಿಂದ(ಹಣಕಾಸು), ಅಧಿಕಾರದ ಮತ್ತು ಬೃಹತ್ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಒಕ್ಕೂಟ ಸರ್ಕಾರ ಅತ್ಯಂತ ಪ್ರಬಲ ಸ್ಥಿತಿಯಲ್ಲಿದೆ. ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರಗಳು(ಜಿಎಸ್‌ಟಿಯಿಂದ, ಒಂದೇ ಸರ್ಕಾರ ಕೇಂದ್ರ-ರಾಜ್ಯದಲ್ಲಿರುವುದರಿಂದ, ಬಲಿಷ್ಟ ಕೇಂದ್ರ ನಾಯತ್ವವಿರುವುದರಿಂದ) ಅತ್ಯಂತ ದುರ್ಬಲ ಸ್ಥಿತಿಯಲ್ಲಿವೆ. ಒಕ್ಕೂಟ ಸರ್ಕಾರವು ರಾಜ್ಯ ಸರ್ಕಾರಗಳ ಮೇಲೆ ಕೋವಿಡ್ ಮಹಾರೋಗವನ್ನು ನಿರ್ವಹಿಸುವ ಜಬಾಬ್ದಾರಿಯನ್ನು ಹೇರಿರುವುದರಿಂದ ಅವು ಇದನ್ನು ನಿರ್ವಹಿಸುವಲ್ಲಿ ವಿಫಲವಾಗುತ್ತಿವೆ.

ನಾಲ್ಕನೆಯದಾಗಿ ಕೋವಿಡ್ ಮಹಾರೋಗವು ಇಂದು ಉಲ್ಬಣಿಸಿರುವುದಕ್ಕೆ ಒಕ್ಕೂಟ ಸರ್ಕಾರವು ರೋಗವನ್ನು ನಿಯಂತ್ರಿಸುವುದಕ್ಕೆ ಆದ್ಯತೆ ನೀಡುವುದಕ್ಕೆ ಪ್ರತಿಯಾಗಿ ಚುನಾವಣೆ ಪ್ರಚಾರಕ್ಕೆ, ಬೃಹತ್ ಚುನಾವಣೆ ಸಭೆಗಳ ಆಯೋಜನೆಗಳಿಗೆ ಮತ್ತು ಜಾತ್ಯತೀತತೆಯನ್ನು ಗಾಳಿಗೆ ತೂರಿಬಿಟ್ಟಿರುವ ಒಕ್ಕೂಟ ಸರ್ಕಾರವು ಬೃಹತ್ ಧಾರ್ಮಿಕ ಸಮಾವೇಶಗಳಿಗೆ(ಕುಂಭಮೇಳ, ಜಾತ್ರೆಗಳು ಮುಂತಾದವು)ಅವಕಾಶ ನೀಡಿದ್ದು ಪ್ರಮುಖ ಕಾರಣವಾಗಿದೆ. ಇದಕ್ಕೆ ಇಂದಿನ ಒಕ್ಕೂಟ ಸರ್ಕಾರದ ನಾಯಕತ್ವ ಕಾರಣವಾಗಿದೆ. ಒಕ್ಕೂಟ ತತ್ವದ ಬಗ್ಗೆ ಇಂದಿನ ಒಕ್ಕೂಟ ಸರ್ಕಾರಕ್ಕೆ ಕಿಂಚಿತ್ತೂ ಗೌರವವಿಲ್ಲ.

**ನಾವೇನು ಮಾಡಬೇಕು?**

ಮೊಟ್ಟಮೊದಲನೆಯದಾಗಿ ಆರೋಗ್ಯ ಮತ್ತು ವೈದ್ಯಕೀಯ ಸೇವೆಯನ್ನು ಯಾವುದೇ ಕಾರಣಕ್ಕೂ ಖಾಸಗಿ ವಲಯಕ್ಕೆ ನೀಡಬಾರದು. ಇದನ್ನು ಸರ್ಕಾರವು ಆದ್ಯತೆಯ ಮೇಲೆ ನಿರ್ವಹಿಸಬೇಕು. ಇದಕ್ಕೆ ಸಂಪನ್ಮೂಲ ಕೊರತೆಯಾದರೆ ದೇಶದಲ್ಲಿರುವ ನೂರಾರು ಬಿಲಿಯನೇರುಗಳು ಮತ್ತು ಸಾವಿರಾರು ಮಿಲಿಯನೇರುಗಳ ಮೇಲೆ ಮುಲಾಜಿಲ್ಲದೆ ತೆರಿಗೆ ವಿಧಿಸಬೇಕು. ಇಂತಹ ಮಹಾದುರಂತದ ಸಂದರ್ಭದಲ್ಲಿ ಸಾರ್ವಜನಿಕ ವೆಚ್ಚವನ್ನು ಸಾಲ ತರುವ ಮೂಲಕ ಭರಿಸದೆ ತೆರಿಗೆ ವಿಧಿಸುವುದರ ಮೂಲಕ ನಿರ್ವಹಿಸಬೇಕು.




ಕೃಪೆ: ಪಿ. ಮಹಮ್ಮದ್, ವಾ.ಭಾ

ಎರಡನೆಯದಾಗಿ ಖಾಸಗಿ ವಲಯವನ್ನು ಬಹಿಷ್ಕರಿಸುವ ಅಗತ್ಯವಿಲ್ಲ. ನಮ್ಮದು ಮೂಲತಃ ಮಿಶ್ರ ಆರ್ಥಿಕ ವ್ಯವಸ್ಥೆ. ಇಲ್ಲಿ ಖಾಸಗಿ ವಲಯಕ್ಕೆ ಅವಕಾಶವಿದೆ. ಆದರೆ ಖಾಸಗಿ ವಲಯವು ಅನಿಯಂತ್ರಿತ ವ್ಯವಸ್ಥೆಯಾಗಬಾರದು. ಇಂದು ಸರ್ಕಾರವು ಅನುಸರಿಸುತ್ತಿರುವ ಡಿರೆಗ್ಯುಲೇಶನ್ ಪಾಲಿಸಿಯಿಂದಾಗಿ ಖಾಸಗಿ ವಲಯವು ಪ್ರಬಲವಾಗಿ ಜನರ ಶೋಷಣೆಗೆ ಕಾರಣವಾಗುತ್ತದೆ. ಕೋವಿಡ್ ಮಹಾದುರಂತದಲ್ಲಿ ಅನಿಯಂತ್ರಿತ ಖಾಸಗಿ ಆರೋಗ್ಯ ವ್ಯವಸ್ಥೆಯು ಹೇಗೆ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬುದರ ನಿದರ್ಶನ ನಮ್ಮ ಮುಂದಿದೆ. ಆದ್ದರಿಂದ ಖಾಸಗಿ ವಲಯದ ರೆಗ್ಯುಲೇಶನ್ ಅತ್ಯಂತ ಅಗತ್ಯವಾದ ಕ್ರಮವಾಗಿದೆ.

ಮೂರನೆಯದಾಗಿ ಮತ್ತು ಪ್ರಮುಖವಾಗಿ ಕೊವಿಡ್ ವಿರುದ್ಧ ವ್ಯಾಕ್ಸಿನ್ ನೀಡುವ ಬೃಹತ್ ರಾಷ್ಟ್ರೀಯ ಕಾರ್ಯಕ್ರಮವನ್ನು ಒಕ್ಕೂಟ ಸರ್ಕಾರವು ಹಮ್ಮಿಕೊಳ್ಳಬೇಕು. ರಾಜ್ಯ ಸರ್ಕಾರಗಳಿಗೆ ಒಕ್ಕೂಟ ಸರ್ಕಾರವು ಉಚಿತವಾಗಿ ವ್ಯಾಕ್ಸಿನ್‌ಗಳನ್ನು ಪೂರೈಸಬೇಕು. ದೊಡ್ಡ ಪ್ರಮಾಣದಲ್ಲಿ ಇದನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳಬೇಕು. ಈ ಬಗ್ಗೆ ಒಕ್ಕೂಟ ಸರ್ಕಾರವು ಸೂಕ್ಷ್ಮ ಸಂವೇದನೆಯನ್ನು ತೋರುತ್ತಿಲ್ಲ. ಇದಕ್ಕಾಗಿ ಸರ್ಕಾರದ ಎಲ್ಲ ಇಲಾಖೆಗಳ ಸಂಪನ್ಮೂಲವನ್ನು ಸಂಘಟಿಸಿ ಕೊವಿಡ್ ತಡೆಯಲು ರಾಷ್ಟ್ರೀಯ ವ್ಯಾಕ್ಸಿನ್ ಕಾರ್ಯಕ್ರಮವನ್ನು 'ಶತಮಾನದಲ್ಲಿ ಒಮ್ಮೆ' ಎನ್ನುವ ರೀತಿಯಲ್ಲಿ ಆರಂಭ ಮಾಡಬೇಕು. ಕೊವಿಡ್ ಮಹಾದುರಂತಕ್ಕೆ ಸಂಬಂಧಿಸಿದ ಯಾವುದೇ ಕ್ರಮವನ್ನು ಒಕ್ಕೂಟ ಸರ್ಕಾರವು ರಾಜ್ಯಗಳ ಜೊತೆಯಲ್ಲಿ ಸಮಾಲೋಚಿಸಿ ಜಾರಿಗೊಳಿಸಬೇಕು.

ನಾಲ್ಕನೆಯದಾಗಿ ಕೋವಿಡ್‌ನಿಂದಾಗಿ, ಇದಕ್ಕೆ ಸಂಬಂಧಿಸಿದ ಲಾಕ್‌ಡೌನ್/ಕರ್ಫ್ಯೂ ಕಾರಣವಾಗಿ ಅಸಂಘಟಿತ ವಲಯದ ಲಕ್ಷಾಂತರ ದುಡಿಮೆಗಾರರ ವರಮಾನದ ಮೂಲ ಇಲ್ಲವಾಗಿದೆ. ನಿಜಕ್ಕೂ ಜನರು ಬೀದಿಗೆ ಬಿದ್ದಿದ್ದಾರೆ. ಹಸಿವಿನಿಂದ ಜನರು ನರಳುತ್ತಿದ್ದಾರೆ. ಇಂತಹ ದುರಂತದ ಸಂದರ್ಭದಲ್ಲಿ ಒಕ್ಕೂಟ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಬೃಹತ್ ಉಚಿತ ಆಹಾರ ಧಾನ್ಯ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇದು ಸಾರ್ವಜನಿಕ-ಸಾರ್ವತ್ರಿಕ ಕಾರ್ಯಕ್ರಮವಾಗಬೇಕು. ಜನಶಕ್ತಿಯ-ಶ್ರಮಶಕ್ತಿಯ ಪಾತ್ರವಿಲ್ಲದೆ ಕೋವಿಡ್ ನಂತರ ಆರ್ಥಿಕತೆಯನ್ನು ಮರುಕಟ್ಟುವುದು ಸಾಧ್ಯವಿಲ್ಲ. ಆರ್ಥಿಕತೆ ಎಂದರೆ ಕೇವಲ ಉದ್ದಿಮೆಗಾರರಲ್ಲ, ವ್ಯಾಪಾರಗಾರರಲ್ಲ, ಶೇರು ವ್ಯವಹಾರದಲ್ಲಿರುವವರು ಮಾತ್ರವಲ್ಲ. ಆರ್ಥಿಕತೆಯೆಂದರೆ ಶೇರು ಮಾರುಕಟ್ಟೆ ಮಾತ್ರವಲ್ಲ. ಆರ್ಥಿಕತೆಯ ಮೂಲ ದ್ರವ್ಯ ದುಡಿಮೆಗಾರರು. ನಮ್ಮ ದೇಶದಲ್ಲಿ ಅಂದಾಜು 40 ಕೋಟಿ ದುಡಿಮೆಗಾರರಿದ್ದಾರೆ. ಇವರ ಬಗ್ಗೆ ಸರಕಾರದ ಗಮನವಿರಬೇಕು. ಅಭಿವೃದ್ಧಿಯು ಇವರಿಗೆ ಅಭಿಮುಖಿಯಾಗಿರಬೇಕು. ಇವರು ನಿಜವಾದ ವೆಲ್ತ್ ಕ್ರಿಯೇಟರ್ಸ್ ಆಗಿದ್ದಾರೆ. ಕೊವಿಡ್ ನಿಂದ ಹೆಚ್ಚು ದುರಂತಕ್ಕೆ ಒಳಗಾಗಿರುವ ವರ್ಗವೆಂದರೆ ಕಾರ್ಮಿಕ ವರ್ಗ.

ಕೊನೆಯದಾಗಿ ಇಂತಹ ಕ್ರೈಸಿಸ್ ಸಂದರ್ಭದಲ್ಲಿ ಮತ್ತು ಖಾಸಗಿವಲಯ ಬಲಿಷ್ಟವಾಗಿತ್ತಿರುವಾಸಗ ಸಿವಿಲ್ ಸೊಸೈಟಿಯ ಪಾತ್ರ ನಿರ್ಣಾಯಕವಾಗಿರುತ್ತದೆ. ನಮ್ಮ ನಾಗರಿಕ ಸಮಾಜವು ಇಂದು ಎದ್ದು ನಿಲ್ಲಬೇಕಾಗಿದೆ. ಸರ್ಕಾರದ ಮೇಲೆ ಒತ್ತಡ ತರಲು ಸಿವಿಲ್ ಸೊಸೈಟಿಯ ಸಂಘಟನೆ, ಹಕ್ಕೊತ್ತಾಯಗಳು, ಜನಾಭಿಪ್ರಾಯ ರೂಪಿಸುವುದು, ಜನಜಾಗೃತಿ ಮುಖ್ಯವಾಗುತ್ತದೆ.

# ಕೇರಳ: ಒಂದು ಚಾರಿತ್ರಿಕ ಮಹತ್ವದ ವಿಜಯ



**ಕೇರಳದಲ್ಲಿ 1977ರ ನಂತರ ಮೊದಲ ಬಾರಿಗೆ, ಅದೂ ಹೆಚ್ಚಿನ ಜನಾದೇಶದೊಂದಿಗೆ ಮರು ಆಯ್ಕೆಗೊಂಡಿರುವುದಷ್ಟೆ ಎಲ್‌ಡಿಎಫ್‌ನ ವಿಜಯದ ವಿಶೇಷತೆಯಲ್ಲ, ಆಸರ್ಕಾರ ಅನುಷ್ಠಾನಗೊಳಿಸಿದ್ದ ಒಂದು ಯೋಜನಾಬದ್ಧ ಅರ್ಥ ವ್ಯವಸ್ಥೆಯ ಎಡ ದೃಷ್ಟಿಕೋನದಿಂದ ಕೂಡಿದ ಅಭಿವೃದ್ಧಿಯ ಮಾದರಿಗೆ ಜನರಿಂದ ವ್ಯಾಪಕವಾಗಿ ಅಂಗೀಕಾರ ದೊರೆತಿದೆ. ಎಂಬುದೂ ಒಂದು ಅತ್ಯಂತ ಮಹತ್ವದ ಸಂಗತಿ. ಎಲ್‌ಡಿಎಫ್ ಸರ್ಕಾರದ ಮರು–ಆಯ್ಕೆಯು ಇಂದು ದೇಶದಲ್ಲಿ ಎಡ ಪಂಥದ ಪ್ರಸ್ತುತತೆಯನ್ನು,ದೇಶದಲ್ಲಿ ನವ–ಉದಾರವಾದಿ ಹಿಂದುತ್ವ ಆಡಳಿತಕ್ಕೆ ಒಂದು ಅತ್ಯಂತ ಮಹತ್ವದ ಪರ್ಯಾಯವನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ.**

ಕೇರಳದಲ್ಲಿ ಎಡ–ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಸರ್ಕಾರ ದೊಡ್ಡ ಜನಾದೇಶದೊಂದಿಗೆ ಅಧಿಕಾರಕ್ಕೆ ಮರು–ಆಯ್ಕೆ ಆಗಿದೆ. ಅನೇಕ ದೃಷ್ಟಿಗಳಿಂದ ಇದೊಂದು ಮಹತ್ವದ ವಿಜಯ.

1977ರ ನಂತರ, ಅಧಿಕಾರದಲ್ಲಿರುವ ಸರ್ಕಾರವೊಂದು ಕೇರಳದಲ್ಲಿ ಮರು ಆಯ್ಕೆಯಾಗಿರುವುದು ಇದೇ ಮೊದಲ ಸಲವಾಗಿದೆ. ಇದು ಮೊದಲ ಮಹತ್ವದ ಸಂಗತಿ.

ಹಿಂದಿನ ಎಲ್‌ಡಿಎಫ್ ಸರ್ಕಾರಗಳಿಂದ ಹಿಡಿದು ಇಂದಿನವರೆಗಿನ ಯಾವುದೇ ಎಲ್‌ಡಿಎಫ್ ಸರ್ಕಾರ ರಾಜ್ಯದಲ್ಲಿ ಮರು–ಆಯ್ಕೆ ಆಗಿರಲಿಲ್ಲ. 1957ರಲ್ಲಿ ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಮೊದಲ ಸಚಿವ ಸಂಪುಟ ರಚಿಸಿತ್ತು. ಆಧುನಿಕ ಕೇರಳ ರಾಜ್ಯ ಸ್ಥಾಪನೆಯಾದ ನಂತರ ಆಯ್ಕೆಯಾದ ಪ್ರಥಮ ಚುನಾಯಿತ ಸರ್ಕಾರ ಅದಾಗಿತ್ತು. ಇ.ಎಂ.ಎಸ್. ನಂಬೂದರಿಪಾಡ್ ಅದರ ನೇತೃತ್ವ ವಹಿಸಿದ್ದರು. 29 ತಿಂಗಳ ನಂತರ ಕೇಂದ್ರ ಸರ್ಕಾರ ಈ ಸರ್ಕಾರವನ್ನು ವಜಾ ಮಾಡಿತು. 1967ರ ಎಡ ನೇತೃತ್ವದ ಸಂಯುಕ್ತ ರಂಗ ಸರಕಾರ ಕೂಡ ತನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸಲಿಲ್ಲ. 1980ರ ಚುನಾವಣೆಯ ನಂತರ ಆಯ್ಕೆಯಾದ ಇ.ಕೆ. ನಾಯನಾರ್ ನೇತೃತ್ವದ ಸರ್ಕಾರ ಕೂಡ ಹೆಚ್ಚು ಕಾಲ ಬಾಳಲಿಲ್ಲ. 1987, 1996 ಮತ್ತು 2006ರ ಎಲ್‌ಡಿಎಫ್ ಸರ್ಕಾರಗಳು ಪೂರ್ಣ ಐದು ವರ್ಷ ಕಾಲದ ಅಧಿಕಾರ ನಡೆಸಿದವು. ಆದರೆ ಪುನರಾಯ್ಕೆ ಆಗಿರಲಿಲ್ಲ. ಈ ನಮೂನೆಯನ್ನು ಮುರಿಯುವ ಐತಿಹಾಸಿಕ ದಾಖಲೆಯನ್ನು ಬರೆದು 2016ರಲ್ಲಿ ಆಯ್ಕೆಗೊಂಡ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ಈಗ ಎರಡನೇ ಸಲಕ್ಕೆ ಜನಾದೇಶ ಪಡೆದಿದೆ.

| | |
|---|---|
| **ಎಲ್‌ಡಿಎಫ್** | **99** |
| ಸಿಪಿಐ(ಎಂ) | 62 |
| ಸಿಪಿಐ | 17 |
| ಕೇರಳ ಕಾಂಗ್ರೆಸ್ (ಎಂ) | 5 |
| ಎನ್‌ಸಿಪಿ | 2 |
| ಜೆಡಿ(ಎಸ್) | 2 |
| ಕೇರಳ ಕಾಂಗ್ರೆಸ್(ಬಿ) | 1 |
| ಕಾಂಗ್ರೆಸ್(ಎಸ್) | 1 |
| ಐಎನ್‌ಎಲ್ | 1 |
| ಎಲ್‌ಜೆಡಿ | 1 |
| ಜೆಕೆಸಿ | 1 |
| ಬೆಂಬಲಿತ ಪಕ್ಷೇತರರು | 6 |
| **ಯುಡಿಎಫ್** | **41** |
| ಕಾಂಗ್ರೆಸ್ | 21 |
| ಐಯುಎಂಎಲ್ | 15 |
| ಕೇರಳ ಕಾಂಗ್ರೆಸ್ | 2 |
| ಆರ್‌ಎಂಪಿಐ | 1 |
| ಎನ್‌ಸಿಕೆ | 1 |
| ಕೆಸಿ(ಜೆ) | 1 |
| **ಎನ್‌ಡಿಎ** | **0** |

### ದೊಡ್ಡದಾದ ಜನಾದೇಶ

ಈ ಚುನಾವಣೆಯ ಎರಡನೇ ಮಹತ್ವದ ಸಂಗತಿಯೆಂದರೆ, ಎಲ್‌ಡಿಎಫ್ ಸರಕಾರ ಹಿಂದಿನ ಚುನಾವಣೆಗಿಂತ ದೊಡ್ಡದಾದ ಜನಾದೇಶ ಪಡೆದಿರುವುದು. 2016ರಲ್ಲಿ 140 ಸ್ಥಾನಗಳ ಪೈಕಿ 91ರಲ್ಲಿ ಗೆದ್ದಿದ್ದ ಎಲ್‌ಡಿಎಫ್, ಈ ಬಾರಿ 99 ಸ್ಥಾನಗಳನ್ನು ಗೆದ್ದಿದೆ. ಇದು ಒಟ್ಟು ಸ್ಥಾನಗಳ ಶೇಕಡ 71ರಷ್ಟಾಗುತ್ತದೆ. ಅಂದರೆ ಮೂರನೇ ಎರಡಕ್ಕಿಂತ ಹೆಚ್ಚಿನ ಬಹುಮತವಾಗಿದೆ. ಅಲ್ಲದೆ, ಎಲ್‌ಡಿಎಫ್‌ಗೆ ಹೆಚ್ಚಿನ ಜನ ಬೆಂಬಲ ದೊರಕಿದೆ: 2016ರಲ್ಲಿ 43.3% ಮತ ಪಡೆದಿದ್ದ ಎಲ್‌ಡಿಎಫ್ ಈ ಬಾರಿ 45.3% ಮತ ಗಳಿಸಿದೆ. ಜನಸಂಖ್ಯೆಯ ಎಲ್ಲ ವಿಭಾಗಗಳಿಂದ ಎಲ್‌ಡಿಎಫ್‌ಗೆ ಹೆಚ್ಚಿನ ಬೆಂಬಲ ಲಭ್ಯವಾಗಿದೆ. ಸಮಾಜದ ಮೂಲ ವರ್ಗಗಳು, ಮಹಿಳೆಯರು, ಯುವಜನರು, ದಲಿತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರು, ಒಟ್ಟಾರೆಯಾಗಿ ಎಲ್ಲ ಜನವಿಭಾಗಗಳು ಬೆಂಬಲ ನೀಡಿವೆ. ಬಿಜೆಪಿ ಮತ್ತು ಕಾಂಗ್ರೆಸ್‌ಗಳು ಮತಗಳ ವ್ಯಾಪಾರ ನಡೆಸಿರದಿದ್ದರೆ, ಎಲ್‌ಡಿಎಫ್ ವಿಜಯದ ಪ್ರಮಾಣ ಇನ್ನೂ ಹೆಚ್ಚಾಗಿರುತ್ತಿತ್ತು. ಕನಿಷ್ಠ 10 ಕ್ಷೇತ್ರಗಳಲ್ಲಿ ಬಿಜೆಪಿ ವರ್ಗಾಯಿಸಿದ ಮತಗಳಿಂದ ಯುಡಿಎಫ್ ಜಯ ಗಳಿಸಿದೆ.

ಈ ಚುನಾವಣೆಯ ಮೂರನೇ ಮಹತ್ವದ ಸಂಗತಿಯೆಂದರೆ, ಎಲ್‌ಡಿಎಫ್ ಸರ್ಕಾರ ಅನುಷ್ಠಾನಗೊಳಿಸಿದ್ದ ಒಂದು ಯೋಜನಾಬದ್ಧ ಅರ್ಥ ವ್ಯವಸ್ಥೆಯ ಎಡ ದೃಷ್ಟಿಕೋನದಿಂದ ಕೂಡಿದ ಅಭಿವೃದ್ಧಿಯ ಮಾದರಿಗೆ ಜನರಿಂದ ವ್ಯಾಪಕವಾಗಿ ಅಂಗೀಕಾರ ದೊರೆತಿದೆ.

### ಯೋಜನಾ ಪ್ರಕ್ರಿಯೆಯನ್ನು ಮುಂದುವರೆಸಿದ ಏಕೈಕ ರಾಜ್ಯ

ಯೋಜನಾ ಆಯೋಗವನ್ನು ಭಾರತ ಸರ್ಕಾರ ರದ್ದುಪಡಿಸಿದ ನಂತರ, "ಪಂಚ ವಾರ್ಷಿಕ ಯೋಜನೆ' ಮತ್ತು "ವಾರ್ಷಿಕ ಯೋಜನೆ' ಪ್ರಕ್ರಿಯೆಯನ್ನು ಮುಂದುವರಿಸಿದ ಏಕೈಕ ರಾಜ್ಯವಾಗಿದೆ ಕೇರಳ. ರಾಜ್ಯ

**ಮತಗಳಿಕೆ ಶೇಕಡಾ**

| ವರ್ಷ | 2016 | | 2021 | |
|---|---|---|---|---|
| ಎಲ್‌ಡಿಎಫ್ | 91 | 43.5 | 99 | 45.3 |
| ಯುಡಿಎಫ್ | 47 | 38.8 | 41 | 39.4 |
| ಎನ್‌ಡಿಎ | 1 | 14.6 | 0 | 12.40 |
| ಇತರರು | 1 | | 0 | |

## * ಪ್ರಕಾಶ್ ಕಾರಟ್

ಸರ್ಕಾರವು ಕೇರಳ ರಾಜ್ಯದ ಸಾಮಾಜಿಕ ಅಭಿವೃದ್ಧಿ, ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸಮಾಜ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯ ಕ್ಷೇತ್ರದಲ್ಲಿ ಅಭಿವೃದ್ಧಿಯ ಪರಂಪರೆ ಆಧರಿಸಿದ ನೀತಿ ಚೌಕಟ್ಟನ್ನು ಮುಂದುವರೆಸಿತು ಮತ್ತು ಬಲಪಡಿಸಿತು. ಮಾನವ ಅಭಿವೃದ್ಧಿ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಬಲಪಡಿಸುವುದರ ಜೊತೆಗೆ ಈ ಸಾಧನೆಗಳನ್ನು ವಿಶೇಷವಾಗಿ ಯುವಜನರಿಗೆ ಹೊಸ ಉದ್ಯೋಗ ಸೃಷ್ಟಿಗೆ ಅವಕಾಶ ಸೃಷ್ಟಿಸುವುದು ಮತ್ತು ಮೂಲಸೌಕರ್ಯ ನಿರ್ಮಾಣಕ್ಕೆ ಅಡಿಗಲ್ಲನ್ನಾಗಿ ಬಳಸಿಕೊಳ್ಳಲು ಸರ್ಕಾರ ನಿರ್ಧರಿಸಿತು. ಇಡೀ ದೇಶದಲ್ಲಿ ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರಗಳ ಖಾಸಗೀಕರಣ ಪ್ರಕ್ರಿಯೆಯ ಧಾವಂತವನ್ನು ಎದುರಿಸಿಯೂ, ಈ ಕ್ಷೇತ್ರಗಳನ್ನು ಬಲಪಡಿಸಿದ್ದು ಒಂದು ಗಣನೀಯ ಸಾಧನೆಯಾಗಿದೆ. ಒಂದು ರಾಜ್ಯಸರ್ಕಾರದ ಸಂಪನ್ಮೂಲಗಳ ತೀವ್ರ ಮಿತಿಗಳ ನಡುವೆಯೂ, ಎಲ್‌ಡಿಎಫ್ ಸರ್ಕಾರ ಸಂಪನ್ಮೂಲ ಕ್ರೋಡೀಕರಿಸಿದ್ದು ಹಾಗೂ ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿ (ಕೆಐಐಎಫ್‌ಬಿ)ಯಂಥ ಸಂಸ್ಥೆಯ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಹಣ ಹೂಡಿದ್ದು ಗಮನಾರ್ಹವಾಗಿದೆ.


ಎಲ್‌ಡಿಎಫ್ ಸರ್ಕಾರದ ಅಭಿವೃದ್ಧಿ ನೀತಿಯ ಇನ್ನೊಂದು ಮಹತ್ವದ ಲಕ್ಷಣವೆಂದರೆ, ಯೋಜನೆ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನತೆಯ ಪಾಲ್ಗೊಳ್ಳುವಿಕೆಯ ಪಾತ್ರ ಮತ್ತು ಅಭಿವೃದ್ಧಿಯಲ್ಲಿ ಸ್ಥಳೀಯ ಸರ್ಕಾರದ ಸಂಸ್ಥೆಗಳ ಪಾತ್ರ. ಉದಾಹರಣೆಗೆ, 'ಕುಡುಂಬಶ್ರೀ' ಮಹಿಳಾ ಗುಂಪುಗಳು ರಾಜ್ಯದಲ್ಲಿ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹತ್ವದ ಪಾತ್ರ ವಹಿಸಿವೆ.

ಎಲ್‌ಡಿಎಫ್ ಸರ್ಕಾರದ ಆಡಳಿತಾವಧಿ ಜಾತ್ಯತೀತತೆಗೆ ಒಂದು ದೃಢವಾದ ಬದ್ಧತೆ ಮತ್ತು ಎಲ್ಲ ಕೋಮುವಾದಿ ಶಕ್ತಿಗಳ ವಿರುದ್ಧದ ರಾಜಿಯಿಲ್ಲದ ಹೋರಾಟಕ್ಕೆ ಸಾಕ್ಷಿಯಾಗಿದೆ.

### ಉತ್ಕೃಷ್ಟತೆಯ ಒರೆಗಲ್ಲಿನಲ್ಲಿ

ಅಂತಿಮವಾಗಿ, 2017ರಲ್ಲಿ ರಾಜ್ಯಕ್ಕೆ ಅಪ್ಪಳಿಸಿದ ಓಖ್ಲಿ ಚಂಡಮಾರುತ, 2018 ಮತ್ತು 2019ರಲ್ಲಿ ಸಂಭವಿಸಿದ ಭಾರಿ ಮಳೆ ಹಾಗೂ ಭೂ ಕುಸಿತ,

**ಪುಟ 8 ನೋಡಿ**




ಹೆಚ್ಚಿನ ಎಲ್‌ಡಿಎಫ್ ಅಭ್ಯರ್ಥಿಗಳು ಭಾರೀ ಅಂತರದಿಂದ ಗೆದ್ದಿದ್ದಾರೆ; ಕೆಲವು ಅಭ್ಯರ್ಥಿಗಳು ಬಹಳ ಕಡಿಮೆ ಅಂತರದಿಂದ ಸೋತಿದ್ದಾರೆ, ವಿಶೇಷವಾಗಿ ಬಿಜೆಪಿ ತನ್ನ ಮತಗಳನ್ನು ಯುಡಿಎಫ್‌ಗೆ ವರ್ಗಾಯಿಸಿದ ಕ್ಷೇತ್ರಗಳಲ್ಲಿ.

***

60% ಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದ 5 ಅಭ್ಯರ್ಥಿಗಳು

ಕೆ.ಕೆ.ಶೈಲಜಾ (61.96%); ಎಂಎಂ. ಮಣಿ(63.94%); ಟಿ ಐ ಮಧುಸೂಧನನ್(62.67%);ಎ.ಎನ್. ಷಂಶೀರ್(61.51%); ಮತ್ತು ಎಂ ವಿಜಿನ್ (60.29%)

ಮುಖ್ಯಮಂತ್ರಿ ಪಿಣರಾಯಿ ವಿಜಯನ್ 59.24% ಮತ ಗಳಿಸಿದರು.

ಇತರ 17 ಅಭ್ಯರ್ಥಿಗಳೂ 50%ಕ್ಕಿಂತ ಹೆಚ್ಚಿನ ಮತಗಳನ್ನು ಗಳಿಸಿದ್ದಾರೆ.

***

ಎಲ್‌ಡಿಎಫ್‌ನಿಂದ ಸ್ಪರ್ಧಿಸಿದ್ದ 15 ಮಹಿಳ ಅಭ್ಯರ್ಥಿಗಳಲ್ಲಿ 10 ಮಂದಿ ಭಾರೀ ಅಂತರದಿಂದ ಗೆದ್ದಿದ್ದಾರೆ.ಇವರಲ್ಲಿ 8 ಮಹಿಳೆಯರು ಸಿಪಿಯ(ಎಂ)ನಿಂದ ಮತ್ತು ಇಬ್ಬರು ಸಿಪಿಐನಿಂದ ಸ್ಪರ್ಧಿಸಿದವರು.

ಯುಡಿಎಫ್‌ನಿಂದ ಏಕೈಕ ಮಹಿಳ ಅಭ್ಯರ್ಥಿ ಗೆದ್ದಿದ್ದಾರೆ.

***

ಮೀನುಗಾರಿಕಾ ಮಂತ್ರಿಯಾಗಿದ್ದ ಜೆ ಮರ್ಸಿಕುಟ್ಟಿ ಅಮ್ಮ ಕುಂದರ ಕ್ಷೇತ್ರದಿಂದ ಸೋಲಲು ಕಾರಣ ಬಿಜೆಪಿ ತನ್ನ ಮತಗಳನ್ನು ಯುಡಿಎಫ್‌ಗೆ ವಗಾಯಿಸಿದ್ದರಿಂದ ಎಂಬುದು ಸ್ಪಷ್ಟ. ಇಲ್ಲಿ ಬಿಜೆಪಿ ಅಭ್ಯರ್ಥಿಗೆ 20,257 ಮತಗಳು ಸಿಕ್ಕಿದ್ದವು, ಇ ಭಾರಿ ಅದು 6100ಕ್ಕೆ ಇಳಿಯಿತು ಎಂಬುದು ಇದನ್ನು ತೋರಿಸುತ್ತದೆ.

***

ಮತ ವ್ಯಾಪಾರ ನಡೆದಿರುವದು ಇಲ್ಲಿ ಮಾತ್ರವೇ ಅಲ್ಲ. ತ್ರಿಪುನಿತುರದಲ್ಲಿ ಹಾಲಿ ಶಾಸಕ ಎಂ.ಸ್ವರಾಜ್ ಕೇವಲ 1050 ಮತಗಳಿಂದ ಸೋತರು. ಇಲ್ಲಿ ಬಿಜೆಪಿ ಅಭ್ಯರ್ಥಿಯ ಮತಗಳು ಕಳೆದ ಬಾರಿಗೆ ಹೋಲಿಸಿದರೆ 6057ರಷ್ಟು ಇಳಿದಿದೆ.

ಒಟ್ಟು 90 ಕ್ಷೇತ್ರಗಳಲ್ಲಿ ಬಿಜೆಪಿಯಿಂದ ಯುಡಿಎಫ್‌ಗೆ ಮತಗಳ ವರ್ಗಾವಣೆಯಾಗಿದ್ದು, ಸುಮಾರು 10 ಯುಡಿಎಫ್ ಅಭ್ಯರ್ಥಿಗಳು ಈ ರೀತಿ ಮತವ್ಯಾಪಾರದಿಂದಲೇ ಗೆದ್ದಿರುವುದು ನಡೆದಿರುವುದು ಕಾಣ ಬಂದಿದೆ.

ಥವನೂರ್ ಕ್ಷೇತ್ರದಲ್ಲೂ ಇಂತಹ ಪ್ರಯತ್ನ ನಡೆದಿದೆ. ಆದರೂ ಮಂತ್ರಿಯಾಗಿದ್ದ ಡಾ.ಕೆ.ಟಿ.ಜಲೀಲ್ ಕೇವಲ 2564 ಮತಗಳಿಂದಲಾದರೂ ಗೆದ್ದಿದ್ದಾರೆ.

# ಕೇರಳ : ಒಂದು ಚಾರಿತ್ರಿಕ ಮಹತ್ವದ ವಿಜಯ



ಪುಟ 7 ರಿಂದ

2018ರ ನಿಫಾ ವೈರಸ್ ರೋಗ ಮತ್ತು 2020–21ರಲ್ಲಿ ಕೊವಿಡ್–19 ವೈರಸ್ ಮಹಾಸೋಂಕು ಮುಂತಾದ ಒಂದಾದ ಮೇಲೊಂದು ಬಂದೆರಗಿದ ಬಿಕ್ಕಟ್ಟುಗಳನ್ನು ಪಿಣರಾಯಿ ವಿಜಯನ್ ಸರ್ಕಾರ ಎದುರಿಸಿದ ರೀತಿಯು ಆಡಳಿತದ ಒಂದು ವಿಭಿನ್ನ ಉತ್ಕೃಷ್ಟತೆ ಮತ್ತು ಆಡಳಿತದ ಗುಣಮಟ್ಟವನ್ನು ತೋರಿಸಿತು. ಜನತೆಗೆ ಸಂಬಂಧಿಸಿದಂತೆ ಒಂದು ಸರಕಾರಕ್ಕೆ ಒರೆಗಲ್ಲು ಎಂದರೆ ಜನಗಳ ಜೀವನವನ್ನು ಹಾಗೂ ಜೀವನೋಪಾಯಗಳನ್ನು ಕಾಡುವ ಬಿಕ್ಕಟ್ಟುಗಳನ್ನು ಸರ್ಕಾರ ಹೇಗೆ ಪರಿಣಾಮಕಾರಿಯಾಗಿ ನಿಭಾಯಿಸುತ್ತದೆ ಎನ್ನುವುದು. ಎಲ್‌ಡಿಎಫ್ ಸರ್ಕಾರ ಈ ಪರೀಕ್ಷೆಯಲ್ಲಿ ಉನ್ನತ ಶ್ರೇಯಾಂಕದೊಂದಿಗೆ ಉತ್ತೀರ್ಣವಾಗಿದೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿಯ ವಿರುದ್ಧ ಎಲ್‌ಡಿಎಫ್ ಚುನಾವಣಾ ಹೋರಾಟ ನಡೆಸಿತ್ತು. ಈ ಎರಡೂ ಶಕ್ತಿಗಳು ಎಲ್‌ಡಿಎಫ್ ವಿರುದ್ಧ ವಿಷಮಯ ಅಪಪ್ರಚಾರ ನಡೆಸಿದವು. ಸರ್ಕಾರಕ್ಕೆ, ಅದರಲ್ಲೂ ವಿಶೇಷವಾಗಿ ಸಿಪಿಐ(ಎಂ)ಗೆ ಮಸಿ ಬಳಿಯಲು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಬಳಸುವುದರ ಸಹಿತ ಎಲ್ಲ ರೀತಿಯ ಅನೀತಿಯುತ ಪ್ರಯತ್ನಗಳನ್ನು ನಡೆಸಲಾಯಿತು.

1980ರಲ್ಲಿ ಒಂದು ಎಡ–ವಿರೋಧಿ ಕೂಟವಾಗಿ ರೂಪುಗೊಂಡ ಯುಡಿಎಫ್, ಈಗ ರಾಜಕೀಯವಾಗಿ ಮುಂದೆ ದಾರಿಯಿಲ್ಲದ ಸ್ಥಿತಿಯನ್ನು ತಲುಪಿದೆ. ಭಾರಿ ಬೊಗಳೆ ಕೊಚ್ಚಿಕೊಂಡ ಹಾಗೂ ಅಪಾರ ಪ್ರಮಾಣದಲ್ಲಿ ಹಣಬಲ ಬಳಸಿದ ಬಿಜೆಪಿಗೆ ಈ ಹಿಂದೆ ಇದ್ದ ತನ್ನ ಏಕೈಕ ಸ್ಥಾನವನ್ನೂ ಒಬ್ಬ ಸಿಪಿಐ(ಎಂ) ಅಭ್ಯರ್ಥಿ ಗೆದ್ದುಕೊಳ್ಳುವಂತಹ ದುರ್ದೆಸೆ ಬಂದಿದೆ.

**ಸಾಮೂಹಿಕ ಕೆಲಸ ಮತ್ತು ವೈಯಕ್ತಿಕ ಹೊಣೆಗಾರಿಕೆಯ ಪರಂಪರೆ**

ಈ ಐತಿಹಾಸಿಕ ವಿಜಯವನ್ನು ಕೇವಲ ಪಿಣರಾಯಿ ವಿಜಯನ್‌ರ ವ್ಯಕ್ತಿತ್ವ ಹಾಗೂ ಪಾತ್ರದ ಪರಿಣಾಮ ಎಂದು ಹೇಳಿ ಅದರ ಮಹತ್ವವನ್ನು ಕಡೆಗಣಿಸಲು ಮಾಧ್ಯಮದ ಒಂದು ವಿಭಾಗ ಮತ್ತು ಕೆಲವು ರಾಜಕೀಯ ವೀಕ್ಷಕರು ಪ್ರಯತ್ನಿಸಿದ್ದಾರೆ. ಅವರ ಪ್ರಕಾರ, ಒಬ್ಬ "ಸರ್ವೋಚ್ಚ ನಾಯಕ' ಅಥವಾ "ಬಲಾಢ್ಯ ವ್ಯಕ್ತಿ'ಯ ಉದಯವಾಗಿರುವುದೇ ಎಲ್‌ಡಿಎಫ್‌ನ ಚುನಾವಣಾ ಯಶಸ್ಸಿಗೆ ಮುಖ್ಯ ಕಾರಣ. ಒಬ್ಬ ವ್ಯಕ್ತಿ ಸರ್ಕಾರ ಮತ್ತು ಪಕ್ಷದಲ್ಲಿ ಪ್ರಾಬಲ್ಯ ಹೊಂದಿದ್ದಾರೆ ಎಂದವರು ಹೇಳುತ್ತಾರೆ.

ಒಬ್ಬ ಮುಖ್ಯಮಂತ್ರಿಯಾಗಿ ಪಿಣರಾಯಿ ವಿಜಯನ್ ನೀತಿ ನಿರೂಪಣೆಗೆ ರಾಜಕೀಯ ಮಾರ್ಗದರ್ಶನ ಒದಗಿಸುವಲ್ಲಿ ಒಂದು ಹೊಸ ಮಾನಕವನ್ನು ರೂಪಿಸಿದರು ಎನ್ನುವುದರಲ್ಲಿ ಅನುಮಾನವಿಲ್ಲ. ಅವರು ಸದಾ ಜನರ ಹಿತವನ್ನು ಮನಸ್ಸಲ್ಲಿಟ್ಟುಕೊಳ್ಳುವ ಮತ್ತು ನೀತಿಗಳನ್ನು ಅನುಷ್ಠಾನಗೊಳಿಸುವ ಆಡಳಿತಾತ್ಮಕ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಆದಾಗ್ಯೂ ಈ ವಿಜಯವು ವೈಯಕ್ತಿಕ ಹಾಗೂ ಸಾಮೂಹಿಕ ಹೀಗೆ ಎರಡೂ ಪ್ರಯತ್ನಗಳ ಫಲವಾಗಿದೆ. ಸಿಪಿಐ(ಎಂ) ಮತ್ತು ಎಲ್‌ಡಿಎಫ್, ಸಾಮೂಹಿಕ ಕೆಲಸ ಮತ್ತು ವೈಯಕ್ತಿಕ ಹೊಣೆಗಾರಿಕೆಯ ಪರಂಪರೆಯನ್ನು ಮುಂದುವರಿಸಲಿವೆ.



**ಪ್ರತಿಕೂಲ ಸನ್ನಿವೇಶದಲ್ಲಿ ಕೆಲಸ**

ಕೇರಳದ ಎಲ್‌ಡಿಎಫ್ ಸರ್ಕಾರ ಕಳೆದ ಐದು ವರ್ಷಗಳಲ್ಲಿ ತೀರಾ ಪ್ರತಿಕೂಲ ರಾಜಕೀಯ ವಾತಾವರಣದ ನಡುವೆ ಕೆಲಸ ಮಾಡಬೇಕಾಗಿತ್ತು. ದೇಶದಾದ್ಯಂತ ಬಲಪಂಥೀಯ ಆಕ್ರಮಣದಿಂದಾಗಿ ಎಡ ಶಕ್ತಿಗಳು ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ತಮ್ಮ ಭದ್ರ ಕೋಟೆಯನ್ನು ಕಳೆದು ಕೊಂಡಿವೆ. ಸಂಸತ್ತಿನಲ್ಲಿ ಕೂಡ ಎಡ ಶಕ್ತಿ ಅತ್ಯಂತ ಕಡಿಮೆ ಪ್ರಾತಿನಿಧ್ಯ ಹೊಂದಿದೆ. ಎಲ್‌ಡಿಎಫ್ ಸರ್ಕಾರದ ಅವಧಿಯ ಕೊನೆಯ ವರ್ಷವಂತೂ ಸರ್ಕಾರವನ್ನು ಬಲಪಂಥೀಯ ಹಾಗೂ ಕಮ್ಯೂನಿಸ್ಟ್–ವಿರೋಧಿ ಶಕ್ತಿಗಳು ಅಕ್ಷರಶಃ ಮುತ್ತಿಗೆ ಹಾಕಿದಂತಿತ್ತು. ಆದರೆ ಇದ್ಯಾವುದಕ್ಕೂ ಜಗ್ಗದೆ ಎಲ್‌ಡಿಎಫ್ ಸರ್ಕಾರ ಜನ–ಕೇಂದ್ರಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಶಕ್ತವಾಗಿ ಅನುಷ್ಠಾನಗೊಳಿಸಿತು.

ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರದ ಮರು–ಆಯ್ಕೆಯು ಇಂದು ದೇಶದಲ್ಲಿ ಎಡ ಪಂಥದ ಪ್ರಸ್ತುತತೆಯನ್ನು ಸಕಾಲಿಕವಾಗಿ ನೆನಪಿಸಿಕೊಟ್ಟಿದೆ. ಈ ಸರ್ಕಾರದ ⇨

# ತಮಿಳುನಾಡು: ಜಾತ್ಯತೀತ ಪ್ರಗತಿಪರ ರಂಗಕ್ಕೆ ಭಾರೀಜಯ

## ಬಿಜೆಪಿಯ ಹಿಂದುತ್ವ ರಾಜಕಾರಣಕ್ಕೆ, ಒಕ್ಕೂಟ ತತ್ವ–ವಿರೋಧಿ ನಡೆಗೆ ಮತದಾರರ ತಿರಸ್ಕಾರ

**ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟ ಮೂರನೇ ಎರಡು ಬಹುಮತ ಪಡೆದಿದೆ. ಯನ್ನು ಅಧಿಕಾರದಿಂದ ಕೆಳಗಿಳಿಸಿದೆ.**

**ಮೇ 7ರಂದು ಡಿಎಂಕೆ ಮುಖಂಡ ಎಂಕೆ.ಸ್ಟಾಲಿನ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.**



ತಮಿಳುನಾಡಿನ ಜನಪ್ರಿಯ ಮುಖಂಡರಾದ ಜಯಲಲಿತಾ ಮತ್ತು ಕರುಣಾನಿಧಿ ಇಲ್ಲದೇ ನಡೆದ ಮೊದಲ ಚುನಾವಣೆಯಲ್ಲಿ ಕಳೆದ ಒಂದು ದಶಕದಿಂದ ಅಧಿಕಾರದಲ್ಲಿದ್ದ ಎಐಎಡಿಎಂಕೆ ಸೋಲುಂಡಿದೆ. ಜಯಲಲಿತಾರವರ ನಂತರ ಆಂತರಿಕ ಭಿನ್ನಮತಗಳು ಬಾಧಿಸಿದ್ದ ಈ ಪಕ್ಷದ ಬೆನ್ನ ಮೇಲೇರಿ ತಮಿಳುನಾಡಿನಲ್ಲಿ ಬೇರೂರಬಹುದೆಂಬ ಬಿಜೆಪಿಯ ಪ್ರಯತ್ನ ವಿಫಲವಾಗಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಬೆಂಬಲದಿಂದ ಮತ್ತೆ ಅಧಿಕಾರಕ್ಕೆ ಬರಬಹುದು ಎಂದುಕೊಂಡು ಕೇಂದ್ರ ಸರಕಾರದ ಜನ–ವಿರೋಧಿ ಮತ್ತು ಒಕ್ಕೂಟತತ್ವ–ವಿರೋಧಿ ನಡೆಗಳನ್ನೆಲ್ಲ ಬೆಂಬಲಿಸಿಕೊಂಡು ಬಂದಿರುವ ಎಐಎಡಿಎಂಕೆಗೆ ಈ ನಂಟೇ ಮಾರಕವಾಗಿರುವಂತೆ ಕಾಣುತ್ತದೆ.

ಸೀಟುಗಳು ಮತ್ತು ಮತಗಳಿಕೆ %

| | | | |
|---|---|---|---|
| **ಜಾತ್ಯತೀತ ಪ್ರಗತಿಪರ ಮೈತ್ರಿಕೂಟ** | | | |
| ಡಿಎಂಕೆ | 133 | 37.70 | 2016ರಲ್ಲಿ 89 |
| ಕಾಂಗ್ರೆಸ್ | 18 | 4.27 | 8 |
| ವಿಸಿಕೆ | 4 | 1.25 | – |
| ಸಿಪಿಐ | 2 | 1.09 | 0 |
| ಸಿಪಿಐ(ಎಂ) | 2 | 0.85 | 0 |
| **ಒಟ್ಟು** | **159** | **45.64** | |
| **ಎನ್.ಡಿ.ಎ.** | | | |
| ಎಐಎಡಿಎಂಕೆ | 66 | 33.29 | 2016ರಲ್ಲಿ 136 |
| ಪಿಎಂಕೆ | 5 | 3.8 | 0 |
| ಬಿಜೆಪಿ | 4 | 2.62, | 0 |
| **ಒಟ್ಟು** | **75** | **39.71** | |

ಒಟ್ಟು 234 ಕ್ಷೇತ್ರಗಳಲ್ಲಿ ಡಿಎಂಕೆ ನೇತೃತ್ವದ ರಂಗ 159 ಕ್ಷೇತ್ರಗಳಲ್ಲಿ ಗೆದ್ದಿದೆ. ಎಐಎಡಿಎಂಕೆ ನೇತೃತ್ವದ ರಂಗ 75 ಕ್ಷೇತ್ರಗಳಲ್ಲಿ ಗೆದ್ದಿದೆ.

ದ್ರಾವಿಡ ಚಳುವಳಿ ಪ್ರಬಲವಾಗಿರುವ ಈ ರಾಜ್ಯದಲ್ಲಿ ಇದುವರೆಗೆ ರಾಜಕೀಯ ಪಕ್ಷಗಳಲ್ಲಿ ಪ್ರಾಬಲ್ಯ ಮೆರೆದವರು ಸಿನಿಮಾರಂಗದ ಘಟಾನುಘಟಿ ವ್ಯಕ್ತಿಗಳೇ ಎಂಬುದೊಂದು ವೈಶಿಷ್ಟ್ಯ. ದ್ರಾವಿಡ ಚಳುವಳಿಯಲ್ಲಿ ಒಡಕಿನ ನಂತರ, ಕೇರಳದಂತೆ ಇಲ್ಲಿಯೂ ಎಐಡಿಎಂಕೆ ಮತ್ತು ಡಿಎಂಕೆ ನಡುವೆ ಪ್ರತಿಬಾರಿಯೂ ಸ್ಪರ್ಧೆ ಏರ್ಪಡುತ್ತಿದೆ. ಆದರೆ ಈ ಬಾರಿ ಹೊಸ ಪಕ್ಷಗಳು ಮುನ್ನಲೆಗೆ ಬರಲಿವೆ ಎಂದು ಲೆಕ್ಕಾಚಾರ ಹಾಕಲಾಗಿತ್ತು. ಆದರೆ ಮತದಾರರು ಎಲ್ಲಾ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿ ಡಿಎಂಕೆಗೆ ಸ್ಪಷ್ಟ ಬಹುಮತವನ್ನು ನೀಡಿದ್ದಾರೆ.

ತಮಿಳುನಾಡಿನಲ್ಲಿ ಒಟ್ಟು ಐದು ರಂಗಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದವು.

**ಎನ್‌ಡಿಎ** ಮೈತ್ರಿಕೂಟದಲ್ಲಿ ಒಟ್ಟು 10 ಪಕ್ಷಗಳು ಸ್ಪರ್ಧಿಸಿದವು. ಎಐಎಡಿಎಂಕೆ, ಪಿಎಂಕೆ, ಬಿಜೆಪಿ, ಟಿಎಂಸಿ ಸೇರಿದಂತೆ ಇತರೆ ಸಣ್ಣ ಪುಟ್ಟ ಪಕ್ಷಗಳು ಈ ರಂಗದ ಭಾಗ.

**ಜಾತ್ಯತೀತ ಪ್ರಗತಿಪರ ಮೈತ್ರಿಕೂಟ**ದಲ್ಲಿ ಒಟ್ಟು 13 ಪಕ್ಷಗಳಿವೆ. ಡಿಎಂಕೆ, ಕಾಂಗ್ರೆಸ್, ಸಿಪಿಐ(ಎಂ) ಸಿಪಿಐ, ಎಂಡಿಎಂಕೆ, ವಿಕೆಸಿ ಕೆಎಂಡಿಕೆ, ಐಯುಎಂಎಲ್, ಎಂಎಂಕೆ ಸೇರಿದಂತೆ ಇತರೆ ಪಕ್ಷಗಳು ಈ ರಂಗದ ಭಾಗ.

**ಎಎಂಎಂಕೆ ಮೈತ್ರಿಕೂಟ** ದಲ್ಲಿ ಒಟ್ಟು 8 ಪಕ್ಷಗಳು: ಎಎಂಎಂಕೆ, ಡಿಎಂಡಿಕೆ, ಎಸ್‌ಡಿಪಿಐ, ಎಐಐಎಂಐಎಂ ಸೇರಿದಂತೆ ಇತರೆ ಪಕ್ಷಗಳು. .

**ಎಂಎನ್‌ಎಂ ಮೈತ್ರಿಕೂಟ**ದಲ್ಲಿ ಒಟ್ಟು 5 ಪಕ್ಷಗಳು: ಎಂಎನ್‌ಎಂ, ಐಜೆಕೆ, ಎಐಎಸ್‌ಎಂಕೆ, ಟಿಎಂಜೆಕೆ, ಜೆಡಿ(ಎಸ್).

**ಸಗಾಯಂ ಮೈತ್ರಿಕೂಟ:** ಎಸ್‌ಎಪಿ, ಟಿಎನ್‌ವೈಪಿ ವಿಟಿಕೆ ಈ ರಂಗದ ಭಾಗವಾಗಿರುವ ಪಕ್ಷಗಳು.

**ತಲೆಕೆಳಗಾದ ಬಿಜೆಪಿ ಲೆಕ್ಕಾಚಾರ**

2016 ರ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಒಂದೂ ಸ್ಥಾನವನ್ನು ಗೆದ್ದಿರಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ಎರಡನೇ ಬಾರಿಗೆ ಭಾರೀ ವಿಜಯದ ನಂತರ ದಕ್ಷಿಣ ಭಾರತದಲ್ಲಿ ನೆಲೆಯನ್ನು ಗಟ್ಟಿಗೊಳಿಸಲು, ವಿಶೇಷವಾಗಿ ಜಯಲಲಿತ ರವರ ನಿರ್ಗಮನದ ನಂತರ ಸಾಧ್ಯವಾಗುತ್ತದೆ ಎಂದು ಬಿಜೆಪಿ–ಆರೆಸ್ಸೆಸ್ ನಿರೀಕ್ಷಿಸಿದ್ದರು. ನರೇಂದ್ರ ಮೋದಿ, ಅಮಿತ್ ಶಾ ಸಾಕಷ್ಟು ಪ್ರಚಾರವನ್ನು ನಡೆಸಿದರು. ಗೆಲ್ಲುವುದಕ್ಕಾಗಿ ಸಿನಿ ತಾರೆಯರನ್ನು, ಮಾಜಿ ಅಧಿಕಾರಿಗಳನ್ನು ಕಣಕ್ಕಿಳಿಸಿದರು. ಆದರೆ ತಮಿಳುನಾಡಿನ ಮತದಾರರು ಇವಕ್ಕೆಲ್ಲ ಮಾರು ಹೋದಂತೆ ಕಾಣುತ್ತಿಲ್ಲ.

ಚುನಾವಣೆಯಲ್ಲಿ ಅರವರಕಚ್ಚಿ ಕ್ಷೇತ್ರದಿಂದ

ಪುಟ 11 ನೋಡಿ



ನಾಗೈಮಣಿ



ಎಂ. ಚಿನ್ನದೊರೈ

### ಎಡಪಕ್ಷಗಳಿಗೆ 4 ಸ್ಥಾನಗಳು

ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ರಂಗದ ಭಾಗವಾಗಿರುವ ಎಡಪಕ್ಷಗಳಾದ ಸಿಪಿಐ(ಎಂ) ಮತ್ತು ಸಿಪಿಐ ತಲಾ ಆರು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ತಲಾ ಎರಡು ಸ್ಥಾನಗಳಲ್ಲಿ ಗೆದ್ದಿವೆ.

ಗಂಧರ್ವಕೋಟ್ಟೈ ಮೀಸಲು ಕ್ಷೇತ್ರದಿಂದ ಸಿಪಿಐ(ಎಂ)ನ **ಎಂ.ಚಿನ್ನದೊರೈ** 69710 ಮತಗಳನ್ನು ಗಳಿಸಿ ಸಮೀಪದ ಎಐಎಡಿಎಂಕೆ ಪ್ರತಿಸ್ಪರ್ಧಿಯನ್ನು 12721 ಮತಗಳಿಂದ ಸೋಲಿಸಿ ಗೆದ್ದಿದ್ದಾರೆ.

ಕಿಲ್‌ವೆಲ್ಲೂರು ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿ **ನಾಗೈಮಣಿ** 67988 ಮತಗಳನ್ನು ಪಡೆದು ಪಿಎಂಕೆ ಯ ಅಭ್ಯರ್ಥಿಯನ್ನು 51 ಸಾವಿರಕ್ಕೂ ಹೆಚ್ಚು ಮತಗಳಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಥಳಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿದ ಸಿಪಿಐ ಅಭ್ಯರ್ಥಿ **ರಾಮಚಂದ್ರನ್ ಟಿ** ಅವರು 1,20,641 ಮತಗಳನ್ನು ಪಡೆದು ಬಿಜೆಪಿ ಅಭ್ಯರ್ಥಿಯನ್ನು 56 ಸಾವಿರಕ್ಕೂ ಹೆಚ್ಚು ಅಂತರದಿಂದ ಸೋಲಿಸಿದ್ದಾರೆ.

ತಿರುಥುರೈಪೂಂಡಿ ಮೀಸಲು ಕ್ಷೇತ್ರದಿಂದ ಸಿಪಿಐ ಅಭ್ಯರ್ಥಿ **ಮಾರಿಮುತ್ತು ಕೆ** ಅವರು 97,092 ಮತಗಳನ್ನು ಪಡೆದು ಎಐಎಡಿಎಂಕೆ ಅಭ್ಯರ್ಥಿಯನ್ನು 30 ಸಾವಿರ ಮತಗಳಿಂದ ಸೋಲಿಸಿ ಜಯ ಗಳಿಸಿದ್ದಾರೆ.

ಎಡಪಕ್ಷಗಳ ಉಳಿದ 8 ಅಭ್ಯರ್ಥಿಗಳಲ್ಲಿ 7 ಮಂದಿ ಎರಡನೇ ಸ್ಥಾನ ಪಡೆದಿದ್ದಾರೆ.

ಸಿಪಿಐ(ಎಂ) ಅಭ್ಯರ್ಥಿಗಳು): ಪುಟ 11 ನೋಡಿ

ನೀತಿಗಳು ದೇಶದಲ್ಲಿ ನವ-ಉದಾರವಾದಿ ಹಿಂದುತ್ವ ಆಡಳಿತಕ್ಕೆ ಒಂದು ಅತ್ಯಂತ ಮಹತ್ವದ ಪರ್ಯಾಯವನ್ನು ಪ್ರತಿನಿಧಿಸುತ್ತವೆ.

ಹೊಸ ಎಲ್‌ಡಿಎಫ್ ಸರ್ಕಾರಕ್ಕೆ, ಅದು ಜನತೆಯ ಆಶೋತ್ತರಗಳನ್ನು ಈಡೇರಿಸುವ ಹಾಗೂ ಕೇರಳವನ್ನು ಒಂದು ಉತ್ತಮ ಸಮಾಜವಾಗಿ ರೂಪಿಸುವತ್ತ ಸಾಗುವಲ್ಲಿ ದೇಶದ ಎಲ್ಲ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಶಕ್ತಿಗಳ ಶುಭ ಹಾರೈಕೆ ಮತ್ತು ಬೆಂಬಲವಿರುತ್ತದೆ.

ಅನು: **ವಿಶ್ವ**

ಗೆದ್ದಿರುವ ಪ್ರಮುಖ ಎಲ್‌ಡಿಎಫ್ ಅಭ್ಯರ್ಥಿಗಳಲ್ಲಿ ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷರಾದ ಪಿ.ಎ.ಮುಹಮ್ಮದ್ ರಿಯಾಸ್ ಮತ್ತು ಎಸ್‌ಎಫ್ಐ ರಾಜ್ಯ ಕಾರ್ಯದಶಿ ಕೆ ಮೆಂ ಸಚಿನ್ ದೇವ್, ದೇಶಾಭಿಮಾನಿ ಮುಖ್ಯ ಸಂಪಾದಕರು ಮತ್ತು ಮಾಜಿ ರಾಜ್ಯ ಸಭಾ ಸದಸ್ಯರಾದ ಪಿ ರಾಜೀವ್, ಇನ್ನೊಬ್ಬ ಮಾಜಿ ಸಂಸದ್ ಸದಸ್ಯ ಎಂ ಬಿ ರಾಜೇಶ್ ಸೇರಿದ್ದಾರೆ.

***

ಬಿಜೆಪಿ ಕಳೆದ ವಿಧಾನಸಭೆಯಲ್ಲಿ ಹೊಂದಿದ್ದ ಏಕೈಕ ಕ್ಷೇತ್ರವಾದ ತಿರುವನಂತಪುರದ ನೇಮಂನಲ್ಲಿ ಸಿಪಿಐ(ಎಂ)ನ ವಿ. ಶಿವನ್ ಕುಟ್ಟಿ ಗೆದ್ದಿದ್ದಾರೆ. 2016ರಲ್ಲಿ ಯುಡಿಎಫ್ ಮತ ವರ್ಗಾವಣೆಯಿಂದ ಬಿಜೆಪಿಯ ಕುಮ್ಮನಂ ರಾಜಶೇಖರನ್ ಗೆದ್ದಿದರು. ಯುಡಿಎಫ್ ಲೋಕಸಭಾ ಸದಸ್ಯ ಕೆ. ಮುರಳೀಧರನ್ ಅವರನ್ನು ಅಭ್ಯರ್ಥಿಯಾಗಿ ಇಳಿಸಿತ್ತು. ಅವರು ಮೂರನೇ ಸ್ಥಾನದಲ್ಲಿದ್ದಾರೆ.

***

ಎನ್‌ಡಿಎ ಮುಖ್ಯಮಂತ್ರಿ ಅಬ್ಯರ್ಥಿ ಇ.ಶ್ರೀಧರನ್ ಪಾಲಕ್ಕಾಡ್‌ನಲ್ಲಿ ಸೋತಿದ್ದಾರೆ.

# ಉತ್ತಮ ಆಳ್ವಿಕೆ ಮತ್ತು ಕಲ್ಯಾಣ ಕ್ರಮಗಳನ್ನು ಮತದಾರರು ಪುರಸ್ಕರಿಸಿದರು, ಭ್ರಷ್ಟಾಚಾರದ ಅಪಪ್ರಚಾರವನ್ನು ತಿರಸ್ಕರಿಸಿದರು



**ಇವು ಲೋಕನೀತಿ-ಸಿಎಸ್‌ಡಿಎಸ್ ಮತದಾನದ ನಂತರ ನಡೆಸಿದ ಸರ್ವೆಯಲ್ಲಿ ಕಂಡು ಬಂದ ಅಂಶಗಳು(ದಿ ಹಿಂದು, ಮೇ 7, 2021)**

ಈ ಸರ್ವೆಯಲ್ಲಿ ಪಾಲ್ಗೊಂಡ 73%ದಷ್ಟು ಮಂದಿ ಎಲ್‌ಡಿಎಫ್ ಸರಕಾರದ ಕೆಲಸದಿಂದ ಸಂತುಷ್ಟರಾಗಿದ್ದರು. ಮುಖ್ಯವಾಗಿ ಸರಕಾರೀ ಆಸ್ಪತ್ರೆಗಳಲ್ಲಿನ ಸೌಕರ್ಯಗಳು(73%), ಸರಕಾರೀ ಶಾಲೆಗಳಲ್ಲಿನ ಸೌಕರ್ಯಗಳು(72%), ರಸ್ತೆಗಳ ಸ್ಥಿತಿ-ಗತಿ(66%),ವಿದ್ಯುತ್ ಪೂರೈಕೆ(65%), ಕುಡಿಯುವ ನೀರಿನ ಪೂರೈಕೆ(52%), ಸಾರ್ವಜನಿಕ ಸಾರಿಗೆ(51%)ಕಳೆದ 5 ವರ್ಷಗಳಲ್ಲಿ ಉತ್ತಮಗೊಂಡಿವೆ ಎಂದಿದ್ದಾರೆ.

***

ಯುಡಿಎಫ್ ಮತ್ತು ಬಿಜೆಪಿ ಮತ್ತು ಮಾಧ್ಯಮಗಳು ಚುನಾವಣಾ ಪ್ರಚಾರದ ವೇಳೆಯಲ್ಲಿ ಭ್ರಷ್ಟಾಚಾರ ಮತ್ತು ಹಗರಣಗಳೆಂದು ಬೊಬ್ಬೆ ಹಾಕಿದರೂ ಕೇವಲ 2% ಮಂದಿಗೆ ಇದೊಂದು ಚುನಾವಣಾ ಪ್ರಶ್ನೆ ಎಂದನಿಸಿತ್ತು.

***

ಅದೇ ರೀತಿ ಶಬರಿಮಲೆ ಪ್ರಶ್ನೆಯನ್ನು ಕೆದಕಿ ಗರಿಷ್ಟ ಲಾಭ ಪಡೆಯುವ ಬಿಜೆಪಿ ಪ್ರಯತ್ನಗಳನ್ನೂ ಮತದಾರರು ಸಂಪೂರ್ಣವಾಗಿ ಉಪೇಕ್ಷಿಸಿದರು. ಕೇವಲ 17% ಮಂದಿಗೆ ಮಾತ್ರ ಇದೊಂದು ಸಮಸ್ಯೆಯಾಗಿ ಕಂಡಿದೆ.

**ಕುತೂಹಲಕಾರೀ ಸಂಗತಿಯೆಂದರೆ ಶಬರಿಮಲೆ ಇರುವ ಪತ್ತನಂತಿತ್ತ ಜಿಲ್ಲೆಯ ಎಲ್ಲ 5 ವಿಧಾನಸಭಾ ಕ್ಷೇತ್ರಗಳಲ್ಲಿ ಎಲ್‌ಡಿಎಫ್ ಅಭ್ಯರ್ಥಿಗಳು ಗೆದ್ದಿದ್ದಾರೆ.**

***

**ಸಮಾಜದ ಎಲ್ಲ ವಿಭಾಗಗಳಿಂದ ಎಲ್‌ಡಿಎಫ್ ಬೆಂಬಲ** ಪಡೆದಿದೆ. ವಿಶೇಷವಾಗಿ ದಲಿತ, ಒಬಿಸಿ ಮತ್ತು ಅಲ್ಪಸಂಖ್ಯಾತರು ಎಲ್‌ಡಿಎಫ್‌ನ ಈ ಬೃಹತ್ ವಿಜಯದಲ್ಲಿ ಪ್ರಮುಖ ಕೊಡುಗೆ ನೀಡಿದ್ದಾರೆ ಎಂದು ಈ ಸರ್ವೆಯಲ್ಲಿ ಕಂಡು ಬಂದಿದೆ.

ಒಟ್ಟಾರೆಯಾಗಿ, ಹಿಂದುಗಳ ನಡುವೆ ಎಲ್‌ಡಿಎಫ್ ಬೆಂಬಲದಲ್ಲಿ 2% ಹೆಚ್ಚಳವಾಗಿದ್ದರೆ, ಯುಡಿಎಫ್ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ತಲಾ1% ದಷ್ಟು ಕಳಕೊಂಡಿದ್ದಾರೆ ಎಂಬುದು ಗಮನಾರ್ಹ. ದಲಿತರ ಬೆಂಬಲದಲ್ಲಿ 18%ದಷ್ಟು ಹೆಚ್ಚಳ ಕಂಡು ಬಂದಿದ್ದರೆ, ಮುಸ್ಲಿಮರು ಮತ್ತು ಕ್ರೈಸ್ತರ ನಡುವೆ ತಲಾ 4%ದಷ್ಟು ಬೆಂಬಲ ಪ್ರಮಾಣ ಹೆಚ್ಚಿದೆ, ಈ ಸಮುದಾಯಗಳ ಬಡವಿಭಾಗಗಳ ನಡುವೆ ಇದು ಅನುಕ್ರಮವಾಗಿ 11% ಮತ್ತು 8%ದಷ್ಟು ಹೆಚ್ಚಿದೆ ಎಂದು ಈ ಸರ್ವೆ ಹೇಳುತ್ತದೆ.

***

**ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಎಲ್‌ಡಿಎಫ್‌ಗೆ ಮತ ನೀಡಿದವರಲ್ಲಿ 18-55 ವಯೋಗುಂಪಿನ ಮತದಾರರ ಪ್ರಮಾಣದಲ್ಲಿ 28%ದಷ್ಟು ಹೆಚ್ಚಳವಾಗಿದ್ದರೆ, ಎನ್‌ಡಿಎ 20%ದಷ್ಟು ಬೆಂಬಲವನ್ನು ಕಳಕೊಂಡಿದೆ.** ಯುಡಿಎಫ್ 26-45 ವಯೋಗುಂಪಿನವರ ನಡುವೆ 14%ದಷ್ಟು ಬೆಂಬಲ ಕಳಕೊಂಡಿದೆ.

***

**ಕಾಲೇಜು ಮತ್ತು ಅದಕ್ಕಿಂತ ಉನ್ನತ ಶಿಕ್ಷಣ ಪಡೆದವರ ನಡುವೆ ಎನ್‌ಡಿಎ ಗೆ ಬೆಂಬಲ 7%ದಷ್ಟು ಕಡಿಮೆಯಾಗಿರುವುದು, ಅದೇ ವೇಳೆಯಲ್ಲಿ ಎಲ್‌ಡಿಎಫ್‌ಗೆ ಬೆಂಬಲ 10%ದಷ್ಟು ಹೆಚ್ಚಿದೆ** ಎಂದು ಈ ಸರ್ವೆಯಲ್ಲಿ ಕಂಡು ಬಂದಿರುವುದು ಕೂಡಾ ಕುತೂಹಲಕಾರಿ.

# ಪ.ಬಂಗಾಳ: ಬಿಜೆಪಿಗೆ ಭಾರೀ ಸೋಲು

**ವಸಂತರಾಜ ಎನ್.ಕೆ**

**ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ಭಾರೀ ಸೋಲನ್ನು ಅನುಭವಿಸಿದೆ. ರಾಜ್ಯಕ್ಕೆ ಪ್ರಧಾನಿ ಮೋದಿ, ಗೃಹಮಂತ್ರಿ ಶಾ, ಬಿಜೆಪಿ ಅಧ್ಯಕ್ಷ ನಡ್ಡಾ ಅವರ ಹೆಚ್ಚು ಕಡಿಮೆ ದೈನಿಕ ಭೇಟಿ; ಬಿಜೆಪಿಯ ತಾರಾಪ್ರಚಾರಕರ ಭೇಟಿ ಮತ್ತು ಇತರೇ ಪ್ರಚಾರ ರಣನೀತಿಗೆ ಅನುಕೂಲವಾಗುವಂತೆ ಹಾಗೂ ಎದುರಾಳಿ ಪಕ್ಷಗಳಿಗೆ ಅನಾನುಕೂಲವಾಗುವಂತೆ ಚುನಾವಣಾ ಕಮಿಶನ್ ರೂಪಿಸಿದ 8 ಹಂತಗಳ ಈವರೆಗಿನ ಅತ್ಯಂತ ದೀರ್ಘ ಚುನಾವಣೆ; ಸಿ.ಬಿ.ಐ, ಇ.ಡಿ ಮುಂತಾದ ಕೇಂದ್ರೀಯ ಸಂಸ್ಥೆಗಳ ದುರುಪಯೋಗ; ಬಿಜೆಪಿಯ ಅಗಣಿತ ಹಣ, ಕಾರ್ಯಕರ್ತರ, ಸಂಪನ್ಮೂಲಗಳ ಬಲ; ಚುನಾವಣಾ ನೀತಿ ಸಂಹಿತೆಯನ್ನು ಗಾಳಿಗೆ ತೂರಿ ಜಾತಿ-ಮತಧರ್ಮಗಳ ಹೆಸರಲ್ಲಿ ಧ್ರುವೀಕರಣ; ಚುನಾವಣೆಯ ಮೊದಲು ಹಲವು ತೃಣಮೂಲ ಶಾಸಕರು ನಾಯಕರನ್ನು ಸತತವಾಗಿ 'ಆಪರೇಷನ್ ಕಮಲ'ದಲ್ಲಿ ಸೆಳೆದುಕೊಂಡದ್ದು- ಇವೆಲ್ಲದರ ನಂತರವೂ ಬಿಜೆಪಿಯ ಸೋಲು ಬಹಳ ಗಮನಾರ್ಹವಾದ ರಾಜಕೀಯ ಬೆಳವಣಿಗೆ. ಅದರಲ್ಲೂ ಬಿಜೆಪಿ ಈ ಚುನಾವಣೆಯನ್ನು ಮೋದಿ ವರ್ಸಸ್ ದೀದಿ ಎನ್ನುವಂತೆ ಮೋದಿಯ 'ರಾಜಕೀಯ ಪ್ರತಿಷ್ಠೆ'ಯನ್ನು ಪಣಕ್ಕಿಟ್ಟದ್ದು, ಬಿಜೆಪಿ ಗೆಲುವು ಪೂರ್ವನಿಶ್ಚಿತ ಎನ್ನುವಂತೆ ಪ್ರಚಾರ ಮಾಡಿದ್ದು ಹಾಗೂ 200 ಕ್ಕಿಂತ ಹೆಚ್ಚು ಸೀಟು ಗೆಲ್ಲುತ್ತೇವೆ ಎಂದು ಶಾ ಎದೆ ತಟ್ಟಿ ಹೇಳುತ್ತಾ ತಿರುಗಿದ್ದು - ಈ ಹಿನ್ನೆಲೆಯಲ್ಲಿ ಇದು ಬಿಜೆಪಿಗೆ ಅತ್ಯಂತ ಅವಮಾನಕಾರಿ ಸೋಲು ಸಹ.**





ತೃಣಮೂಲ ಕಾಂಗ್ರೆಸ್ 292 ಸೀಟುಗಳಲ್ಲಿ (ಅಭ್ಯರ್ಥಿಗಳ ಮರಣದಿಂದಾಗಿ 2 ಸೀಟುಗಳಲ್ಲಿ ಚುನಾವಣೆ ಮುಂದೂಡಲಾಗಿದೆ) 213 ಸೀಟುಗಳನ್ನು ಮತ್ತು ಶೇ.47.94 ಮತಗಳನ್ನು ಪಡೆದು ಆಶ್ಚರ್ಯಕರ ರೀತಿಯಲ್ಲಿ ಮೂರನೆಯ ಬಾರಿ ಅಧಿಕಾರಕ್ಕೆ ಬಂದಿದೆ. ಆದರೆ ತೃಣಮೂಲ ನಾಯಕಿ ಮಮತಾ ಬ್ಯಾನರ್ಜಿ ತಮ್ಮ ಸೀಟಿನಲ್ಲಿ ತಮ್ಮ ಮಾಜಿ ನಿಕಟವರ್ತಿ ಮತ್ತು ತನ್ನ ನಾಯಕಿಗೆ 'ದ್ರೋಹ' ಮಾಡಿ ಬಿಜೆಪಿಗೆ ಸೇರಿದ ಸುವೆಂದು ಅಧಿಕಾರಿ ಅವರ ಎದುರು ಸೋತಿದ್ದಾರೆ. 200 ಸೀಟುಗಳನ್ನು ಗೆದ್ದು ಸರಕಾರ ನಡೆಸಿಯೇ ತೀರುತ್ತೇವೆ ಎಂದು ಬೀಗುತ್ತಿದ್ದ ಬಿಜೆಪಿ 77 ಸೀಟುಗಳಿಗೆ ತೃಪ್ತಿ ಪಡಬೇಕಾಗಿದೆ. ಅದು ಶೇ. 38.1 ಮತಗಳನ್ನು ಗಳಿಸಿದೆ. ಇನ್ನೊಂದು ಆಶ್ಚರ್ಯಕರ ಬೆಳವಣಿಗೆಯಲ್ಲಿ ಎಡ ಪಕ್ಷಗಳು, ಕಾಂಗ್ರೆಸ್ ಮತ್ತು ಇಂಡಿಯನ್ ಸೆಕ್ಯುಲರ್ ಫ್ರಂಟ್ ಗಳಿದ್ದ ಸಂಯುಕ್ತ ಮೋರ್ಚಾ ಒಂದು ಸೀಟು ಮಾತ್ರ ಪಡೆದಿದೆ. ಇಂಡಿಯನ್ ಸೆಕ್ಯುಲರ್ ಫ್ರಂಟ್ ಆ ಸೀಟನ್ನು ಗಳಿಸಿದ್ದು, ಎಡಪಕ್ಷಗಳು ಮತ್ತು ಕಾಂಗ್ರೆಸ್ ಯಾವುದೇ ಸೀಟು ಗಳಿಸಿಲ್ಲ. ಸಂಯುಕ್ತ ಮೋರ್ಚಾ ಒಟ್ಟಾಗಿ ಶೇ. 8 ಮತಗಳನ್ನು ಗಳಿಸಿದೆ.

ಪ.ಬಂಗಾಳದ ಚುನಾವಣಾ ಫಲಿತಾಂಶವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಕಳೆದ ಕೆಲವು ಚುನಾವಣೆಗಳ ಶೇಕಡಾವಾರು ಮತಗಳಿಕೆಯ ಮತ್ತು ಚುನಾವಣೋತ್ತರ ಸಮೀಕ್ಷೆಗಳ ಕೆಲವು ಅಂಶಗಳ ಅಂಕೆಸಂಖ್ಯೆಗಳನ್ನು ಗಮನಿಸಬೇಕು. ಕೋಷ್ಟಕ 1 ಮತ್ತು 2 2011ರಿಂದ 2021ರ ಚುನಾವಣೆವರೆಗಿನ ಸೀಟು ಗಳಿಕೆ ಮತ್ತು ಮತಗಳಿಕೆಯ ಅಂಕೆಸಂಖ್ಯೆಗಳನ್ನು ಕೊಡುತ್ತವೆ.

ಬಿಜೆಪಿ ಕಳೆದ (2019) ಲೋಕಸಭೆ ಚುನಾವಣೆಗೆ ಹೋಲಿಸಿದರೆ ಶೇಕಡಾ ಮತ ಮತ್ತು ಸೀಟು ಗಳಿಕೆ ಎರಡರಲ್ಲೂ ಕುಸಿತ ಕಂಡಿದೆ. ಸೀಟು ಗಳಿಕೆ (2019ರ ಲೋಕಸಭಾ ಚುನಾವಣೆಯಲ್ಲಿ ಅದು ಅತಿ ಹೆಚ್ಚು ಮತ ಪಡೆದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ) 121 ರಿಂದ 77ಕ್ಕೆ ಕುಸಿದಿದೆ. ಆದರೆ ಕಳೆದ (2016) ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಶೇಕಡಾ ಮತ ಮತ್ತು ಸೀಟು ಗಳಿಕೆ ಎರಡರಲ್ಲೂ ಭಾರೀ ಏರಿಕೆ ಕಂಡಿದೆ. ಸೀಟು ಗಳಿಕೆ 3 ರಿಂದ 77ಕ್ಕೆ ಏರಿದೆ. ಮತಗಳಿಕೆ ಶೇ. 10.3ರಿಂದ ಶೇ. 38.1ಕ್ಕೆ ಏರಿದೆ. ಲೋಕಸಭಾ ಚುನಾವಣೆಯಲ್ಲಿ (ಮತಗಳಿಕೆ ಮತ್ತು ಸೀಟುಗಳಿಕೆ) ಕಂಡ ಏರುಗತಿಯನ್ನು 2014-2016ರಂತೆ, ಈ ಬಾರಿಯೂ (2019-2021) ಬಿಜೆಪಿಗೆ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ ಹೋಲಿಸಿದರೆ ಎಡರಂಗ 2011ರಿಂದ ಸತತವಾಗಿ ಮತಗಳಿಕೆ ಮತ್ತು ಸೀಟುಗಳಿಕೆ ಎರಡರಲ್ಲೂ ಸತತ ಇಳಿಕೆ ಕಂಡಿದೆ. ಕಾಂಗ್ರೆಸ್ 2011-16 ಅವಧಿಯಲ್ಲಿ ಸ್ವಲ್ಪ ಏರಿಕೆ ಕಂಡರೂ, ಆ ನಂತರ ಸತತ ಇಳಿಕೆ ಕಂಡಿದೆ. ಈ ವಿದ್ಯಮಾನ ಅರ್ಥಮಾಡಿಕೊಳ್ಳಬೇಕಾದರೆ ಅಲ್ಲಿನ ಕಳೆದ ಎರಡು ದಶಕಗಳ ರಾಜಕೀಯ ಬೆಳವಣಿಗೆಯನ್ನು ನೋಡಬೇಕು.

**ಪ. ಬಂಗಾಳದ ರಾಜಕಾರಣದಲ್ಲಿ ಪಲ್ಲಟಗಳು**

2014ರ ವರೆಗೆ ಬಂಗಾಳ ಆರ್ಥಿಕ ವಿಷಯಗಳ ಸುತ್ತ ಇರುವ ಎಡ-ಬಲ ಗಳ ವರ್ಗ ರಾಜಕಾರಣವಿತ್ತು. ರೈತ-ಕಾರ್ಮಿಕ ವರ್ಗ ಸಖ್ಯತೆಯ ಮೇಲೆ ಆಧಾರಿತ ದುಡಿಯುವ ಜನರುಮತ್ತು ಹೆಚ್ಚಿನ ಮಧ್ಯಮ ವರ್ಗವನ್ನು ಒಳಗೊಂಡ ಎಡಪಕ್ಷಗಳ ಜನತಾ ನೆಲೆ ಒಂದು ಕಡೆ, ಇನ್ನೊಂದು ಕಡೆ ಭೂಮಾಲಕ-ಬಂಡವಾಳಶಾಹಿ ಮತ್ತು ಅವರ ಬಾಲಬಡುಕರ, ಮಧ್ಯಮ ವರ್ಗದ ಒಂದು ವಿಭಾಗ ಹಾಗೂ ಎಡ ಸಂಘಟನಾ ವಲಯದಿಂದ ಹೊರಗಿದ್ದ ದುಡಿಯುವವರ ಕೂಟ ಇನ್ನೊಂದು ಕಡೆ. ಎಡ ಜನತಾ ನೆಲೆಯಲ್ಲಿ ಇಲ್ಲದ ದುಡಿಯುವವರು ಸೇರಿದಂತೆ ಈ ಕೂಟ ಹೆಚ್ಚಾಗಿ ಕಾಂಗ್ರೆಸ್ ನ್ನು ಬೆಂಬಲಿಸುತ್ತಿತ್ತು. ಪ್ರಗತಿಪರ ಜನಪರ ನೀತಿಗಳನ್ನು ಎತ್ತಿ ಹಿಡಿಯುವ ಎಡರಂಗವನ್ನು ಉರುಳಿಸಲು ದುರ್ಬಲಗೊಳಿಸಲು, ಭೂಮಾಲಕ-ಬಂಡವಾಳಶಾಹಿ ವರ್ಗ ಕಾಂಗ್ರೆಸ್ ಮೂಲಕ ಎಡ ಕಾರ್ಯಕರ್ತರ ಮೇಲೆ ದಾಳಿ, ಗೂಂಡಾಗಿರಿಯ ರಾಜಕೀಯ ಮಾಡುತ್ತಿತ್ತು. ಆದರೆ ಅದರ ಪ್ರತಿನಿಧಿಯಾದ ಕಾಂಗ್ರೆಸ್ ಶಿಥಿಲವಾಗುತ್ತಾ ದುರ್ಬಲವಾಗುತ್ತಾ ಹೋದಂತೆ ಅದಕ್ಕೆ ಇನ್ನೊಂದು ರಾಜಕೀಯ ಪಕ್ಷದ ಅಗತ್ಯ ಕಂಡಿತು.

ಕಾಂಗ್ರೆಸ್ ನಿಂದ ಹೊರ ಬಂದು, ಬಲಪಂಥೀಯ

ಪುಟ 10 ಕ್ಕೆ

# ಪ.ಬಂಗಾಳ: ಬಿಜೆಪಿಗೆ ಭಾರೀ ಸೋಲು

ಪುಟ 9 ರಿಂದ

ಜನಮರುಳು ಸಾಮೂಹಿಕ ರಾಜಕೀಯ ಒಂದು ಕಡೆ, ಇನ್ನೊಂದು ಕಡೆ ದುಡಿಯುವ ಜನರ ಸಂಘಟನೆಗಳ ಮತ್ತು ಎಡ ಕಾರ್ಯಕರ್ತರ ಮೇಲೆ ದಾಳಿ–ದಾಂಧಲೆ ಗೂಂಡಾಗಿರಿ ನಡೆಸುವ ಹೊಸ ರಾಜಕೀಯ ಮಾಡಲಾರಂಭಿಸಿದ ಮಮತಾ ಬ್ಯಾನರ್ಜಿ ತೃಣಮೂಲ ಕಾಂಗ್ರೆಸನ್ನು ಭೂಮಾಲಕ–ಬಂಡವಾಳಶಾಹಿ ವರ್ಗ ಬಲವಾಗಿ ಬೆಂಬಲಿಸಲು ಆರಂಭಿಸಿತು. 1990ರ ದಶಕದ ನವ–ಉದಾರವಾದಿ ನೀತಿಗಳಿಂದಾಗಿ ಒಂದು ಕಡೆ ದುಡಿಯುವ ಜನರ ಸಂಕಷ್ಟಗಳು ಅಪಾರವಾಗಿ ಹೆಚ್ಚಿದ್ದು, ಇನ್ನೊಂದು ಕಡೆ ಒಕ್ಕೂಟ ತತ್ವದ ಮೇಲೆ ಸತತ ದಾಳಿಯಿಂದಾಗಿ ಅದಕ್ಕೆ ಪರಿಹಾರ ಒದಗಿಸುವ ರಾಜ್ಯ ಸರಕಾರಗಳ ಸಾಮರ್ಥ್ಯ ಕುಗ್ಗಿದ್ದು ಜನತೆಯಲ್ಲಿ ಅತೃಪ್ತಿ ಇತ್ತು. ತೃಣಮೂಲ ಕಾಂಗ್ರೆಸ್ 2011ರಲ್ಲಿ ಸಿಂಗೂರ್ ನಂದಿಗ್ರಾಮ ಗಳಲ್ಲಿ ಕೈಗಾರಿಕೀರಣದ ನೀತಿಯ ವಿರುದ್ಧ ಅಪಪ್ರಚಾರ ನಡೆಸಿ, ಅದರ ವಿರುದ್ಧ ಚಳುವಳಿ ನಡೆಸಿ ಅದರಲ್ಲಿ ತಾವೇ ಹಿಂಸಾಚಾರ ನಡೆಸಿ ಅದನ್ನು ಸರಕಾರದ ಮೇಲೆ ಹಾಕಿ (ತಮ್ಮ ನಿಕಟವರ್ತಿಯಾಗಿದ್ದು ಆನಂತರ ಬಿಜೆಪಿ ಸೇರಿದ ಸುವೆಂದು ಅಧಿಕಾರಿ ಯ ವಿರುದ್ಧ 2021ರ ಚುನಾವಣಾ ಪ್ರಚಾರದಲ್ಲಿ ಮಮತಾ ಬ್ಯಾನರ್ಜಿ ಸ್ವತಃ ಇದನ್ನು ಒಪ್ಪಿಕೊಂಡಿದ್ದಾರೆ),ಆ ಚಳುವಳಿಗೆ ಪ್ರತಿಕ್ರಿಯೆಯಲ್ಲಿ ಎಡರಂಗ ಸರ್ಕಾರದ ಕೆಲವು ತಪ್ಪುಗಳ ಪೂರ್ಣ ಉಪಯೋಗ ಪಡೆದು 2011ರಲ್ಲಿತೃಣಮೂಲ ಅಧಿಕಾರಕ್ಕೆ ಬಂದಿತು.

ಆ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು.ಅಧಿಕಾರಕ್ಕೆ ಬಂದ ಕೂಡಲೇ ವಿರೋಧ ಪಕ್ಷಗಳ ದಮನಕ್ಕೆ ಮುಂದಾದ ತೃಣಮೂಲ ಮುಖ್ಯವಾಗಿ ಎಡಪಕ್ಷಗಳ ಕಚೇರಿ ವಶಪಡಿಸಿಕೊಳ್ಳುವುದು, ಬೆಂಕಿ ಹಾಕುವುದು, ಕಾರ್ಯಕರ್ತರ ಮೇಲೆ ಹಿಂಸಾಚಾರ ಕೊಲೆ ಅತ್ಯಾಚಾರಗಳನ್ನು ಹರಿಯಬಿಡುವುದು ಮಾಡುತ್ತಿತ್ತು. ಚುನಾವಣೆಗಳಲ್ಲಿ ವಿರೋಧ ಪಕ್ಷಗಳು ನಾಮಪತ್ರ ಸಲ್ಲಿಸದಂತೆ, ಪ್ರಚಾರ ಮಾಡದಂತೆ, ಮತದಾನದ ದಿನ ಎಡ ಬೆಂಬಲಿಗರು ಮತದಾನ ಮಾಡದಂತೆ ಗೂಂಡಾಗಿರಿ ಮಾಡುತ್ತಿತ್ತು. ಅಧಿಕಾರಕ್ಕೆ ಬಂದ ಮೇಲೆ ಕೃಷಿ ಅಥವಾ ಕೈಗಾರಿಕಾ ಕ್ಷೇತ್ರದಲ್ಲಾಗಲಿ ಯಾವುದೇ ಗಮನಾರ್ಹ ಗಂಭೀರ ದೂರಗಾಮಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ, ಕೆಲ ಕಣ್ಣುಕಟ್ಟಿನ ಕಲ್ಯಾಣ ಯೋಜನೆಗಳನ್ನು ಚುನಾವಣೆಯ ಸುತ್ತಮುತ್ತ ಜಾರಿ ಮಾಡುವ ಬೂರ್ಜ್ವಾ–ಭೂಮಾಲಕ ತಂತ್ರಗಳನ್ನು ಕರಗತ ಮಾಡಕೊಂಡಿತು. ಅದರಲ್ಲೂ ತೃಣಮೂಲ ಕಾರ್ಯಕರ್ತರ'ಕಟ್', ನಾರದ ಚಿಟ್ ಫಂಡ್ ಮುಂತಾದ ಹಗರಣಗಳ ಮಹಾ ಭ್ರಷ್ಟಾಚಾರಗಳ ಮೂಲಕ ಮೊದಲ ಅವಧಿಯಲ್ಲೇ ತೀವ್ರ ಅತೃಪ್ತಿಗೆ ಕಾರಣವಾಯಿತು. ಈ ಅತೃಪ್ತಿಯನ್ನು ಹಿಂದೆ ತನ್ನ 'ಮೈತ್ರಿ ಪಕ್ಷ'ವಾಗಿದ್ದ ತೃಣಮೂಲ ವಿರುದ್ಧ ಬಳಸಿಕೊಂಡು ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಿಜೆಪಿ ಮುಂದಾಯಿತು

**2014ರಿಂದ ಕೋಮುಧ್ರುವೀಕರಣದ ರಾಜಕಾರಣ**

2014ರ ಚುನಾವಣಾ ಪ್ರಚಾರದಿಂದ ಪ.ಬಂಗಾಳದ ರಾಜಕೀಯದಲ್ಲಿ ಮಹತ್ವದ ಬದಲಾವಣೆ ಆಯಿತು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, 'ಜೈ ಶ್ರೀರಾಮ್'ನ್ನು ಯುದ್ಧ ಘೋಷಣೆಯಂತೆ ಬಳಸಿದ್ದು, ಬಾಂಗ್ಲಾದೇಶದ ಮುಸ್ಲಿಮರ ನುಸುಳುವಿಕೆ, ಮುಸ್ಲಿಮರ ಜನಸಂಖ್ಯೆ ಏರಿ ಹಿಂದೂಗಳು ಅಲ್ಪಸಂಖ್ಯಾತರಾಗುವ – ಹುಸಿ ವಿಷಯಗಳನ್ನು ದೊಡ್ಡದು ಮಾಡುತ್ತಾ ಬಿಜೆಪಿಯು ಕೋಮು–ಧ್ರುವೀಕರಣದ ರಾಜಕೀಯ ಮಾಡಲಾರಂಭಿಸಿತು. ಕೋಮುವಾದದ ಕುರಿತು ತೃಣಮೂಲದ ಅಸಡ್ಡೆಯನ್ನು ಬಳಸಿಕೊಂಡು ಸಂಘ ಪರಿವಾರದ ಸಂಘಟನೆಗಳನ್ನು ವ್ಯಾಪಕಗೊಳಿಸಿತು. 2014ರಲ್ಲಿ ಕೋಮು–ಧ್ರುವೀಕರಣದ ಮೂಲಕ ತನ್ನ ರಾಜಕೀಯ ನೆಲೆಯನ್ನು ಕಂಡುಕೊಳ್ಳಲು ಆರಂಭಿಸಿತು. 2016ರ ವಿಧಾನಸಭೆಯ ಚುನಾವಣೆಯಲ್ಲಿ ಅದು ಫಲಕೊಡದಿದ್ದರೂ ರಾಜಕೀಯವನ್ನು ಕೋಮುವಾದಿಕರಣಗೊಳಿಸಿ ಬಂಗಾಳದ ಕೋಮುಸಾಮರಸ್ಯ ಮತ್ತು ಸೆಕ್ಯುಲರ್ ರಾಜಕೀಯವನ್ನು ನಿಧಾನವಾಗಿ ಆದರೆ ಸತತವಾಗಿ ಬುಡಮೇಲು ಮಾಡುವಲ್ಲಿ ಯಶಸ್ವಿಯಾಯಿತು. ಸೆಕ್ಯುಲರ್ ಅಥವಾ ಯಾವುದೇ ಸೈದ್ಧಾಂತಿಕ ವಿಷಯದ ಕುರಿತಾಗಿ ದೃಢವಾದ ಯಾವುದೇ ನೀತಿ ಇಲ್ಲದ ತೃಣಮೂಲ ಈ ಕುರಿತು ತಲೆ ಕೆಡಿಸಿಕೊಳ್ಳಲಿಲ್ಲ. ತೃಣಮೂಲದ ದುರಾಡಳಿತ, ಭ್ರಷ್ಟಾಚಾರ, ಗೂಂಡಾರಾಜ್ಯದ ವಿರುದ್ಧ ಅತೃಪ್ತಿ ಮತ್ತು ಕೋಮುವಾದಿ ಧ್ರುವೀಕರಣದ ಪೂರ್ಣ ಫಲವನ್ನು ಬಿಜೆಪಿ 2019ರಲ್ಲಿ ಪಡೆಯಿತು. ಬಿಜೆಪಿಯ ಮತಗಳಿಕೆ ಮತ್ತು ಸೀಟುಗಳಿಕೆಯಿಂದ ಹೌಹಾರಿದ ಮಮತಾ ಎಲ್ಲ ಬೂರ್ಜ್ವಾ–ಭೂಮಾಲಕ ಪಕ್ಷಗಳಂತೆ ಒಂದು ಕಡೆ 'ಮೃದು–ಹಿಂದುತ್ವ' ಇನ್ನೊಂದು ಕಡೆ ಪ್ರತಿ–ಧ್ರುವೀಕರಣದ ತಂತ್ರ ಹೂಡಿದರು. ಇದು ಧ್ರುವೀಕರಣವನ್ನು ಇನ್ನಷ್ಟು ಗಟ್ಟಿ ಮಾಡುತ್ತಾ ಹೋಯಿತು. ವಿರೋಧ ಪಕ್ಷಗಳ ಮೇಲೆ ಹಿಂಸಾಚಾರ, ಭ್ರಷ್ಟಾಚಾರ, ಕೋಮುದ್ವೇಷದ ನಿಯಂತ್ರಣದ ವೈಫಲ್ಯದ ಹಿನ್ನೆಲೆಯಲ್ಲಿ, ತಾನು ಅಧಿಕಾರಕ್ಕೆ ಬರಲು ಇದೇ ಅತ್ಯುತ್ತಮ ಅವಕಾಶ ಎಂದು ಬಗೆದ ಬಿಜೆಪಿಯು ಅತ್ಯಂತಆಕ್ರಾಮಕ ಚುನಾವಣಾ ತಂತ್ರವನ್ನು ಅನುಸರಿಸಿತು. ಕೋಮು ಧ್ರುವೀಕರಣದ ಜೊತೆಗೆ ಕೆಲವು ಆಯ್ದ ಜಾತಿ–ಬುಡಕಟ್ಟುಗಳ ಧ್ರುವೀಕರಣಕ್ಕೆ ಪ್ರಯತ್ನಿಸಿತು.

ಆದರೆ ಚುನಾವಣಾ ಫಲಿತಾಂಶದ ವಿವರವಾದ ಅಂಕೆಸಂಖ್ಯೆಗಳು ಮತ್ತು ಕೆಲವು (ಪ್ರಮುಖವಾಗಿ ಲೋಕನೀತಿ–ಸಿ.ಎಸ್.ಡಿ.ಎಸ್) ಚುನಾವಣೋತ್ತರ ಸಮೀಕ್ಷೆಗಳನ್ನು ಪರಿಶೀಲಿಸಿದರೆ, ಈ ಧ್ರುವೀಕರಣದ ಪ್ರಯತ್ನಗಳು ವಿಫಲವಾದದ್ದು ಮಾತ್ರವಲ್ಲ ಅದಕ್ಕೆ ಮುಳುವಾದ ಹಾಗೆ ಕಾಣುತ್ತದೆ. 2016ಕ್ಕೆ ಹೋಲಿಸಿದರೆ ಅದರ ಪ್ರಗತಿಗೆ ಈ ಧ್ರುವೀಕರಣದ ಪ್ರಯತ್ನಗಳೇ ಕಾರಣವಾದರೂ 2019ಕ್ಕೆ ಹೋಲಿಸಿದರೆ ಕುಸಿಯಲು ಧ್ರುವೀಕರಣದ ಪ್ರಯತ್ನದ 'ಅತಿ'ಗಳು ಮತ್ತು ಅದರ ಸಹಜ ಮಿತಿಗಳು ಕಾರಣವಾಗಿವೆ ಎಂಬಂತೆ ಕಾಣುತ್ತದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, 'ಜೈ ಶ್ರೀರಾಮ್'ನ್ನು ಯುದ್ಧ ಘೋಷಣೆಯಂತೆ ಬಳಸಿದ್ದು, ಬಾಂಗ್ಲಾದೇಶದ ಮುಸ್ಲಿಮರ ನುಸುಳುವಿಕೆ, ಮುಸ್ಲಿಮರ ಜನಸಂಖ್ಯೆ ಏರಿ ಹಿಂದೂಗಳು ಅಲ್ಪಸಂಖ್ಯಾತರಾಗುವ – ಇವು ಒಂದು ಹಂತದ ಕೋಮು–ಧ್ರುವೀಕರಣ ಸಾಧಿಸಿ ಬಿಜೆಪಿಗೆ ಮತಗಳನ್ನು ತಂದಿತು. ಆದರೆ ಧ್ರುವೀಕರಣದ 'ಅತಿ' ಒಂದು ಕಡೆ ಸೆಕ್ಯುಲರ್ ಜನತೆಯ ದೊಡ್ಡ ವಿಭಾಗದಲ್ಲಿ ಆತಂಕ ಉಂಟು ಮಾಡಿದರೆ, ಮುಸ್ಲಿಂ ಸಮುದಾಯದಲ್ಲಿ ಪ್ರತಿ–ಧ್ರುವೀಕರಣವನ್ನು ಉಂಟು ಮಾಡಿತು. ಸಿಎಎ–ಎನ್.ಆರ್.ಸಿ ಬಳಸಿ ಬಾಂಗ್ಲಾದೇಶದ ನುಸುಳುಕೋರರನ್ನು ವಾಪಸು ಕಳಿಸುವ ಘೋಷಣೆ ಕೆಲವು ಜನವಿಭಾಗಗಳಿಗೆ ಖುಷಿ ತಂದರೆ ಹಲವು ಜನವಿಭಾಗಗಳಿಗೆ ಆತಂಕ ತಂದಿತು. ತೃಣಮೂಲದ 'ಮೃದು ಹಿಂದುತ್ವ' ಮತ್ತು ಮುಸ್ಲಿಂ ಧ್ರುವೀಕರಣದ ಪ್ರಯತ್ನಗಳು ಇದರ ಪೂರ್ಣ ಪ್ರಯೋಜನ ಪಡೆದವು. ಈ ಎರಡೂ ವಿಭಾಗಗಳಿಗೆ ಬಿಜೆಪಿಯನ್ನು ಸೋಲಿಸುವುದು ಆದ್ಯತೆಯ ವಿಷಯವಾಯಿತು. ಇದೇ ರೀತಿಯಲ್ಲಿ ಬಿಜೆಪಿಯು 2019ರ ವರೆಗೆ ಕೆಳಜಾತಿಗಳನ್ನು ಅವರದೇ ಐಡೆಂಟಿಟಿ ಮತ್ತು ಆಕ್ರಾಮಕ 'ಹಿಂದೂ ಐಡೆಂಟಿಟಿ' ಆಧಾರದ ಮೇಲೆ ವ್ಯಾಪಕವಾಗಿ ಅಣಿ ನೆರೆಸಿತ್ತು. ಈ ವಿಭಾಗಗಳ 2021ರಲ್ಲಿ ಅಣಿನೆರೆಸುವಿಕೆ ಶಿಥಿಲವಾಗಿ ಇಂತಹ ಕೆಲವು ವಿಭಾಗಗಳಲ್ಲಿ (ಒಬಿಸಿ ಶೇ.75ರಿಂದ 49ಕ್ಕೆ, ರಾಜಬಂಶಿ ಶೇ.75ರಿಂದ 59ಕ್ಕೆ ಮತ್ತು ಆದಿವಾಸಿಗಳು ಶೇ.62ರಿಂದ 46ಕ್ಕೆ) ಗಮನಾರ್ಹ ಕುಸಿತ ಕಂಡು ಬಂದಿದೆ ಎಂದು ಲೋಕನೀತಿ ಚುನಾವಣೋತ್ತರ ಸಮೀಕ್ಷೆ ವರದಿಮಾಡಿದೆ. ಐಡೆಂಟಿಟಿ ಆಧಾರಿತ ಧ್ರುವೀಕರಣಕ್ಕೆ ಒಂದು ಮಿತಿಯಿದೆ. ಬಹಳ ಸಮಯ ಇಂತಹ ಧ್ರುವೀಕರಣವನ್ನು ಸಾಧಿಸುವುದು ಕಾರ್ಯಸಾಧ್ಯವಲ್ಲ ಎಂಬ ಸತ್ಯವನ್ನು ಇವು ಸಾಬೀತು ಪಡಿಸುತ್ತವೆ.

**ಆಪರೇಷನ್ ಕಮಲಕ್ಕೆ ಸೋಲು**

ಬಿಜೆಪಿಗೆ ಪ.ಬಂಗಾಳದಲ್ಲಿಜನರ ವಿಶ್ವಾಸ ಗಳಿಸಿದ ನಾಯಕತ್ವವಾಗಲಿ, ಕಾರ್ಯಕರ್ತರಾಗಲಿ ಇರಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ಕೇಂದ್ರದ ನಾಯಕರು, ಹೊರಗಿನ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಚುನಾವಣಾ ಪ್ರಚಾರ ನಿರ್ವಹಿಸುವುದು ಸಮಸ್ಯೆಯಾಗಲಿಲ್ಲ. ಆದರೆ ವಿಧಾನಸಭಾ ಚುನಾವಣೆಯಲ್ಲಿ ಜನರಿಗೆ ಗುರುತು ಇರುವ ವಿಶ್ವಾಸವಿರುವ ರಾಜ್ಯದಲ್ಲಿ ನೆಲೆಸಿರುವ ನಾಯಕರು, ಕಾರ್ಯಕರ್ತರು ಇಲ್ಲದಿದ್ದರೆ, ಎಷ್ಟೇ ಜನಪ್ರಿಯ ಪ್ರಭಾವಶಾಲಿ ರಾಷ್ಟ್ರನಾಯಕರಿದ್ದರೂಜನಬೆಂಬಲ ಪಡೆಯುವುದು ಕಷ್ಟ ಎಂಬುದು ಸರ್ವವಿದಿತ. ಈ ನ್ಯೂನತೆ ಹೋಗಲಾಡಿಸಲು ದೊಡ್ಡ ಸಂಖ್ಯೆಯಲ್ಲಿ ತೃಣಮೂಲ ನಾಯಕರು ಶಾಸಕರನ್ನು ಬಿಜೆಪಿ 'ಆಪರೇಶನ್ ಕಮಲ' ಮೂಲಕ ಸೆಳೆಯಿತು. ಆದರೆ ಇವರಲ್ಲಿ ಹೆಚ್ಚಿನವರು ಸಹಜವಾಗಿಯೇ ➚

**ಕೋಷ್ಟಕ 1. ಪ.ಬಂಗಾಳ ಚುನಾವಣೆಗಳು : ಸೀಟು ಗಳಿಕೆ**

| ಸೀಟುಗಳಿಕೆ | 2011 | *2014 | 2016 | *2019 | 2021 |
|---|---|---|---|---|---|
| ತೃಣಮೂಲ | 184 | 34 | 211 | 22(164) | 213 |
| ಬಿಜೆಪಿ | 0 | 2 | 3 | 18(121) | 77 |
| ಎಡರಂಗ | 62 | 2 | 32 | 0 | 0 |
| ಕಾಂಗ್ರೆಸ್ | 42 | 4 | 44 | 2 | 0 |

* ಲೋಕಸಭಾ ಚುನಾವಣೆ (ಕಂಸದೊಳಗಿರುವುದು ಅತಿ ಹೆಚ್ಚು ಮತ ಪಡೆದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ)

# ಬಿಜೆಪಿಯನ್ನು ಸೋಲಿಸುವ ಜನಗಳ ಆಕಾಂಕ್ಷೆಯಿಂದಾಗಿ ಟಿಎಂಸಿಗೆ ಪ್ರಯೋಜನವಾಗಿದೆ: ಬಿಮನ್ ಬಸು



ಪಶ್ಚಿಮ ಬಂಗಾಲದ 17ನೇ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಸೋಲು ಒಂದು ಮಹತ್ವದ ಘಟನೆ. ತೃಣಮೂಲ ಕಾಂಗ್ರೆಸ್ ಗೆದ್ದಿದೆ. ಸಂಯುಕ್ತ ಮೋರ್ಚಾಕ್ಕೆ ತೀವ್ರ ನಿರಾಸೆಯಾಗಿದೆ. ಈ ಬಗ್ಗೆ ಮೋರ್ಚಾದ ಅಂಗ ಪಕ್ಷಗಳಲ್ಲಿ ಮತ್ತು ಸಂಯುಕ್ತ ಮೋರ್ಚಾದಲ್ಲಿ ಜಂಟಿಯಾಗಿ ವಿಮರ್ಶೆಗಳನ್ನು ನಡೆಸಿ ಅದರಿಂದ ಪಾಠ ಕಲಿಯಲಾಗುವುದು ಎಂದು ಎಡರಂಗದ ಅಧ್ಯಕ್ಷ ಬಿಮನ್ ಬಸು ಹೇಳಿದ್ದಾರೆ. ಆದರೆ, ಮೊದಲ ನೋಟಕ್ಕೆ, ಬಿಜೆಪಿಯನ್ನು ಸೋಲಿಸುವ ಜನಗಳ ಆಕಾಂಕ್ಷೆಯಿಂದಾಗಿ ತೃಣಮೂಲ ಕಾಂಗ್ರೆಸಿಗೆ ಪ್ರಯೋಜನವಾಗಿರುವಂತೆ ಕಾಣುತ್ತದೆ ಎಂದು ಅವರು ಹೇಳಿದ್ದಾರೆ.

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ 16 ಸ್ಥಾನಗಳನ್ನು ಪಡೆದಿತ್ತು ಮತ್ತು ಈ ವಿಧಾನಸಭಾ ಚುನಾವಣೆಗಳನ್ನು ಗೆಲ್ಲಲು ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿತು, ಆರೆಸ್ಸಸನ್ನು, ಸಂಘ ಪರಿವಾರವನ್ನು ಬಳಸಿತು, ಎಲ್ಲ ಜಿಲ್ಲೆಗಳನ್ನು ಕವರ್ ಮಾಡಲು ಹಲವು ಹೆಲಿಕ್ಯಾಪ್ಟರುಗಳನ್ನು ಬಳಸಿತು. ಆದರೂ ಜನಗಳು ಅದನ್ನು ಸೋಲಿಸಿದ್ದಾರೆ. ಆದರೆ ಅದು ಬಂಗಾಳದ ಸಾಮಾಜಿಕ ಹಂದರದಲ್ಲಿ ಒಂದು ಶಾಶ್ವತ ಗಾಯವನ್ನು ಉಂಟುಮಾಡಿದೆ, ಇದು ಮುಂದೆ ಬಂಗಾಳದ ಸಂಸ್ಕೃತಿಗೆ ಮತ್ತು ಸಮಾಜಕ್ಕೆ ಹಾನಿಯುಂಟು ಮಾಡಬಹುದು ಎಂಬ ಭೀತಿಯನ್ನು ಬಿಮನ್ ಬಸು ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಎಲ್ಲ ಟಿಎಂಸಿ–ವಿರೋಧಿ ಶಕ್ತಿಗಳ ಹೊಣೆಗಾರಿಕೆ ಹೆಚ್ಚಿದೆ. ಸಂಯುಕ್ತ ಮೋರ್ಚಾ ಸಂವಿಧಾನದ ನಿಬಂಧನೆಗಳನ್ನು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು, ಜಾತ್ಯತೀತತೆಯನ್ನು ರಕ್ಷಿಸಬೇಕಾಗಿದೆ, ದುಡಿಯುವ ಜನಗಳ ಜೀವನೋಪಾಯದ ಹೋರಾಟವನ್ನು ಬಲಪಡಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಈ ಚುನಾವಣೆಗಳಲ್ಲಿ ಸಂಯುಕ್ತ ಮೋರ್ಚಾದ ಪ್ರಚಾರದಲ್ಲಿ ಪಾತ್ರ ವಹಿಸಿದ ಕಾರ್ಮಿಕ ವರ್ಗವನ್ನು ಅಭಿನಂದಿಸುತ್ತ ಬಿಮನ್ ಬಸು, ಮತಗಣನೆಯ ನಂತರ ರಾಜ್ಯದಲ್ಲಿ ಶಾಂತಿ ಮತ್ತು ವ್ಯವಸ್ಥೆಯನ್ನು ಕಾಪಾಡಿಕೊಳ್ಳಬೇಕು ಎಂದಿದ್ದಾರೆ. ಮಹಾಸೋಂಕನ್ನು ಎದುರಿಸುವಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯಸರಕಾರ ತಮ್ಮ ಹೊಣೆಗಾರಿಕೆ ಮತ್ತು ಕರ್ತವ್ಯಗಳನ್ನು ನಿಭಾಯಿಸಬೇಕು ಎಂದು ಆಗ್ರಹಪಡಿಸುತ್ತಲೇ ಸಂಯುಕ್ತ ಮೋರ್ಚಾ ಇಂತಹ ಸಮಯದಲ್ಲಿ ಜನತೆಯ ಬೆಂಬಲಕ್ಕೆ ನಿಲ್ಲುವ ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಸಮರೋಪಾದಿಯಲ್ಲಿ ಮುಂದುವರೆಸಬೇಕು ಎಂದು ಅವರು ಹೇಳಿದ್ದಾರೆ.

**ಕೋಷ್ಟಕ 2. ಪ.ಬಂಗಾಳ ಚುನಾವಣೆಗಳು :ಶೇಕಡಾ ಮತ ಗಳಿಕೆ**

| ಶೇ. ಮತಗಳಿಕೆ | 2011 | *2014 | 2016 | *2019 | 2021 |
|---|---|---|---|---|---|
| ತೃಣಮೂಲ | 38.9 | 39.8 | 45.6 | 43.3 | 47.9 |
| ಬಿಜೆಪಿ | 4.1 | 17.0 | 10.3 | 40.3 | 38.1 |
| ಎಡರಂಗ | 41.1 | 29.9 | 26.6 | 7.5 | 4.9 |
| ಕಾಂಗ್ರೆಸ್ | 9.1 | 9.7 | 12.4 | 5.6 | 2.9 |

# ತಮಿಳುನಾಡು: ಬಿಜೆಪಿಯ ರಾಜಕಾರಣಕ್ಕೆ ಮತದಾರರ ತಿರಸ್ಕಾರ

ಪುಟ 8 ರಿಂದ

ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕರ್ನಾಟಕದ ಸಿಂಗಂ ಎಂದು ಹೆಸರುವಾಸಿಯಾಗಿದ್ದ ಅಣ್ಣಾಮಲೈ ಸೋಲು ಕಂಡಿದ್ದಾರೆ. ಅಣ್ಣಾಮಲೈಗೆ ತೀವ್ರ ಸ್ಪರ್ಧೆ ನೀಡಿದ ಡಿಎಂಕೆ ಪಕ್ಷದ ಅಭ್ಯರ್ಥಿ ಎಲಂಗೋ. ಆರ್ 26,719 ಮತ ಪಡೆದು ವಿಜಯಿಯಾದರೆ, ಅಣ್ಣಾಮಲೈ 22,335 ಮತ ಪಡೆದು ಸೋಲು ಕಂಡರು. ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ನಟಿಸಿರುವ ಖುಷ್ಬು ಸುಂದರ್ ಬಿಜೆಪಿ ಅಭ್ಯರ್ಥಿಯಾಗಿ ಥೌಂಸಡ್ಸ್ ಲೈಟ್ಸ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆದರೆ ಖುಷ್ಬು ಇಲ್ಲಿ ಸೋಲನುಭವಿಸಿದ್ದಾರೆ. ಖುಷ್ಬು ಅವರಿಗೆ ಇಲ್ಲಿ ಎರಡನೇ ಸ್ಥಾನ ಡಿಎಂಕೆ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಖುಷ್ಬು ಮೊದಲು ಕಾಂಗ್ರೆಸ್‌ನಲ್ಲಿದ್ದರು. ಅಲ್ಲಿಂದ ಬಿಜೆಪಿಗೆ ಸೇರ್ಪಡೆಯಾಗಿ ಈಗ ಸೋಲನುಭವಿಸಿದ್ದಾರೆ.

ಡಿಎಂಕೆ ನೇತೃತ್ವದ ರಂಗವು ಬಿಜೆಪಿಯನ್ನೇ ಗುರಿಯಾಗಿಟ್ಟು ಪ್ರಚಾರ ನಡೆಸಿತು. 'ಎಐಎಡಿಎಂಕೆಗೆ ನೀಡುವ ಪ್ರತಿ ಮತವೂ ಬಿಜೆಪಿಗೆ ಹೋಗುತ್ತದೆ' ಎಂದು ಹೇಳುತ್ತಾ ಬಂತು. 'ಇದು ತಮಿಳುನಾಡು ಮತ್ತು ದೆಹಲಿ (ಕೇಂದ್ರ ಸರ್ಕಾರ) ನಡುವಿನ ಸ್ಪರ್ಧೆ. ಸಾಮಾಜಿಕ ನ್ಯಾಯ, ಹಿಂದಿ ಹೇರಿಕೆ, ರಾಜ್ಯದ ಸ್ವಾಯತ್ತತೆ ಬಿಜೆಪಿ ರಿಮೋಟ್ ಕಂಟ್ರೋಲ್‌ನಲ್ಲಿರುವ ಎಐಎಡಿಎಂಕೆ ಸರ್ಕಾರ...' ಮುಂತಾದ ವಿಚಾರಗಳು ಡಿಎಂಕೆ ಪ್ರಚಾರದಲ್ಲಿ ಪ್ರತಿಧ್ವನಿಸಿದ್ದವು.

ಡಿಎಂಕೆ ತನ್ನ ಪ್ರಣಾಳಿಕೆಯಲ್ಲಿ ಉದ್ಯೋಗ, ಬಸ್‌ಗಳಲ್ಲಿ ಉಚಿತ ಪಾಸ್ ಹಾಗೂ ಒಂದು ವರ್ಷದ ಹೆರಿಗೆ ರಜೆ, ರೇಷನ್ ಕಾರ್ಡ್ ಇದ್ದವರಿಗೆ 4000 ರೂಪಾಯಿ ವರೆಗಿನ ಆರ್ಥಿಕ ಸಹಾಯ ಹಾಗೂ ಎಲ್‌ಪಿಜಿ ಸಿಲಿಂಡರ್ ಮೇಲೆ 100 ರೂಪಾಯಿಯ ಸಬ್ಸಿಡಿಯಂತಹ ಭರವಸೆಗಳನ್ನು ನೀಡಿದೆ.

(ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವಂತೆಯೇ ಸ್ಟಾಲಿನ್ ಅಕ್ಕಿ ರೇಷನ್ ಕಾಡ್ ಇರುವ 2.07 ಬಡಜನರಿಗೆ 4000 ರೂ. ಕೊವಿಡ್ ಪರಿಹಾರ ಒದಗಿಸುವ ಕ್ರಮವನ್ನು ಜಾರಿಗೆ ತಂದಿರುವುದಾಗಿ ವರದಿಯಾಗಿದೆ.)

ಇತ್ತ ಎಐಎಡಿಎಂಕೆ ಕೊನೆಗಳಿಗೆಯಲ್ಲಿ 'ಜನಪ್ರಿಯ' ಎನ್ನಬಹುದಾದ ಹಲವು ಸ್ಕೀಂಗಳನ್ನು ತಂದರೂ ಪ್ರಯೋಜನವಾದಂತಿಲ್ಲ; ಬಿಜೆಪಿಯೊಂದಿಗೆ ಮೈತ್ರಿ ಅದಕ್ಕೆ ವರವಾಗುವ ಬದಲು ಶಾಪವಾದಂತೆ ಕಾಣುತ್ತದೆ ಎಂದು ಮತದಾನದ ನಂತರದ ಲೋಕನೀತಿ–ಸಿಎಸ್‌ಡಿಎಸ್ ಸರ್ವೆ (ದಿ ಹಿಂದು, ಮೇ5) ತೋರಿಸುತ್ತದೆ. ಎನ್‌ಡಿಎ ಮೈತ್ರಿಕೂಟ ಬಿಜೆಪಿ ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ, ಆ ರಂಗದ ಇತರ ಪಕ್ಷಗಳು ಸ್ಪರ್ಧಿಸಿದ್ದ ಕ್ಷೇತ್ರಗಳಿಗಿಂತ ಹೀನಾಯವಾದ ಫಲಿತಾಂಶ ಪಡೆದಿದೆ ಎಂಬದೂ ಇದನ್ನು ಸಾಬೀತು ಪಡಿಸುತ್ತದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಕಮಲ್ ಹಾಸನ್ ನೇತೃತ್ವದ ರಂಗವೊಂದನ್ನು ಬಿಟ್ಟು, ಎಐಡಿಎಂಕೆಗೆ ಮತನೀಡಿದ ಮತದಾರರಲ್ಲೂ ಬಹಳಷ್ಟು ಮಂದಿ ಬಿಜೆಪಿ ತಮಿಳುನಾಡಿನ ಸಾಮಾಜಿಕ ಹಂದರಕ್ಕೆ ಒಂದು ಬೆದರಿಕೆ ಎಂದು ಕಾಣುತ್ತಿದ್ದಾರೆ.

ನಿಜ, ತಮಿಳುನಾಡು ವಿಧಾನಸಭೆಯಲ್ಲಿ ಈಗ ಬಿಜೆಪಿ ನಾಲ್ಕು ಪ್ರತಿನಿಧಿಗಳನ್ನು ಎಐಎಡಿಎಂಕೆ ಕೃಪೆಯಿಂದ ಪಡೆದಿದೆ ಎಂಬುದೊಂದು ಆತಂಕಕಾರಿ ಸಂಗತಿ, ವಿಶೇಷವಾಗಿ ಪಶ್ಚಿಮ ಬಂಗಾಲದ ಅನುಭವದ ಹಿನ್ನೆಲೆಯಲ್ಲಿ.

**ಕಮಲ್ ಹಾಸನ್‌ಗೆ ನಿರಾಸೆ:**

ದೊಡ್ಡ ರಾಜಕೀಯ ಮಹಾತ್ವಾಕಾಂಕ್ಷೆಯೊಂದಿಗೆ ಸ್ವಂತ ಪಕ್ಷ ಸ್ಥಾಪಿಸಿ ಚುನಾವಣೆಗೆ ಧುಮುಕಿದ್ದ ನಟ ಕಮಲ್ ಹಾಸನ್‌ಗೆ ತೀವ್ರ ನಿರಾಸೆಯಾಗಿದೆ. ಕಮಲ್‌ರ 'ಮಕ್ಕಳ ನಿಧಿ ಮಯಂ' ಪಕ್ಷದ ಯಾವೊಬ್ಬ ಅಭ್ಯರ್ಥಿಯೂ ಚುನಾವಣೆಯಲ್ಲಿ ಗೆದ್ದಿಲ್ಲ. ಸ್ವತಃ ಕಮಲ್‌ಗೆ ತೀವ್ರ ನಿರಾಸೆಯಾಗಿದ್ದು ಕೊಯಂಬತ್ತೂರು ದಕ್ಷಿಣ ಕ್ಷೇತ್ರದದಲ್ಲಿ 1540 ಮತಗಳ ಅಂತರದಿಂದ ಸೋಲುಂಡಿದ್ದಾರೆ. ತಮಿಳಿನ ಹಿರಿಯ ನಟಿ ಶ್ರೀಪ್ರಿಯ ಕಮಲ್ ಹಾಸನ್ ಅವರ ಮಕ್ಕಳ ನಿಧಿ ಮಯಂ ಪಕ್ಷದಿಂದ ಚೆನ್ನೈನ ಮೈಲಾಪೋರ್ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಆದರೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ನಟ, ಗೀತರಚನೆಕಾರ ಸ್ನೇಹನ್ ಸಹ ಕಮಲ್ ಪಕ್ಷದಿಂದಲೇ ವಿರುಗಂಬಕ್ಕಮ್ ಕ್ಷೇತ್ರದಿಂದ ಸ್ಪರ್ಧಿಸಿ ಸೋಲು ಕಂಡಿದ್ದಾರೆ. ಅವರ ಪಕ್ಷಕ್ಕೆ 2.62ಶೇ. ಮತಸಿಕ್ಕಿದ್ದರೆ, ಅವರ ರಂಗಕ್ಕೆ 2.73ಶೇ. ಮತ ಸಿಕ್ಕಿದೆ.

ಟಿಟಿವಿ ದಿನಕರನ್ ಎಐಎಡಿಎಂಕೆಯ ಮಾಜಿ ನಾಯಕಿ ಶಶಿಕಲಾ ನಟರಾಜನ್ ಅವರ ಸೋದರಳಿಯ, ಟಿಟಿವಿ ದಿನಕರನ್ ತಮ್ಮದೇ ಅಮ್ಮಾ ಮಕ್ಕಳ್ ಮುನ್ನೇತ್ರ ಕಳಗಂ (ಎಎಂಎಂಕೆ) ಪಕ್ಷ ಸ್ಥಾಪಿಸಿದ್ದರು. 2016ರಲ್ಲಿ ಡಾ. ರಾಧಾಕೃಷ್ಣನ್ ನಗರ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದಿದ್ದ ಅವರು, ಈ ಬಾರಿ ಕೋವಿಲ್‌ಪಟ್ಟಿ ಕ್ಷೇತ್ರದಲ್ಲಿ ಎಐಎಡಿಎಂಕೆಯ ಕಡಂಬೂರ್ ರಾಜು ಎದುರು ಸೋಲುಂಡಿದ್ದಾರೆ. ಈ ರಂಗಕ್ಕೆ ಒಟ್ಟು 2.84ಶೇ. ಮತಸಿಕ್ಕಿದೆ.

## ಎಡಪಕ್ಷಗಳ ಸ್ಪರ್ಧೆ

ಪುಟ 8 ರಿಂದ

* ದಿಂಡಿಗಲ್– ಪಾಂಡಿ ಎನ್. 72848 ಮತಗಳನ್ನು ಪಡೆದಿದ್ದಾರೆ. ಗೆದ್ದ ಎಐಎಡಿಎಂಕೆ ಅಭ್ಯರ್ಥಿ 90595 ಮತಗಳನ್ನು ಪಡೆದರು.
* ತಿರುಪರಕುದ್ರಂ–ಪೊನ್ನುತಾಯಿ ಅವರು 74194 ಮತಗಳನ್ನು ಗಳಿಸಿದ್ದಾರೆ. ಗೆದ್ದ ಎಐಎಡಿಎಂಕೆ ಅಭ್ಯರ್ಥಿ1,03,683 ಮತಗಳನ್ನು ಪಡೆದರು.
* ಹರೂರು– ಕುಮಾರ್ ಎ ಅವರು 68699 ಮತಗಳನ್ನು ಗಳಿಸಿದ್ದಾರೆ. 99061 ಮತಗಳನ್ನು ಪಡೆದ ಎಐಎಡಿಎಂಕೆ ಪಕ್ಷದ ಅಭ್ಯರ್ಥಿ ಗೆದ್ದಿದ್ದಾರೆ.
* ಕೋವಿಲ್‌ಪಟ್ಟಿ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಕೆ.ಶ್ರೀನಿವಾಸನ್ ಎಐಎಡಿಎಂಕೆ ಅಭ್ಯರ್ಥಿಯಲ್ಲದೆ, ಎಎಂಎಂಕೆಯ ನಾಯಕ ಟಿಟಿವಿ ದಿನಕರನ್ ರನ್ನೂ ಎದುರಿಸಿ 37380 ಮತಗಳನ್ನು ಪಡೆದಿದ್ದಾರೆ. ಇಲ್ಲಿ ಎಎಐಎಡಿಎಂಕೆ ಅಭ್ಯರ್ಥಿ ಗೆದ್ದು ದಿನಕರನ್ ಎರಡನೇ ಸ್ಥಾನದಲ್ಲಿದ್ದರು.

ಸಿಪಿಐನ ಉಳಿದ ನಾಲ್ಕು ಅಭ್ಯರ್ಥಿಗಳೂ ಪ್ರಬಲ ಸ್ಪರ್ಧೆ ನೀಡಿ ಎರಡನೇ ಸ್ಥಾನ ಗಳಿಸಿದ್ದಾರೆ.

ಎರಡು ಪ್ರಮುಖ ಮೈತ್ರಿಕೂಟಗಳು ಬಿಟ್ಟು ಉಳಿದೆಲ್ಲ ರಂಗಗಳು ಮತ್ತು ಪಕ್ಷಗಳು ಒಟ್ಟು ಸುಮಾರು 12ಶೇ. ಮತಗಳಿಸಿವೆ.

---

ಅತ್ಯಂತ ಭ್ರಷ್ಟರು, ದಮನಕಾರಿಗಳು ಮತ್ತು ಜನಪ್ರಿಯತೆ ಕಳೆದುಕೊಂಡವರಾಗಿದ್ದರು.

ಇಂತಹ ಕೆಲವರಿಗೆ ತೃಣಮೂಲ ಟಿಕೆಟು ಸಿಗುವುದು ಅನುಮಾನ ಇದ್ದದ್ದರಿಂದ ಅವರು ಬಿಜೆಪಿಗೆ ಸೇರಿಕೊಂಡರು. ರಾತ್ರೋರಾತ್ರಿ ಪಕ್ಷಕ್ಕೆ ತೃಣಮೂಲದಿಂದ ಬಂದವರಿಗೆ ಟಿಕೇಟು ಕೊಟ್ಟದ್ದು ಮೂಲ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರಲ್ಲಿ ತೀವ್ರ ಅತೃಪ್ತಿ ಉಂಟು ಮಾಡಿತು, ಎರಡು ಬಣಗಳ ನಡುವೆ ಹೊಡೆದಾಟಗಳಿಗೆ ಕಾರಣವಾಗಿತ್ತು. ಹೀಗೆ ಈ ನಡೆ ಬಿಜೆಪಿಗೆ ಮುಳುವಾಯಿತು. 25 ಶಾಸಕರು ಸೇರಿದಂತೆ 148 ತೃಣಮೂಲದಿಂದ ಪಕ್ಷಾಂತರ ಮಾಡಿದ ನಾಯಕರು ಬಿಜೆಪಿಯಿಂದ ಸ್ಪರ್ಧಿಸಿದ್ದರು. ಇವರಲ್ಲಿ ಮಮತಾ ಅವರ ನಿಕಟವರ್ತಿಗಳಾದ ಮತ್ತು ಪ್ರಭಾವಿ ನಾಯಕರಾದ ಸುವೆಂದು ಅಧಿಕಾರಿ, ಮುಕುಲ್ ರಾಯ್ ಸೇರಿದಂತೆ 6 ಜನ ಮಾತ್ರ ಗೆದ್ದಿದ್ದಾರೆ. ಬಿಜೆಪಿಯ ಈ ತಂತ್ರ ಬ್ಯೂಮರಾಂಗ್ ಆಯಿತು ಎಂಬುದು ಸ್ಪಷ್ಟ. ತೃಣಮೂಲ ನಾಯಕರಲ್ಲಿ ಹಲವರು ಭ್ರಷ್ಟರು ಇದ್ದಿದ್ದು, ಆಡಳಿತ ಅತ್ಯಂತ ಭ್ರಷ್ಟವಾಗಿತ್ತು ಎಂಬುದು ನಿಜ. ಆದರೆ ಬಿಜೆಪಿಯ 'ವಾಶಿಂಗ್ ಮಶೀನ್' ಹಾದು ಹೋದವರು 'ಸ್ವಚ್ಛ' ಎನ್ನುತ್ತಾ, ತೃಣಮೂಲದಲ್ಲಿ ಉಳಿದ ಭ್ರಷ್ಟರ ಮೇಲೆ ಸಿ.ಬಿ.ಐ, ಇ.ಡಿ ಅಸ್ತ್ರಗಳನ್ನು ಪ್ರಯೋಗಿಸುವ ಬಿಜೆಪಿಯ ಗೋಸುಂಬೆತನವನ್ನು ರಾಜ್ಯದ ಜನತೆ ಒಪ್ಪಿಕೊಳ್ಳಲಿಲ್ಲ. ಬಿಜೆಪಿಗೆ ಹೋದ ಮತ್ತು ತೃಣಮೂಲದಲ್ಲಿ ಉಳಿದ ಹಲವು ಪ್ರಭಾವಿ ನಾಯಕರು ಶಾರದ ಚಿಟ್ ಫಂಡ್ ಮಹಾ ಹಗರಣದಲ್ಲಿ ಭಾಗಿಯಾಗಿದ್ದು ಇದರ ಸಿಬಿಐ ತನಿಖೆ ಹಲವು ವರ್ಷಗಳ ನಂತರವೂ ಮುಗಿಯದೇ ಇರುವುದು ಬಿಜೆಪಿ ಯ 'ಭ್ರಷ್ಟಾಚಾರ'ದ ಅಭಿಯಾನದ ಡೋಂಗಿತನವನ್ನು ಬಯಲಿಗೆಳೆಯಿತು.

ಪ್ರಾದೇಶಿಕ ಭಾಷೆ, ಅಸ್ಮಿತೆಗಳನ್ನು ಗೌರವಿಸದ ಹಿಂದಿ ಹೇರಿಕೆಯ ಹಣೆಪಟ್ಟಿ ಬಿಜೆಪಿಗೆ ಇದ್ದು, ಬಂಗಾಳದಲ್ಲಿ ಇದೊಂದು ದೊಡ್ಡ ನಕಾರಾತ್ಮಕ ಅಂಶವಾಗಬಹುದು ಎಂದು ಬಿಜೆಪಿಗೆ ಗೊತ್ತಿತ್ತು. ಬಂಗಾಳದ ಸಂಸ್ಕೃತಿ ಹಾಗೂ ಸಾಂಸ್ಕೃತಿಕ ನಾಯಕರ (ಟಾಗೋರ್ ಇತ್ಯಾದಿ) ಪರಂಪರೆಗೆ ಹುಸಿ ಸಂಬಂಧವನ್ನು (ಪ್ರತಿದಿನ ಬೆಳಿಗ್ಗೆ ಎದ್ದು ರಬೀಂದ್ರ ಸಂಗೀತ್ ಕೇಳುತ್ತಿದ್ದೆ ಎಂಬ ಮೋದಿಯ ಹಾಸ್ಯಾಸ್ಪದ ಹೇಳಿಕೆ ಇತ್ಯಾದಿ) ಕಲ್ಪಿಸಿಕೊಳ್ಳುವ, ವಾರಸುದಾರಿಕೆಯನ್ನು 'ವಶಪಡಿಸಿಕೊಳ್ಳುವ' ಪ್ರಯತ್ನವನ್ನು ಬಿಜೆಪಿ ಮಾಡಿತು. ಬಂಗಾಳವನ್ನು ಚಿನ್ನದ ನಾಡು (ಶೋನಾರ್ ಬಾಂಗ್ಲಾ) ಮಾಡ್ತೇವೆ ಎನ್ನುವ ಘೋಷಣೆ ಕೊಟ್ಟಿತು. ಅದಕ್ಕೆ ಬದಲಾಗಿ ತೃಣಮೂಲ 'ಬಿಜೆಪಿಯ ಗುಜರಾತ್, ಯು.ಪಿ ಯ ನಾಯಕರು ಬೇಡ', 'ಮಮತಾ ಬಂಗಾಳದ ಮಗಳು' ಎಂದು ಪ್ರಾದೇಶಿಕ ಅಂಧಾಭಿಮಾನವನ್ನು ಬಡಿದೆಬ್ಬಿಸಿ ಬಿಜೆಪಿಯನ್ನು ಫಜೀತಿಗೆ ಈಡು ಮಾಡಿತು. ಬಿಜೆಪಿ ಕೇಂದ್ರ ಸರಕಾರ ಹಲವು ಸಂದರ್ಭಗಳಲ್ಲಿ ಒಕ್ಕೂಟ ತತ್ವಗಳನ್ನು ಗಾಳಿಗೆ ತೂರಿ ರಾಜ್ಯಗಳ ಅಧಿಕಾರಗಳ ಮೇಲೆ ದಾಳಿ ಮಾಡಿದ್ದರ ಮತ್ತು ಕೇಂದ್ರೀಯ ಏಜೆನ್ಸಿಗಳನ್ನು ವಿರೋಧ ಪಕ್ಷಗಳನ್ನು ಬಗ್ಗು ಬಡಿಯಲು ಬಳಸಿದ್ದರ ವಿರುದ್ಧ ಸಂಯುಕ್ತ ಮೋರ್ಚಾ ಪ್ರಚಾರ ಮಾಡಿ, ಬಂಗಾಳದ ಪ್ರಾದೇಶಿಕ ಅಸ್ಮಿತೆಯ ಬಗ್ಗೆ ಬಿಜೆಪಿಯ ನಾಟಕಗಳನ್ನು ಬಯಲಿಗೆಳೆಯಿತು.




ಕೃಪೆ: ಪಿ. ಮಹಮ್ಮದ್, ವಾ.ಭಾ

**'ದೀದಿ ಓ ದೀದಿ'**

ಪ.ಬಂಗಾಳದಲ್ಲೂ ಬೇರೆ ರಾಜ್ಯಗಳಂತೆ ಬಿಜೆಪಿ ಯ ಪ್ರಚಾರದಲ್ಲಿ ಎದುರಾಳಿಗಳನ್ನು ವೈಯಕ್ತಿಕವಾಗಿ ನಿಂದಿಸುವ, ಅಶ್ಲೀಲವಾದ ಕೆಳಮಟ್ಟದ ಅಸಭ್ಯ ಭಾಷೆಯ ಪ್ರಯೋಗ ಸಾಮಾನ್ಯವಾಗಿತ್ತು. ಮಮತಾ ಬ್ಯಾನರ್ಜಿಯನ್ನು ಗುರಿ ಮಾಡಿ ಪ್ರಧಾನಿ ಮೋದಿಯಿಂದ ಆರಂಭಿಸಿ ಎಲ್ಲರೂ ಅಸಹ್ಯ ಅಸಭ್ಯ ಟೀಕೆ/ವ್ಯಂಗ್ಯಗಳನ್ನು ಮಾಡುತ್ತಿದ್ದರು. ಮೋದಿ ಅವರ 'ದೀದಿ ಓ ದೀದಿ' ಕುಪ್ರಸಿದ್ಧವಾಯಿತು. ಬಂಗಾಳದ ಮುಖ್ಯಮಂತ್ರಿಯಾಗಿರುವ ಒಬ್ಬ ಒಂಟಿ ಮಹಿಳೆಯನ್ನು ದೆಹಲಿಯ ಮೂರು ಪ್ರಬಲ ನಾಯಕರು ಅಸಭ್ಯ ಭಾಷೆಯಲ್ಲಿ ನಿಂದಿಸುವುದು ತೃಣಮೂಲದ ವಿರೋಧಿಗಳು ಸೇರಿದಂತೆ ಹಲವರಿಗೆ ಇಷ್ಟವಾಗಲಿಲ್ಲ. ನಂದಿಗ್ರಾಮಕ್ಕೆ ಪ್ರಚಾರಕ್ಕೆ ಹೋದಾಗ ಮಮತಾ ಬ್ಯಾನರ್ಜಿ ಅವರ ಕಾಲಿಗೆ ತೀವ್ರವಾಗಿ ಏಟು (ಈ ಕುರಿತು ಏನೇ ವಿವಾದಗಳಿದ್ದರೂ) ಬಿದ್ದು, ಗಾಲಿ ಕುರ್ಚಿಯಲ್ಲಿ ಓಡಾಡಿ ಪ್ರಚಾರ ಮಾಡುವಾಗಲೂ ಈ ರೀತಿಯ ಅಸಹ್ಯ ಅಸಭ್ಯ ನಡವಳಿಕೆ ಇನ್ನಷ್ಟು ಹೇಸಿಗೆಯನ್ನು ಹುಟ್ಟಿಸಿತು. ಇವೆಲ್ಲ ಮಮತಾ ಮತ್ತು ತೃಣಮೂಲದ ಪರವಾಗಿ ಅನುಕಂಪದ ಅಲೆಯನ್ನು ಹಬ್ಬಿಸಿತು. ಅದರಲ್ಲೂ ಒಬ್ಬ ಮಹಿಳಾ ನಾಯಕಿಗೆ ಸಹಜವಾಗಿಯೇ ಮಹಿಳೆಯರು ಸಹಾನುಭೂತಿಯನ್ನು ಹೊಂದಿರುವಾಗ, ಇಂತಹ ನಡವಳಿಕೆ ಅದನ್ನು ಇನ್ನಷ್ಟು ಹೆಚ್ಚಿಸಿತು. ಬಿಜೆಪಿಯ ಈ ತಂತ್ರ ಸಹ ಬ್ಯೂಮರಾಂಗ್ ಆಯಿತು.

ತೃಣಮೂಲ ಹಿಂಸಾಚಾರದಲ್ಲಿ ಎತ್ತಿದ ಕೈ ಆಗಿದ್ದು, ಅದರ ಗೂಂಡಾಗಿರಿಯ ಕುರಿತು ಬಿಜೆಪಿ ತೀವ್ರ ಪ್ರಚಾರ ಮಾಡಿತು. ಆದರೆ ಹಿಂದೆನೂ ಪ್ರಚಾರದ ಸಂದರ್ಭದಲ್ಲೂ ಬಿಜೆಪಿ ಹರಿಯ ಬಿಟ್ಟ ಹಿಂಸಾಚಾರ ತೃಣಮೂಲವನ್ನು ನಾಚಿಸುವಂತಿತ್ತು. ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜಕೀಯ ಹಿಂಸಾಚಾರ ಅಲ್ಲದೆ ಕೋಮು ಹಿಂಸಾಚಾರ ಸಹ ಇದಕ್ಕೆ ಸೇರಿಕೊಳ್ಳುತ್ತದೆ ಎಂಬ ಆತಂಕ ವ್ಯಾಪಕವಾಗಿತ್ತು. ಬಿಜೆಪಿ ಕೇಂದ್ರ–ರಾಜ್ಯ ಸರ್ಕಾರಗಳು ಕೊವಿದ್ ಎರಡನೆಯ ಅಲೆಯನ್ನು ನಿರ್ವಹಿಸಿದ ರೀತಿ ಮತ್ತು ಅಗಾಧ ವೈಫಲ್ಯಗಳೂ ಬಿಜೆಪಿ ಸೋಲಿಸಬೇಕು ಎಂಬ ಧೋರಣೆಗೆ ಪುಷ್ಟಿ ಕೊಟ್ಟಿತು. ಇದಲ್ಲದೆ ತೃಣಮೂಲ 2019ರ ಹಿನ್ನಡೆಯ ನಂತರ ಪ್ರಶಾಂತ ಕಿಶೋರ್ ಅವರನ್ನು ಸಲಹೆಗಾರನಾಗಿ ತೆಗೆದುಕೊಂಡು ಅವರ ಹಲವು ಸಲಹೆಗಳನ್ನು ಜಾರಿ ಮಾಡಿದ್ದು ತೃಣಮೂಲದ ವಿರುದ್ಧ ತೀವ್ರ ಅತೃಪ್ತಿಯನ್ನು ಸ್ವಲ್ಪ ಮಟ್ಟಿಗೆ ಶಮನ ಮಾಡುವುದರಲ್ಲಿ ಸಫಲವಾಯಿತು. ತೃಣಮೂಲದ ನ್ಯೂನತೆಗಳನ್ನು – ಪ್ರಮುಖವಾಗಿ ತಳಮಟ್ಟದ ಭ್ರಷ್ಟಾಚಾರ, ದುರಾಡಳಿತ, ಹಿಂಸಾಚಾರ, ಶಾಸಕರ ವಿರುದ್ಧ ಆಕ್ರೋಶ ಗಳನ್ನು – ಸ್ವಲ್ಪ ಮಟ್ಟಿಗೆ ತಹಬಂದಿಗೆ ತಂದು, ಚುನಾವಣೆಯ ಮೊದಲ ತಿಂಗಳುಗಳಲ್ಲಿ ಹಲವು ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಿಸಿದ್ದು, ಜನರ ಸವಾಲುಗಳನ್ನು ಮಮತಾ ನೇರವಾಗಿ ಕೇಳುವ ವ್ಯವಸ್ಥೆ, ಸಮೀಕ್ಷೆ ನಡೆಸಿ ಜನಾಕ್ರೋಶಕ್ಕೆ ಒಳಗಾದ ಶಾಸಕರಿಗೆ ಟಿಕೆಟ್ ನಿರಾಕರಿಸಿದ್ದು – ಇತ್ಯಾದಿ ಅವರ ಸಲಹೆಗಳ ಜಾರಿ ತೃಣಮೂಲದ ಆಡಳಿತ–ವಿರೋಧಿ ಅತೃಪ್ತಿಯನ್ನು ಕಡಿಮೆ ಮಾಡುವಲ್ಲಿ ಸಹಾಯಕವಾದವು.

**ಸಂಯುಕ್ತ ಮೋರ್ಚಾ ಅಜೆಂಡಾ ಯಾಕೆ ಜನ ಸ್ವೀಕರಿಸಲಿಲ್ಲ**

ಹೀಗೆ ಬಿಜೆಪಿಯ ಅತಿ ಧ್ರುವೀಕರಣದ, ಹುಸಿ ಭ್ರಷ್ಟಾಚಾರ–ವಿರೋಧದ, ಹುಸಿ ಪ್ರಾದೇಶಿಕ ಅಸ್ಮಿತೆಯ, ಹಿಂಸಾಚಾರ, ವೈಯಕ್ತಿಕ ಟೀಕೆಯ ಎಲ್ಲ ತಂತ್ರಗಳು ವಿಫಲವಾದವು. ಮಾತ್ರವಲ್ಲ ಬ್ಯೂಮರಾಂಗ್ ಆದವು. ಬಂಗಾಳದ ದೊಡ್ಡ ಜನವಿಭಾಗಗಳಲ್ಲಿ ಬಿಜೆಪಿಯನ್ನು ಸೋಲಿಸದೆ ರಾಜ್ಯಕ್ಕೆ ಉಳಿಗಾಲವಿಲ್ಲ ಎಂಬ ಭಾವನೆಯನ್ನು ತಂದಿತು. ಇದು ಬಿಜೆಪಿಯ ಕಟ್ಟಾ ಬೆಂಬಲಿಗರನ್ನು ಬಿಟ್ಟರೆ,

ಪುಟ 15 ಕ್ಕೆ

# ಪ್ರಭುತ್ವದ ಅಭೂತಪೂರ್ವ ದಮನವನ್ನು ಎದುರಿಸಿ ಕಾರ್ಮಿಕ ವರ್ಗದ ಹೋರಾಟಗಳು 1971-77




**ಈ ಅವಧಿ ದೇಶದಲ್ಲಿ ದೂರಗಾಮಿ ರಾಜಕೀಯ ಬದಲಾವಣೆಗಳಿಗೆ ಸಾಕ್ಷಿಯಾಯಿತು. ಆಳುವ ಪಕ್ಷದಲ್ಲಿ ವಿಭಜನೆ ಮಾತ್ರವಲ್ಲ, ಏಕಸ್ವಾಮ್ಯದ ಶಕ್ತಿಯೂ ನಷ್ಟವಾಯಿತು. ಕೇಂದ್ರದಲ್ಲಿ ಪರ್ಯಾಯ ಸರ್ಕಾರಗಳನ್ನು ಸ್ಥಾಪಿಸಲಾಯಿತು, ಅದು ಸ್ವಲ್ಪ ಸಮಯದ ವರೆಗೆ ಮುಂದುವರೆಯಿತು ಮತ್ತು ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯರು ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಸರ್ಕಾರಗಳು ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬರತೊಡಗಿದವು. ಈ ಪರಿಸ್ಥಿತಿಗಳಲ್ಲಿ, ಕಾರ್ಮಿಕ ವರ್ಗವು ಪ್ರಬಲ ಮುಷ್ಕರ ಕಾರ್ಯಾಚರಣೆಗಳನ್ನು ಒಳಗೊಂಡಂತೆ ತೀಕ್ಷ್ಣ ಹೋರಾಟವನ್ನು ಮಾಡಬೇಕಾಯಿತು.. ಪ್ರತಿರೋಧ ಹೋರಾಟವನ್ನು ಪ್ರಾರಂಭಿಸಲು ಐಕ್ಯ ವೇದಿಕೆಯನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಿದವು.**

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ

### 1970 ರ ನಂತರದ ಅವಧಿಯ ವಿಶೇಷ ಗುಣಲಕ್ಷಣಗಳು

ದೇಶದ ಆರ್ಥಿಕ ಬಿಕ್ಕಟ್ಟು ಗಾಢವಾಗುತ್ತಲೇ ಸಾಗಿತ್ತು ಮತ್ತು ಎಲ್ಲಾ ಬಂಡವಾಳಶಾಹಿ ಸರ್ಕಾರಗಳಂತೆ, ಭಾರತ ಸರ್ಕಾರವು ಸಹ ಬಿಕ್ಕಟ್ಟಿನ ಭಾರವನ್ನು ಕಾರ್ಮಿಕ ವರ್ಗದ ಹೆಗಲ ಮೇಲೆ ವರ್ಗಾಯಿಸಲು ಪ್ರಯತ್ನಿಸಿತು. ಇದಲ್ಲದೆ, ಈ ಅವಧಿಯು ನೆರೆಯ ರಾಷ್ಟ್ರವಾದ ಪಾಕಿಸ್ತಾನದೊಂದಿಗಿನ ಯುದ್ಧ ಮತ್ತು ಬಾಂಗ್ಲಾದೇಶ ಸ್ವತಂತ್ರ ದೇಶವಾಗಿ ಜನ್ಮತಳೆಯುವದಕ್ಕೆ ಸಾಕ್ಷಿಯಾಯಿತು. ಈ ಬೆಳವಣಿಗೆಗಳು ದೇಶದ ಆಂತರಿಕ ಪರಿಸ್ಥಿತಿಯ ಮೇಲೆ, ವಿಶೇಷವಾಗಿ ಕಾರ್ಮಿಕ ವರ್ಗದ ಪರಿಸ್ಥಿತಿಗಳ ಮೇಲೆ ಅದರ ಪ್ರಭಾವವನ್ನು ಬೀರಿದವು.

ವೇತನ–ಸ್ಥಗಿತ ಅಥವಾ ಡಿಫೆನ್ಸ್ ಆಫ್ ಇಂಡಿಯಾ ನಿಯಮಗಳು, ಎಸ್ಮಾ, ಸಂವಿಧಾನದ 311 (2) ಬಿ ಮತ್ತು ಸಿ ಕಲಂಗಳ ಮೂಲಕ ದಮನದ ರೂಪದಲ್ಲಿ ಕಾರ್ಮಿಕ ವರ್ಗದ ವಿರುದ್ಧ ಹೊಸ ಆಕ್ರಮಣ ಮಾತ್ರವಲ್ಲ. ದೇಶವನ್ನು ಸಂವಿಧಾನದ ತುರ್ತು ಪರಿಸ್ಥಿತಿಗೆ ಒಳಪಡಿಸಲಾಯಿತು ಮತ್ತು ಆ ಮೂಲಕ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಲಾಯಿತು.

ಈ ಅವಧಿ ದೇಶದಲ್ಲಿ ದೂರಗಾಮಿ ರಾಜಕೀಯ ಬದಲಾವಣೆಗಳಿಗೆ ಸಾಕ್ಷಿಯಾಯಿತು. ಆಳುವ ಪಕ್ಷದಲ್ಲಿ ವಿಭಜನೆ ಮಾತ್ರವಲ್ಲ, ಏಕಸ್ವಾಮ್ಯದ ಶಕ್ತಿಯೂ ನಷ್ಟವಾಯಿತು. ಕೇಂದ್ರದಲ್ಲಿ ಪರ್ಯಾಯ ಸರ್ಕಾರಗಳನ್ನು ಸ್ಥಾಪಿಸಲಾಯಿತು, ಅದು ಸ್ವಲ್ಪ ಸಮಯದ ವರೆಗೆ ಮುಂದುವರೆಯಿತು ಮತ್ತು ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯರು ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಸರ್ಕಾರಗಳು ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬರತೊಡಗಿದವು.

ಈ ಪರಿಸ್ಥಿತಿಗಳಲ್ಲಿ, ಕಾರ್ಮಿಕ ವರ್ಗವು ಪ್ರಬಲ ಮುಷ್ಕರ ಕಾರ್ಯಾಚರಣೆಗಳನ್ನು ಒಳಗೊಂಡಂತೆ ತೀಕ್ಷ್ಣ ಹೋರಾಟವನ್ನು ಮಾಡಬೇಕಾಯಿತು.. ಪ್ರತಿರೋಧ ಹೋರಾಟವನ್ನು ಪ್ರಾರಂಭಿಸಲು ಐಕ್ಯ ವೇದಿಕೆಯನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಿದವು. ಐಕ್ಯ–ವೇದಿಕೆಗಳು ದೀರ್ಘಕಾಲದ ವರೆಗೆ ಅಸ್ತಿತ್ವದಲ್ಲಿರಲಿಲ್ಲ. ಹೊಸ ಸಂಯೋಜನೆಯನ್ನು ಮಾಡಲು ಮತ್ತೆ ಪ್ರಯತ್ನಗಳು ನಡೆದವು ಮತ್ತು ಅದರ ಕುಸಿತದ ನಂತರ, ಮತ್ತೊಂದು ಹೊಸ ಸಂಯೋಜನೆಯನ್ನು ರೂಪಿಸಲು ಪ್ರಯತ್ನಗಳನ್ನು ನವೀಕರಿಸಲಾಯಿತು. ಈ ಪ್ರಕ್ರಿಯೆಯು ಇಂದಿನವರೆಗೂ ಮುಂದುವರಿಯುತ್ತಿದೆ.

### ದಬ್ಬಾಳಿಕೆ ಮತ್ತು ಹಿಂಸೆಯ ವಿರುದ್ಧ ಪಶ್ಚಿಮ ಬಂಗಾಳದಲ್ಲಿ ಕಾರ್ಮಿಕ ವರ್ಗದ ಪ್ರತಿರೋಧ

ಪಶ್ಚಿಮ ಬಂಗಾಳದಲ್ಲಿ ಕಾರ್ಮಿಕ–ವರ್ಗದ ಚಳುವಳಿ ವಿಶೇಷವಾಗಿ ಸಮರಶೀಲವಾಗಿ ಮಾರ್ಪಟ್ಟಿದ್ದರಿಂದ, ಹೆಚ್ಚುತ್ತಿದ್ದ ಈ ಚಳುವಳಿಯನ್ನು ನಿಗ್ರಹಿಸಲು ಸರ್ಕಾರವು ಕಾರ್ಮಿಕರ ಮೇಲೆ ಭಾರೀ ಪ್ರಮಾಣದಲ್ಲಿ ದಾಳಿಗೆ ಇಳಿಯಿತು.

ಈ ಸಮಯದಲ್ಲಿ 400 ಕ್ಕೂ ಹೆಚ್ಚು ರೋಗಗ್ರಸ್ತ ಕಾರ್ಖಾನೆಗಳು ಮುಚ್ಚಲ್ಪಟ್ಟವು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವುಗಳನ್ನು ಪುನರಾರಂಭಿಸುವಲ್ಲಿ ನಿರ್ಲಕ್ಷ್ಯ ವಹಿಸಿದವು. ಈ ಪರಿಸ್ಥಿತಿಯಲ್ಲಿಯೇ ವಿವಿಧ ಕಾರ್ಮಿಕ ಸಂಘಗಳು ಜಂಟಿಯಾಗಿ ಆಗಸ್ಟ್ 27, 1971 ರಂದು ಸಾರ್ವತ್ರಿಕ ಮುಷ್ಕರ ಮತ್ತು ಹರತಾಳವನ್ನು ಆಯೋಜಿಸಿದವು.

ಈ ಮುಷ್ಕರದ ಬೇಡಿಕೆಗಳಲ್ಲಿ ಭಾರತ ಸರ್ಕಾರವು ಹೊಸದಾಗಿ ಹುಟ್ಟಿದ ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಬೇಕು ಎನ್ನುವ ಬೇಡಿಕೆಯೂ ಒಳಗೊಂಡಿತ್ತು ಎನ್ನುವುದನ್ನು ಗಮನಿಸಬಹುದು. ಇದು ಭಾರತದ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಕರ್ತವ್ಯವೆಂದು ಮುಷ್ಕರ ಸಂಘಟಕರು ಎತ್ತಿದ ಮಹತ್ವದ ಬೇಡಿಕೆಯಾಗಿತ್ತು. ಸ್ವಾಭಾವಿಕವಾಗಿ, ಎತ್ತಿರುವ ಬೇಡಿಕೆಗಳಿಗೆ ಜನಸಮೂಹದ ವ್ಯಾಪಕವಾದ ಬೆಂಬಲವೂ ದೊರಕಿತು. ಮತ್ತು ಸಾರ್ವತ್ರಿಕ ಮುಷ್ಕರ ಮತ್ತು ಹರತಾಳ ಭವ್ಯವಾದ ಯಶಸ್ಸನ್ನು ಗಳಿಸಿತು,

ಪಶ್ಚಿಮ ಬಂಗಾಳದಲ್ಲಿ ರಾಜ್ಯ ಸರ್ಕಾರಿ ನೌಕರರ ಚಳುವಳಿಯ 13 ಉನ್ನತ ಪದಾಧಿಕಾರಿಗಳನ್ನು ಅನ್ಯಾಯವಾಗಿ ವಜಾಮಾಡಿದ್ದರ ವಿರುದ್ಧ ಪಶ್ಚಿಮ ಬಂಗಾಳದಲ್ಲಿ 13 ಅಕ್ಟೋಬರ್ 1971 ರಂದು ಮತ್ತೊಂದು ಸಾರ್ವತ್ರಿಕ ಮುಷ್ಕರ ಮತ್ತು ಹರತಾಳ ನಡೆಯಿತು.

### ಇತರ ಅನೇಕ ಕ್ಷೇತ್ರಗಳಲ್ಲಿ ಹೋರಾಟ

ಈ ಅವಧಿಯಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಹೆಚ್ಚಿನ ಬೋನಸ್, ವೇತನ ಹೆಚ್ಚಳ, ಅನ್ಯಾಯದ ಶಿಕ್ಷೆಯ ವಿರುದ್ಧ ಮತ್ತು ಇತರ ಬೇಡಿಕೆಗಳಿಗಾಗಿ ಅಸಂಖ್ಯಾತ ಹೋರಾಟಗಳು ನಡೆದವು. ಈ ಬೇಡಿಕೆಗಳ ಮೇಲೆ 1971 ಅಕ್ಟೋಬರ್ 11 ರಿಂದ ಮುಂಬೈಯ ಎರಡು ಲಕ್ಷ ಜವಳಿ ಕಾರ್ಮಿಕರ ಐದು ದಿನಗಳ ಕಾಲ ನಡೆದ ಮುಷ್ಕರವು ಕಾರ್ಮಿಕರ ಏಕತೆಯ ಭವ್ಯ ಪ್ರದರ್ಶನವಾಗಿತ್ತು ಮತ್ತು ಇದು ಐಎನ್‌ಟಿಯುಸಿಗೆ ತನ್ನದೇ ಆದ ಕೋಟೆಯಲ್ಲಿ ತೀವ್ರ ಹೊಡೆತವನ್ನು ನೀಡಿತು.

ಮುಂಬೈ ಹೊರತಾಗಿ, ನಾಗ್ಪುರ, ಶೋಲಾಪುರ. ಅಕೋಲಾ, ಕೊಲ್ಹಾಪುರ, ಕೊಯಮತ್ತೂರು ಮತ್ತು ಕಾನ್ಪುರದಂತಹ ಇತರ ಪ್ರಮುಖ ಜವಳಿ ಕೇಂದ್ರಗಳಲ್ಲಿಯೂ ಮುಷ್ಕರಗಳು ನಡೆದವು. ಅಕ್ಟೋಬರ್ 5, 1971 ರಂದು ಕೊಯಮತ್ತೂರಿನಲ್ಲಿ 40.000 ಕಾರ್ಮಿಕರ ಮುಷ್ಕರ ಪ್ರಾರಂಭವಾಯಿತು ಮತ್ತು 15 ದಿನಗಳ ಕಾಲ ನಡೆಯಿತು. ಕಾನ್ಪುರದಲ್ಲಿ 25,000 ಕಾರ್ಮಿಕರು 16 ಅಕ್ಟೋಬರ್ 71 ರಂದು ಒಂದು ದಿನದ ಮುಷ್ಕರ ಮಾಡಿದರು.

ಬೋನಸ್‌ಗಾಗಿ ಮಾವೂರ್ ರೇಯಾನ್ ಕಾರ್ಖಾನೆಯ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಕೊಝಿಕೋಡ್ ಜಿಲ್ಲೆಯ ಸುಮಾರು 1,50,000 ಕೈಗಾರಿಕಾ ಕಾರ್ಮಿಕರು 1971 ರ ಅಕ್ಟೋಬರ್ 26 ರಂದು ಒಂದು ದಿನದ ಸಾಂಕೇತಿಕ ಮುಷ್ಕರದಲ್ಲಿ ಭಾಗವಹಿಸಿದರು. ಈ ಅವಧಿಯಲ್ಲಿ ಕೇರಳದಲ್ಲಿ ವಿವಿಧ ಕೈಗಾರಿಕಾ ಘಟಕಗಳಲ್ಲಿ ಅನೇಕ ಹೋರಾಟಗಳನ್ನು ನಡೆಸಲಾಯಿತು. ಮತ್ತೊಂದು ಗಮನಾರ್ಹ ಮುಷ್ಕರವು ಜನವರಿ 24, 1972 ರಂದು 1,25,000 ನಾರು ಉದ್ದಿಮೆಯ ಕಾರ್ಮಿಕರಿಂದ ಅಂಜುತಂಜು, ಕಾಯಿರ್ ವಲಯದಲ್ಲಿ ಸರ್ಕಾರ ಘೋಷಿಸಿದ ಕನಿಷ್ಠ ವೇತನವನ್ನು ಜಾರಿಗೆ ತರಲು ಒತ್ತಾಯಿಸಿ ನಡೆಯಿತು.

ಆ ಕಾಲದ ಇತರ ಮಹತ್ವದ ಹೋರಾಟಗಳ ಪೈಕಿ, ತಮಿಳುನಾಡಿನ ಸಿಂಪ್ಸನ್ ಗ್ರೂಪ್ ಆಫ್ ಇಂಡಸ್ಟ್ರೀಸ್ ನಲ್ಲಿ 18,000 ಕಾರ್ಮಿಕರ ಅನಿರ್ದಿಷ್ಟ ಕಾಲದ ಮುಷ್ಕರ ಗಮನಕ್ಕೆ ಅರ್ಹವಾಗಿದೆ. 1971 ರ ಡಿಸೆಂಬರ್ 27 ರಿಂದ ಪ್ರಾರಂಭವಾದ ಮುಷ್ಕರ 11 ಜನವರಿ 1972 ರಂದು ಯಶಸ್ವಿಯಾಗಿ ಕೊನೆಗೊಂಡಿತು.. ಈ ಒಪ್ಪಂದವು ದಕ್ಷಿಣ ಭಾರತದ ಈ ಅತಿ ದೊಡ್ಡ ಎಂಜಿನಿಯರಿಂಗ್ ಉದ್ಯಮದಲ್ಲಿ ಕಾರ್ಮಿಕರ ಅದ್ಭುತ ವಿಜಯವನ್ನು ಸೂಚಿಸಿತು.

ಸಿಐಟಿಯು ಕರೆಯ ಮೇರೆಗೆ ಗಣನೀಯ ಪ್ರಮಾಣದ ಕಾರ್ಮಿಕರು, 31 ಜನವರಿ 1971 ಮತ್ತು ಫೆಬ್ರವರಿ 6, 1972 ರ ನಡುವೆ ಪಶ್ಚಿಮ ಬಂಗಾಳದ ಕಾರ್ಮಿಕರೊಂದಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸಿ ದಮನ–ವಿರೋಧಿ ದಿನವನ್ನು ಆಚರಿಸಿದರು. ಕೇಂದ್ರ ಆಳುವ ಪಕ್ಷ ಮತ್ತು ಸರ್ಕಾರವು ಪಶ್ಚಿಮ–ಬಂಗಾಳದಲ್ಲಿ ಹರಿಬಿಟ್ಟ ಅರೆ–ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಸೋಲಿಸಲು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾಪಾಡಲು ಪಶ್ಚಿಮ–ಬಂಗಾಳದ ಮತ್ತು ಹೊರಗಿನ ಕಾರ್ಮಿಕರನ್ನು ಸಂಘಟಿಸಲು ಶ್ಲಾಘನೀಯ ಪ್ರಯತ್ನಗಳನ್ನು ಮಾಡಿದ ಶ್ರೇಯಸ್ಸು ಸಿಐಟಿಯುಗೆ ಸಲ್ಲುತ್ತದೆ.

ಸಣಬಿನ ಕೈಗಾರಿಕೆಯಲ್ಲಿ ಎಲ್ಲಾ ಕಾರ್ಮಿಕ ಸಂಘಗಳು ಮುಷ್ಕರಕ್ಕೆ ಮೇ 8 ರ ದಿನಾಂಕವನ್ನು ಏಕಕಾಲದಲ್ಲಿ ನಿಗದಿಮಾಡಿದ್ದು, ತಳಮಟ್ಟದ ಕಾರ್ಮಿಕರಲ್ಲಿ ಒಂದು ಐಕ್ಯ ಕಾರ್ಯಾಚರಣೆಯ ಬಯಕೆಯನ್ನು ಸೂಚಿಸಿತು. ಕಾರ್ಮಿಕರಲ್ಲಿ 2,50,000 ಕಾರ್ಮಿಕರು ಒಗ್ಗಟ್ಟಿನಿಂದ ಮುಷ್ಕರ ಮಾಡುವ ಈ ಬೆದರಿಕೆಯನ್ನು ಎದುರಿಸಿದ ಸೆಣಬಿನ ಮಾಲಿಕರು ಮೇ 7 ರಂದು ಕಾರ್ಮಿಕರ ಬೇಡಿಕೆಯ ಗಣನೀಯ ಭಾಗವನ್ನು ಒಪ್ಪಿಕೊಂಡು ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು.

ಆಂಧ್ರಪ್ರದೇಶದಲ್ಲಿ ಫ್ಯಾಕ್ಟರಿ ಲೇಬರ್ ಯೂನಿಯನ್ ನೇತೃತ್ವದಲ್ಲಿ ಭೀಮಾರಮಣ ಅಕ್ಕಿ ಗಿರಣಿಯಲ್ಲಿ 1971 ರ ಡಿಸೆಂಬರ್ 1 ರಂದು ಪ್ರಾರಂಭವಾದ ಕಾರ್ಮಿಕರ ಮುಷ್ಕರದಲ್ಲಿ ಸಮರಶೀಲ ಮನಸ್ಥಿತಿ ಕಂಡುಬಂದಿತು. ಗಿರಣಿ ಮಾಲೀಕರು ಬೇಡಿಕೆಗಳನ್ನು ಒಪ್ಪಿಕೊಂಡ ನಂತರ ಮುಷ್ಕರ 18 ಡಿಸೆಂಬರ್ 1971 ರಂದು ಕೊನೆಗೊಂಡಿತು. ಹೆಚ್ಚಿನ ವೇತನಕ್ಕಾಗಿ ಡಿಸೆಂಬರ್ 1971 ರಲ್ಲಿ 500 ಗೋದಾವರಿ ಸೇತುವೆ ಕಾರ್ಮಿಕರು ಪ್ರಾರಂಭಿಸಿದ ಮುಷ್ಕರವೂ ಯಶಸ್ವಿಯಾಯಿತು.

ಸಿಐಟಿಯುನ ಕೇರಳ ಸಮಿತಿಯ ಕರೆಯ ಮೇರೆಗೆ 5,00,000 ಕಾರ್ಮಿಕರು ಸರ್ಕಾರದ ದಬ್ಬಾಳಿಕೆಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಲು ಮತ್ತು ಪಶ್ಚಿಮ ಬಂಗಾಳ ಮತ್ತು ದೇಶದ ಇತರ ಭಾಗಗಳ ಕಾರ್ಮಿಕರ ಮೇಲೆ ಟ್ರೇಡ್ ಯೂನಿಯನ್ ಹಕ್ಕುಗಳ ಮೇಲಿನ ದಾಳಿಯನ್ನು ಪ್ರತಿಭಟಿಸಲು 16 ಮೇ, 1972 ರಂದು ಮುಷ್ಕರ ಹೂಡಿದರು. ಮುಷ್ಕರವು ಕೇರಳ ಕಾರ್ಮಿಕರ ಟ್ರೇಡ್ ಯೂನಿಯನ್ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ಬೆಳೆಯುತ್ತಿದ್ದ ಪ್ರಜ್ಞೆಯ ಸೂಚನೆಯಾಗಿತ್ತು.

### ಮೂರನೇ ಕೇಂದ್ರ ವೇತನ ಆಯೋಗ – ಸರ್ಕಾರಿ ನೌಕರರ ಹೋರಾಟ

ಸ್ಥಾಪನೆಯಾದ ಮೂರು ವರ್ಷಗಳ ನಂತರ, ಮೂರನೇ ಕೇಂದ್ರ ವೇತನ–ಆಯೋಗವು ಮಾರ್ಚ್ 31, 1973 ರಂದು ತನ್ನ ವರದಿಯನ್ನು ಬಿಡುಗಡೆ ಮಾಡಿತು. ವರದಿಯಲ್ಲಿ ಅನೇಕ ಪ್ರತಿಗಾಮಿ ಶಿಫಾರಸುಗಳಿದ್ದವು, ಆಯೋಗವು 1957 ರ 15 ನೇ ಕಾರ್ಮಿಕ ಸಮ್ಮೇಳನದ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಿದ ಅಗತ್ಯ–ಆಧಾರಿತ ಕನಿಷ್ಠ ವೇತನವನ್ನು ತಿರಸ್ಕರಿಸಿತು.

ಇದರ ವಿರುದ್ಧ ಕೇಂದ್ರ ನೌಕರರ ಚಳವಳಿಯ ಎಲ್ಲಾ ವಿಭಾಗಗಳು ಪ್ರತಿಭಟನಾ ಕಾರ್ಯಾಚರಣೆಗಾಗಿ ಒಗ್ಗಟ್ಟಿನಿಂದ ಕರೆ ನೀಡಿದವು ಮತ್ತು ವೇತನ–ಬಹಿಷ್ಕಾರ ಕಾರ್ಯಕ್ರಮವನ್ನು 1 ಡಿಸೆಂಬರ್ 1973 ರಂದು ಯಶಸ್ವಿಯಾಗಿ ಆಚರಿಸಲಾಯಿತು. ಮುಂದಿನ ವರ್ಷದಲ್ಲಿ ಹೊಸ ನಾಯಕತ್ವದಲ್ಲಿ ರೈಲ್ವೆ ಕಾರ್ಮಿಕರು ಹೋರಾಟದ ರಂಗಕ್ಕೆ ಬಂದಾಗ ಮಾತ್ರ ಹೋರಾಟವು ಸಮರಶೀಲ ರೂಪವನ್ನು ಪಡೆದುಕೊಂಡಿತು..

ಅಖಿಲ ಭಾರತ ವಿಮಾ ನೌಕರರ ಸಂಘವು ಏಪ್ರಿಲ್ 25, 1972 ರಂದು ಮತ್ತೊಂದು ಪ್ರಮುಖ ಮುಷ್ಕರವನ್ನು ನಡೆಸಿತು, ಇದರಲ್ಲಿ ಸುಮಾರು 40 ಸಾವಿರ ಉದ್ಯೋಗಿಗಳು ಭಾಗವಹಿಸಿದ್ದರು. ಮುಷ್ಕರಕ್ಕಾಗಿ ಬೇಡಿಕೆಗಳ ಚಾರ್ಟರ್ ನಲ್ಲಿ ಸಂಘದ ಮಾನ್ಯತೆ, 3 ತಿಂಗಳ ಒಟ್ಟು ವೇತನ ದರದಲ್ಲಿ ಬೋನಸ್, ಉತ್ತಮ ಬಡತಿ ಸೌಲಭ್ಯಗಳು ಸೇರಿದ್ದವು.

### ಎಲ್ಲರಿಗೂ ಬೋನಸ್‌ಗಾಗಿ ಹೋರಾಟ

ಸರ್ಕಾರವು ಬೋನಸ್ ಆಯೋಗದ ಶಿಫಾರಸಿನ ಆಧಾರದ ಮೇಲೆ 1968 ರಲ್ಲಿ ಬೋನಸ್ ಕಾಯ್ದೆಯನ್ನು ಜಾರಿಗೆ ತಂದಿತು. 1968 ರ ಬೋನಸ್ ಕಾಯ್ದೆಯು ಕನಿಷ್ಟ 4% ಬೋನಸ್ ಅನ್ನು ಒದಗಿಸಿತು ಮತ್ತು ಅದೂ ಸಹ ಸಂಬಂಧಪಟ್ಟ ಕಂಪನಿಯ ಲಾಭದಾಯಕತೆಯನ್ನು ಆಧರಿಸಿತ್ತು.

ಆದ್ದರಿಂದ, ಲಾಭದಾಯಕತೆಯಿಂದ ಬೋನಸ್ ಅನ್ನು ಬೇರ್ಪಡಿಸಲು ಮತ್ತು ಕನಿಷ್ಠ ಪ್ರಮಾಣವನ್ನು 8.33% ಕ್ಕೆ ಏರಿಸಲು ಹೋರಾಟಗಳು ಪ್ರಾರಂಭವಾದವು. ಏತನ್ಮಧ್ಯೆ ಕೆಲವು ನ್ಯಾಯಾಂಗ ತೀರ್ಪುಗಳು ಬೋನಸ್ ಪರಿಕಲ್ಪನೆಯನ್ನು ಅಸ್ತಿತ್ವದಲ್ಲಿರುವ ಮಟ್ಟದಿಂದ ಕಡಿಮೆ ವೇತನ ಮತ್ತು ಜೀವನ ವೇತನಗಳ ನಡುವಿನ ಅಂತರವನ್ನು ಪೂರೈಸುವ, ಆದ್ದರಿಂದ ಬೋನಸ್ ಅನ್ನು ಮುಂದೂಡಲ್ಪಟ್ಟ ವೇತನವಾಗಿ ಗುರುತಿಸಿದ್ದವು. ಇದು ಕಾರ್ಮಿಕರ ಬೇಡಿಕೆಗೆ ಹೆಚ್ಚುವರಿ ಶಕ್ತಿಯನ್ನು ನೀಡಿತು. ಇದಲ್ಲದೆ, ಬೋನಸ್ ಕಾಯ್ದೆ ಸಾರ್ವಜನಿಕ ವಲಯ ಮತ್ತು ಸರ್ಕಾರಿ ನೌಕರರನ್ನು ಬೋನಸ್ ವ್ಯಾಪ್ತಿಯಿಂದ ಹೊರಗಿಟ್ಟಿದ್ದರಿಂದ, ಬೋನಸ್‌ಗೆ ಪಡೆಯಲು ಸರ್ಕಾರಿ ನೌಕರರಲ್ಲೂ ಒಂದು ಚಳುವಳಿ ಬೆಳೆಯಿತು.

ಏತನ್ಮಧ್ಯೆ, ಬೋನಸ್ ಪರಿಶೀಲನಾ ಸಮಿತಿಯ ಮಧ್ಯಂತರ ವರದಿಯು 8.33% ಅನ್ನು ಕನಿಷ್ಠ ಬೋನಸ್ ಎಂದು ಒಪ್ಪಿಕೊಂಡಿತು, ಆದರೆ ಇದನ್ನು ಕೈಗಾರಿಕಾ ಕಾರ್ಮಿಕ ವರ್ಗದ ಹೊರತಾಗಿ ಇತರ ಕ್ಷೇತ್ರಗಳಿಗೆ ವಿಸ್ತರಿಸಲಾಗಲಿಲ್ಲ. ಸರ್ಕಾರಿ ನೌಕರರಿಗೆ ಬೋನಸ್ ಬೇಡಿಕೆಯನ್ನು ಸಾಧಿಸಲು ಹಲವು ವರ್ಷಗಳು ಬೇಕಾಯಿತು. 1980ರ ದಶಕದಲ್ಲಿ ಮೊದಲು ರೈಲ್ವೆ ಮತ್ತು ಪಿ & ಟಿ ಮತ್ತು ನಂತರ ಇತರ ಕ್ಷೇತ್ರಗಳಲ್ಲಿ ಬೋನಸ್ ಸಾಧಿಸಲಾಯಿತು, ಮತ್ತು ರಾಜ್ಯಸರ್ಕಾರಿ ನೌಕರರಿಗೆ ಬೋನಸ್ ಅನ್ನು ದೇಶವ್ಯಾಪಿ ಚಳುವಳಿಯ ನಂತರ ಪಡೆಯಲಾಯಿತು

### ರೈಲ್ವೆ ಕಾರ್ಮಿಕರ ಸಮರಶೀಲ ಹೋರಾಟ


ವಿವಿಧ ಕೇಂದ್ರಗಳಲ್ಲಿ ಸ್ಥಳೀಯ ಬೇಡಿಕೆಗಳನ್ನು ಪಡೆಯುವುದಕ್ಕಾಗಿ ಐಕ್ಯ ಹೋರಾಟದ ಬೆಳವಣಿಗೆ ರೈಲ್ವೆ ಕಾರ್ಮಿಕರಲ್ಲಿ ಹೊಸ ಏಕತೆ ಮತ್ತು ಆತ್ಮವಿಶ್ವಾಸವನ್ನು ಉಂಟುಮಾಡಲು ಪ್ರಾರಂಭಿಸಿತು.

ಈ ಹೊಸದಾಗಿ ರೂಪುಗೊಂಡ ಶ್ರೇಣಿವಾರು ಸಂಘಗಳ ಪೈಕಿ, ಅಖಿಲ ಭಾರತ ಲೊಕೊ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್ ಈ ಅವಧಿಯಲ್ಲಿ ಸಮರಶೀಲ ಹೋರಾಟವನ್ನು ನಡೆಸಿತು. ಈ ಸಂಘವು 'ಸೈನ್ ಆನ್' ನಿಂದ 'ಸೈನ್ ಆಫ್' ಮಾಡಲು 10 ಗಂಟೆಗಳ ಕರ್ತವ್ಯದ ದಿನಕ್ಕಾಗಿ ಒತ್ತಾಯಿಸುತ್ತಿತ್ತು.

ಸೂಕ್ತ ನೋಟಿಸ್ ನೀಡಿ, ಲೊಕೊ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್ ಆಗಸ್ಟ್ 1, 1973 ರಿಂದ 'ಅನಾರೋಗ್ಯ–ರಜೆ' ಆಂದೋಲನವನ್ನು ಪ್ರಾರಂಭಿಸಿತು, ಇದು ರೈಲ್ವೆ ಸೇವೆಗಳನ್ನು ಇಡೀ ದೇಶದಲ್ಲಿ ಸ್ಥಗಿತಗೊಳಿಸಿತು. ರೈಲ್ವೆ ಸಚಿವರು, ಸಂಘದ ಮುಖಂಡರನ್ನು ಮಾನ್ಯತೆಯಿಲ್ಲದಿದ್ದರೂ, ಮಾತುಕತೆಗೆ ಕರೆದರು ಮತ್ತು ಕೆಲವು ಸ್ವೀಕಾರಾರ್ಹ ಸೂತ್ರವನ್ನು ರೂಪಿಸಲಾಯಿತು ಮತ್ತು ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಏತನ್ಮಧ್ಯೆ. ಲೊಕೊಮೆನ್ ಪುಟ 14 ನೋಡಿ

# ಆರೋಗ್ಯ ಬಿಕ್ಕಟ್ಟಿನ ನಡುವೆ ಲಸಿಕೆ ಬೆಲೆಯಲ್ಲೂ ಹಗರಣ!




**ಎಸ್.ಐ.ಐ. ಮತ್ತು ಭಾರತ್ ಬಯೋಟೆಕ್ ಈ ಎರಡೂ ಸಂಸ್ಥೆಗಳು ಮಂಡಿಸಿರುವ ಪ್ರತಿಯೊಂದು ವಾದವೂ ಅಪ್ರಾಮಾಣಿಕ ವಾದವೇ. ಲಸಿಕೆ ತಯಾರಿಸುವ ಈ ಎರಡೂ ಸಂಸ್ಥೆಗಳು ಕೊರೊನಾ ಬಿಕ್ಕಟ್ಟನ್ನು ಲಾಭದ ಹಪಾಹಪಿಗಾಗಿ ಬಳಸಿಕೊಳ್ಳುತ್ತಿವೆ. ಈ ಅಂಶವು ಕೇಂದ್ರ ಸರ್ಕಾರಕ್ಕೆ ತಿಳಿದಿಲ್ಲವೆಂದರೆ, ಅದು ಸಂಪೂರ್ಣವಾಗಿ ಅಸಮರ್ಥವಾಗಿದೆ ಎಂದಾಗುತ್ತದೆ. ಒಂದು ವೇಳೆ ತಿಳಿದಿದ್ದರೆ, ಈ ವಂಚನೆಯಲ್ಲಿ ಭಾಗಿಯಾಗಿದೆ ಎಂದಾಗುತ್ತದೆ. ಹಾಗಾಗಿ, ಈ ಬಗ್ಗೆ ಒಂದು ತನಿಖೆ ನಡೆಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಮಾಡಬೇಕಾಗಿರುವುದು ಏನು ಎಂಬ ಪ್ರಶ್ನೆ ಎದುರಾಗುತ್ತದೆ. ಈ ಸಂಬಂಧವಾಗಿ, ಧೈರ್ಯದ ಪ್ರಮಾಣದ ಇಳಿಕೆಯ ಕ್ರಮದಲ್ಲಿ ನಾಲ್ಕು ಅನ್ಯ ಮಾರ್ಗಗಳಿವೆ.**

**ಪ್ರೊ. ಪ್ರಭಾತ್ ಪಟ್ನಾಯಕ್**, ಅನು: ಕೆ.ಎಂ.ನಾಗರಾಜ್

ಕಳೆದ ನೂರು ವರ್ಷಗಳಲ್ಲಿ ವಿಶ್ವವು ಕಂಡಿರದ ಭೀಕರ ಆರೋಗ್ಯ ಬಿಕ್ಕಟ್ಟನ್ನು ಭಾರತವೂ ಎದುರಿಸುತ್ತಿದೆ. ಕೋವಿಡ್–19ರ ಎರಡನೆಯ ಅಲೆ ಅಪ್ಪಳಿಸಲು ಆರಂಭವಾದ ಮಾರ್ಚ್ ತಿಂಗಳ ಮೊದಲ ವಾರದಿಂದಲೂ ಸಾಂಕ್ರಾಮಿಕ ಪೀಡಿತರ ಸಂಖ್ಯೆಯು ದಿನದಿಂದ ದಿನಕ್ಕೆ ಏರುತ್ತಲೇ ಇದ್ದು, ಹೊಸ ಪ್ರಕರಣಗಳು ದಿನಕ್ಕೆ ನಾಲ್ಕು ಲಕ್ಷವನ್ನು ದಾಟಿದೆ. ಪಿಡುಗಿನಿಂದ ಸಾಯುತ್ತಿರುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಏರುತ್ತಲೇ ಇದ್ದು, ಸಾವಿನ ದೈನಿಕ ಸಂಖ್ಯೆಯು ಈಗ ಸುಮಾರು ನಾಲ್ಕು ಸಾವಿರದ ಆಸುಪಾಸಿನಲ್ಲಿದೆ. ಲಸಿಕೆಗಳು ಸಾವು ನೋವುಗಳನ್ನು ತಗ್ಗಿಸುತ್ತವೆ ಎನ್ನುವ ಭರವಸೆಯೊಂದಿಗೆ ಆರಂಭವಾದ ಲಸಿಕಾ ಕಾರ್ಯಕ್ರಮವು ಆರಂಭಗೊಳ್ಳುತ್ತಿದ್ದಂತೆಯೇ ಹೊಸ ಪ್ರಕರಣಗಳು ಆಸ್ಫೋಟಗೊಳ್ಳುತ್ತಿರುವ ಸನ್ನಿವೇಶದಲ್ಲಿ, ಕೋವಿಡ್–ಲಸಿಕೆ ತಯಾರಕರು ಮೋದಿ ಸರ್ಕಾರದ ಅದಕ್ಷತೆಯನ್ನು ಅಥವಾ ಅದರ ಶಾಮೀಲುತನವನ್ನು (ಈ ಕೃತ್ಯವನ್ನು ನಿಮಗಿಷ್ಟವಾಗುವ ರೀತಿಯಲ್ಲಿ ಬಣ್ಣಿಸಬಹುದು) ಬಳಸಿಕೊಂಡು ಭರ್ಜರಿ ಲಾಭವನ್ನು ಜೇಬಿಗಿಳಿಸಿಕೊಳ್ಳಲು ಹೊರಟಿದ್ದಾರೆ.

**ಎರಡು ಸಮಸ್ಯೆಗಳು**

ಲಸಿಕೆಗೆ ಸಂಬಂಧಿಸಿದ ಎರಡು ಸಮಸ್ಯೆಗಳನ್ನು ಆರಂಭದಲ್ಲಿಯೇ ಪ್ರತ್ಯೇಕವಾಗಿ ನೋಡಬೇಕಾಗುತ್ತದೆ: ಮೊದಲನೆಯ ಸಮಸ್ಯೆ ಎಂದರೆ, ಗ್ರಾಹಕರು ಪಾವತಿಸಬೇಕಾದ ಕೋವಿಡ್ ಲಸಿಕೆಯ ಬೆಲೆ ಎಷ್ಟಿರಬೇಕು ಎಂಬುದು. ಈ ಬೆಲೆ ಸೊನ್ನೆಯಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮೋದಿ ಸರ್ಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಡಾ. ಅರವಿಂದ ಸುಬ್ರಮಣ್ಯಂ ಕೂಡ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದರು.


ಎರಡನೆಯ ಸಮಸ್ಯೆಯೆಂದರೆ, ಲಸಿಕೆ ತಯಾರಕರಿಗೆ ಪಾವತಿಸಬೇಕಾದ ಬೆಲೆ ಎಷ್ಟು ಎಂಬುದು. ಮೋಸ ಇರುವುದು ಇಲ್ಲಿಯೇ. ಕೇಂದ್ರ ಸರ್ಕಾರವು ತಮಗೆ ಮಾತ್ರ ಪ್ರತಿ ಡೋಸ್ ಲಸಿಕೆಗೆ 150 ರೂ.ಗಳಂತೆ ಮಾರಾಟ ಮಾಡಬೇಕು, ಉಳಿದವರಿಗೆ ಮಾರುವ ಲಸಿಕೆಯ ದರ ಎಷ್ಟಿರಬೇಕು ಎಂಬುದು ನಿಮಗೆ ಬಿಟ್ಟದ್ದು ಎಂದು ತಯಾರಕರಿಗೆ ಹೇಳಿದೆ. ಹಾಗಾಗಿ, ಹಾಲು ಬೀಳುವಲ್ಲಿ ತುಪ್ಪವೇ ಬಿದ್ದ ಖುಷಿಯಲ್ಲಿರುವ ಲಸಿಕೆ ತಯಾರಕರು, ರಾಜ್ಯ ಸರ್ಕಾರಗಳಿಗೆ ಮತ್ತು ಖಾಸಗಿ ನರ್ಸಿಂಗ್ ಹೋಂಗಳಿಗೆ ಮಾರುವ ಲಸಿಕೆಯ ಬೆಲೆಗಳನ್ನು ದುಬಾರಿ ಮಟ್ಟದಲ್ಲಿ ನಿಗದಿಪಡಿಸಿದ್ದಾರೆ.

ಈ ಬೆಲೆ ನಿಗದಿಯನ್ನು ಅನೇಕ ಆಧಾರ–ರಹಿತ ತರ್ಕಗಳು, ಹೊರಳು ಮಾತುಗಳು ಮತ್ತು ಸುಳ್ಳುಗಳ ಮೂಲಕ ಸಮರ್ಥಿಸಿಕೊಳ್ಳಲಾಗಿದೆ. ಹಾಗಾಗಿ, ವಿಷಯವನ್ನು ಎಲ್ಲಿಂದ ಆರಂಭಿಸಬೇಕೆಂಬುದೇ ತಿಳಿಯದು. ಆಕ್ಸ್‌ಫರ್ಡ್–ಆಸ್ಟ್ರಾಜೆನೆಕಾ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ಬಳಸಿಕೊಂಡು ಸೀರಮ್ ಇನ್ಸಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ತಯಾರಿಸಿದ ಕೋವಿಶೀಲ್ಡ್ ಬಗ್ಗೆ ಮೊದಲು ನೋಡೋಣ. ಈ ಲಸಿಕೆಯ ಪ್ರತಿ ಡೋಸ್‌ಅನ್ನು ರಾಜ್ಯ ಸರ್ಕಾರಗಳಿಗೆ 400 ರೂ ಗಳಿಗೂ ಮತ್ತು ಖಾಸಗಿ ಖರೀದಿದಾರರಿಗೆ 600 ರೂ ಗಳಿಗೂ ಮಾರುವುದಾಗಿ ಸೀರಮ್ ಇನ್ಸಿಟ್ಯೂಟ್ ಆಫ್ ಇಂಡಿಯಾದ ಮಾಲೀಕ ಆದರ್ ಪೂನಾವಾಲಾ ಘೋಷಿಸಿದ್ದಾರೆ. ಕೇಂದ್ರ ಸರ್ಕಾರಕ್ಕೆ ಮಾರಾಟ ಮಾಡುವ ದರ ಇನ್ನೂ ಸ್ಪಷ್ಟವಾಗಿಲ್ಲ – 150 ರೂ ಎಂದು ಕೇಂದ್ರ ಹೇಳುತ್ತದೆ; 400 ರೂ ಎಂದು ಎಸ್‌ಐಐ ಹೇಳುತ್ತದೆ. ಈಗ, ಪ್ರತಿ ಡೋಸ್‌ಗೆ ಡಾಲರ್ ಲೆಕ್ಕದಲ್ಲಿ, (ಅಂದರೆ, ಕೋವಿಡ್–19ರ ಎರಡನೆಯ ಅಲೆಯ ಪರಿಣಾಮವಾಗಿ ರೂಪಾಯಿ ಅಪಮೌಲ್ಯಗೊಂಡಿರುವ ಮಟ್ಟದಲ್ಲಿ) 600 ರೂ ಗಳೆಂದರೆ $8, ಮತ್ತು 400 ರೂ ಗಳೆಂದರೆ $5.33 ಆಗುತ್ತದೆ. ಆದರೆ, ಆಸ್ಟ್ರಾಜೆನೆಕಾ ಇದೇ ಲಸಿಕೆಯನ್ನು ಯುರೋಪಿನ ದೇಶಗಳಿಗೆ ಪ್ರತಿ ಡೋಸ್‌ಗೆ $2.18ರಂತೆ ಮಾರುತ್ತದೆ. ಅಮೇರಿಕಾಗೆ ಪ್ರತಿ ಡೋಸ್‌ಗೆ $4.00ರಂತೆ ಮಾರುವ ಅಂದಾಜಿನಲ್ಲಿದೆ. ದಕ್ಷಿಣ ಆಫ್ರಿಕಾಕ್ಕೆ ಪ್ರತಿ ಡೋಸ್‌ಗೆ $5.25ರಂತೆ ರಫ್ತು ಮಾಡುತ್ತದೆ. ಈ ಬೆಲೆಗಳು ಭಾರತದ ಯಾವುದೇ ಖರೀದಿದಾರನಿಗೆ ಮಾರುವುದಕ್ಕಿಂತಲೂ ಕೆಳ ಮಟ್ಟದಲ್ಲಿವೆ. ಅಂದರೆ, ವಾಸ್ತವವಾಗಿ, ಭಾರತವು ಈ ಲಸಿಕೆಯನ್ನು ಕೊಳ್ಳುವ ದರವು ಅತಿ ಹೆಚ್ಚಿನ ಮಟ್ಟದಲ್ಲಿದೆ.

**ಟೊಳ್ಳು–ಸುಳ್ಳು ವಾದಗಳು**

ಈ ರೀತಿಯ ಬೆಲೆ ನಿಗದಿಗೆ ಎಸ್.ಐ.ಐ. ಕೊಡುವ ಸಮರ್ಥನೆಗಳು ಬದಲಾಗುತ್ತಲೇ ಇವೆ. ಸಾರ್ವತ್ರಿಕ ರೋಗ–ನಿರೋಧಕ ಕಾರ್ಯಕ್ರಮಗಳಿಗೆ ಬಳಸುವ ಲಸಿಕೆಗಳನ್ನು ಸರ್ಕಾರಗಳಿಗೆ ಕಡಿಮೆ ದರದಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಒಮ್ಮೆ ಹೇಳುತ್ತದೆ. ಆದರೆ, ಖಾಸಗಿ ಖರೀದಿದಾರರಿಗೆ ಮಾರುವ ಲಸಿಕೆಗಳು ದುಬಾರಿಯಾಗಿವೆ. ಇದು ಹೀಗಿರಬೇಕು ಏಕೆ ಎಂಬುದು ಸ್ಪಷ್ಟವಿಲ್ಲ. ಅಂದರೆ, ಖಾಸಗಿ ಆಸ್ಪತ್ರೆಗಳು ಲಸಿಕೆಯನ್ನು ಖರೀದಿಸುವ ಬದಲು, ಸರ್ಕಾರವೇ ಇಡೀ ದಾಸ್ತಾನನ್ನು ಖರೀದಿಸಿ ಖಾಸಗಿ ಆಸ್ಪತ್ರೆಗಳಿಗೆ ವಿತರಿಸಿದರೆ, ಲಸಿಕೆಯ ಬೆಲೆ ಕಡಿಮೆಯಾಗುತ್ತದೆ ಎಂಬುದನ್ನು ಸೂಚ್ಯವಾಗಿ ಒಪ್ಪಿಕೊಂಡಂತಾಗುತ್ತದೆ. ಮೇಲಾಗಿ, ಬೇರೆ ಯಾವ ದೇಶದಲ್ಲೂ ಖಾಸಗಿ ಆಸ್ಪತ್ರೆಗಳು ಕೋವಿಡ್–19 ಲಸಿಕೆಗಳನ್ನು ಖರೀದಿಸುವಂತಿಲ್ಲ. ಆದ್ದರಿಂದ, ಲಸಿಕೆಗಳ ಖಾಸಗಿ ಮಾರಾಟಕ್ಕೆ ಅನುಮತಿಸಿರುವುದರಿಂದಾಗಿಯೇ ಖಾಸಗಿ ಆಸ್ಪತ್ರೆಗಳು ಹೆಚ್ಚಿನ ಶುಲ್ಕ ವಿಧಿಸಲು ಮೋದಿ ಸರ್ಕಾರವು ಕಾರಣವಾಗಿದೆ. ಹಾಗಾಗಿ, ಲಸಿಕೆಯ ಬೆಲೆಗಳನ್ನು ತಯಾರಕರು ತಮ್ಮ ಮನಸ್ಸಿಗೆ ಬಂದಂತೆ ನಿಗದಿಪಡಿಸಿದ್ದಾರೆ ಮತ್ತು ಲಸಿಕೆ ತಯಾರಿಕೆಗೆ ತಗುಲಿದ ವೆಚ್ಚಗಳಿಗೂ ಮತ್ತು ನಿಗದಿಪಡಿಸಿದ ಬೆಲೆಗಳಿಗೂ ಅಜಗಜಾಂತರವಿದೆ ಎಂಬುದೂ ಸಹ ಸ್ಪಷ್ಟವಾಗುತ್ತದೆ.

ಕೋವಿಡ್–19 ಪಿಡುಗಿನ ಬಿಕ್ಕಟ್ಟನ್ನು ನಿಭಾಯಿಸಲು ಲಸಿಕೆ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸುವ ಸಲುವಾಗಿ ಲಸಿಕೆಯನ್ನು ಹೆಚ್ಚಿನ ದರದಲ್ಲಿ ಮಾರುವ ಮೂಲಕ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಬೇಕಾಗುತ್ತದೆ ಎಂದು ಇನ್ನೊಮ್ಮೆ ಹೇಳುತ್ತದೆ. ಇದೂ ಸಹ ಟೊಳ್ಳು ವಾದವೇ. ಏಕೆಂದರೆ, ಲಸಿಕೆ ಉತ್ಪಾದನಾ ಸಾಮರ್ಥ್ಯವನ್ನು ಕೇವಲ ವಿಸ್ತರಿಸುವ ಸಲುವಾಗಿಯೇ ಕೇಂದ್ರ ಸರ್ಕಾರವು 3,000 ಕೋಟಿ ರೂ.ಗಳನ್ನು ಎಸ್‌ಐಐಗೆ ಕೊಟ್ಟಿದೆ ಮತ್ತು ಎಸ್‌ಐಐ ಅದನ್ನು ಸ್ವೀಕರಿಸಿದೆ ಕೂಡ. ಆದ್ದರಿಂದ, ಲಸಿಕೆಯ ಬೆಲೆ ಏರಿಸಿ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಳ್ಳುವ ಅಗತ್ಯವಿಲ್ಲ. ಅಲ್ಲದೆ, ಈ ಯಾವುದೇ ವಾದವೂ ಸಹ, ಭಾರತದಲ್ಲಿ ಮಾರುವ ಲಸಿಕೆಯ ದರವು ರಫ್ತಿಗಿಂತಲೂ ಹೆಚ್ಚಾಗಿದೆ ಏಕೆ ಎಂಬುದನ್ನು ವಿವರಿಸುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಎಲ್ಲ ವಾದಗಳೂ, ಉರಿಯುತ್ತಿರುವ ಮನೆಯಲ್ಲಿ ಹಿರಿದದ್ದೇ ಲಾಭ ಎನ್ನುವಂತೆ, ಸಾಂಕ್ರಾಮಿಕ ಪರಿಸ್ಥಿತಿಯ ಲಾಭ ಪಡೆಯುವುದನ್ನು ಮುಚ್ಚಿಹಾಕಲು ಮಂಡಿಸುವ ಸುಳ್ಳು ವಾದಗಳೇ.




**ಒಂದು ಲಸಿಕೆ–ವಿವಿಧ ಬೆಲೆಗಳು ವ್ಯಂಗ್ಯಚಿತ್ರ :ಸುಭಾನಿ, ಡೆಕ್ಕನ್ ಕ್ರಾನಿಕಲ್**

**ದುಪ್ಪಟ್ಟು ದುರಾಸೆ**

ಭಾರತದಲ್ಲೇ ಅಭಿವೃದ್ಧಿಪಡಿಸಿದ ಕೊವಾಕ್ಸಿನ್ ಲಸಿಕೆಯ ಉತ್ಪಾದಕ ಭಾರತ್ ಬಯೋಟೆಕ್‌ನ ದುರಾಸೆ, ಸುಲಿಗೆಯ ಸ್ವಭಾವಗಳಿಗೆ ಹೋಲಿಸಿದರೆ ಸೀರಮ್ ಇನ್ಸಿಟ್ಯೂಟ್ ಆಫ್ ಇಂಡಿಯಾ ಏನೇನೂ ಅಲ್ಲ. ತನ್ನ ಉತ್ಪಾದನೆಯ ಅರ್ಧದಷ್ಟನ್ನು ಕೇಂದ್ರ ಸರ್ಕಾರಕ್ಕೆ ಪೂರೈಸುವ ಭಾರತ್ ಬಯೋಟೆಕ್, ಲಸಿಕೆಯ ಪ್ರತಿ ಡೋಸ್‌ಗೆ 150 ರೂ ಬೆಲೆ ನಿಗದಿಪಡಿಸಿದೆ. ಉಳಿದ ಅರ್ಧವನ್ನು ರಾಜ್ಯ ಸರ್ಕಾರಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಪೂರೈಸುವ ಲಸಿಕೆಯ ದರವನ್ನು ಪ್ರತಿ ಡೋಸ್‌ಗೆ ಅನುಕ್ರಮವಾಗಿ 600 ರೂ ಮತ್ತು 1,200 ರೂ ಎಂದು ನಿಗದಿಪಡಿಸಿದೆ. ಕೇಂದ್ರ ಸರ್ಕಾರಕ್ಕೆ ಪೂರೈಸುವ ಪ್ರತಿ ಡೋಸ್‌ಗೆ ಲಸಿಕೆಯ ದರವನ್ನು 150 ರೂ ಗಳಿಗೆ ನಿಗದಿಪಡಿಸಿರುವಾಗ, ಅದರ ನಾಲ್ಕು ಪಟ್ಟು ಹೆಚ್ಚು (600ರೂ) ದರವನ್ನು ರಾಜ್ಯ ಸರ್ಕಾರಗಳಿಗೆ ನಿಗದಿಪಡಿಸಿರುವುದು ಏಕೆ ಎಂಬ ಪ್ರಶ್ನೆ ಮತ್ತು ಅಗತ್ಯ ಪ್ರಮಾಣದ ಲಸಿಕೆಗಳನ್ನು ಪಡೆಯಲು ರಾಜ್ಯ ಸರ್ಕಾರಗಳು ಖಾಸಗಿ ಆಸ್ಪತ್ರೆಗಳೊಂದಿಗೆ ಸ್ಪರ್ಧಿಸಬೇಕು ಏಕೆ ಎಂಬ ಪ್ರಶ್ನೆ ನಿಗೂಢವಾಗಿವೆ. ಕೇಂದ್ರ ಸರ್ಕಾರಕ್ಕೆ ಕಡಿಮೆ ದರದಲ್ಲಿ ಮಾರಿದ ನಷ್ಟವನ್ನು ಸರಿದೂಗಿಸಿಕೊಳ್ಳಲು (ಕ್ರಾಸ್–ಸಬ್ಸಿಡಿ) ರಾಜ್ಯಗಳಿಗೆ ಹೆಚ್ಚು ದರವನ್ನು ನಿಗದಿಪಡಿಸಲಾಗಿದೆ ಎಂಬುದು ಅರ್ಥವಿಲ್ಲದ ಮಾತು. ಏಕೆಂದರೆ, ಸರ್ಕಾರದ ಈ ಎರಡೂ ಸ್ತರಗಳ ಸೇವೆಗಳು ಸಲ್ಲುವುದು ಅದೇ ಜನರಿಗೇ. ಅದೇನೇ ಇರಲಿ, ನಾನು ಈಗ ಕೇವಲ ಒಂದು ಅಂಶವನ್ನು ಮಾತ್ರ ಇಲ್ಲಿ ತೆಗೆದುಕೊಳ್ಳುತ್ತೇನೆ: ಎಸ್‌ಐಐ ಘೋಷಿಸಿರುವ ಕೋವಿಶೀಲ್ಡ್ ಲಸಿಕೆಯ ದುಬಾರಿ ದರಗಳಿಗೆ ಹೋಲಿಸಿದರೆ ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯ ದರಗಳು ಇನ್ನೂ ಹೆಚ್ಚಾಗಿವೆ ಏಕೆ?

ಈ ಪ್ರಶ್ನೆಗೆ ಭಾರತ್ ಬಯೋಟೆಕ್ ಕೊಟ್ಟಿರುವ ಉತ್ತರಗಳು ಎಷ್ಟು ಹಾಸ್ಯಾಸ್ಪದ ವಾಗಿವೆಯೋ ಅಷ್ಟೇ ಅಸಂಬದ್ಧ ವಾಗಿಯೂ ಇವೆ ಮತ್ತು ಬದಲಾಗುತ್ತಲೂ ಇವೆ. ಮೊದಲನೆಯ ಉತ್ತರವೆಂದರೆ, ಕೊವಾಕ್ಸಿನ್ ಲಸಿಕೆಯ ಸಂಶೋಧನೆ ಮತ್ತು ವೈದ್ಯಕೀಯ ಪ್ರಯೋಗಗಳಿಗಾಗಿ ತಮ್ಮ ಸ್ವಂತದ 350 ಕೋಟಿ ರೂ ಹಣವನ್ನು ಖರ್ಚು ಮಾಡಿರುವುದರಿಂದ ಅದನ್ನು ಮರಳಿ ಪಡೆಯಬೇಕಾಗಿದೆ ಮತ್ತು ಕೋವಿಶೀಲ್ಡ್ ಲಸಿಕೆಯ ಸಂಶೋಧನೆ ಮತ್ತು ವೈದ್ಯಕೀಯ ಪ್ರಯೋಗಗಳಿಗಾಗಿ ಎಸ್‌ಐಐ ತನ್ನ ಸ್ವಂತ ಹಣವನ್ನು ಖರ್ಚು ಮಾಡಿರಲಿಲ್ಲ ಎಂದು ಭಾರತ್ ಬಯೋಟೆಕ್ ಹೇಳುತ್ತದೆ. ಆದರೆ, ಇದು ಶುದ್ಧ ಸುಳ್ಳು. ಏಪ್ರಿಲ್ 26ರ ಸ್ಕ್ರಾಲ್.ಇನ್ ಪತ್ರಿಕೆಯಲ್ಲಿ ಬರೆದಿರುವ ತಮ್ಮ ಲೇಖನದಲ್ಲಿ ಟಿ.ಐ.ಎಸ್.ಎಸ್.ನ ಪ್ರೊ. ರಾಮ್ ಕುಮಾರ್, ಕೊವಾಕ್ಸಿನ್‌ನ ಅಭಿವೃದ್ಧಿಗೆ ಸಾಕಷ್ಟು ಸಾರ್ವಜನಿಕ ಧನಸಹಾಯ ದೊರೆತಿರುವ ಅಂಶವನ್ನು ಅದರ ಬಗ್ಗೆ ಪ್ರಕಟವಾಗಿರುವ ಸಮಾನ ಮನಸ್ಕ ವಿಮರ್ಶಾ ಪ್ರಬಂಧಗಳಲ್ಲಿ ಒಪ್ಪಿಕೊಂಡಿರುವುದನ್ನು ವಿವರವಾಗಿ ತಿಳಿಸಿದ್ದಾರೆ. ಮೇಲಾಗಿ, ಐ.ಸಿ.ಎಂ.ಆರ್.ನ ಅಧ್ಯಕ್ಷರು ಈ ಎಲ್ಲಾ ಪ್ರಬಂಧಗಳ ಸಹ–ಲೇಖಕರೂ ಆಗಿರುವುದರಿಂದ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ.

ವಾದಕ್ಕಾಗಿ ನಾವು ಭಾರತ್ ಬಯೋಟೆಕ್ ಮಂಡಿಸಿದ ವಾದವನ್ನು ಸರಿ ಎಂದೇ ಒಪ್ಪಿಕೊಳ್ಳೋಣ. ತನ್ನ ಉತ್ಪಾದನಾ ಸಾಮರ್ಥ್ಯವನ್ನು ವರ್ಷಕ್ಕೆ 70 ಕೋಟಿ ಡೋಸ್‌ಗಳಿಗೆ ಏರಿಸಲು ಭಾರತ್ ಬಯೋಟೆಕ್ ಉದ್ದೇಶಿಸಿದೆ. ಸಧ್ಯಕ್ಕೆ, ಮುಂದಿನ ತಿಂಗಳು ಮೂರು ಕೋಟಿ ಡೋಸ್ ಲಸಿಕೆಗಳನ್ನು ಉತ್ಪಾದಿಸಲಿದೆ. ಮುಂದಿನ ತಿಂಗಳಿನಿಂದ ಕೇಂದ್ರಕ್ಕೆ, ರಾಜ್ಯಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಮಾರಾಟದ ಅನುಪಾತವನ್ನು ಕ್ರಮವಾಗಿ 1/2: 1/4: 1/4 ಎಂದು ತೆಗೆದುಕೊಂಡರೆ (ಈ ಅಂಕಿಅಂಶಗಳು ನನ್ನ ವಾದಕ್ಕೆ ಅನುಕೂಲಕರವಾಗಿಲ್ಲದಿದ್ದರೂ ಸಹ ಅವುಗಳನ್ನು ನಾನು ಬೇಕೆಂದೇ ತೆಗೆದುಕೊಳ್ಳುತ್ತೇನೆ), ಖಾಸಗಿ ಆಸ್ಪತ್ರೆಗಳಿಗೆ ಮಾತ್ರ, ಮುಂದಿನ ತಿಂಗಳು 75 ಲಕ್ಷ ಡೋಸ್‌ಗಳು ಮಾರಾಟವಾಗಲಿವೆ. ಕೋವಿಶೀಲ್ಡ್ ಬೆಲೆಗೆ ಹೋಲಿಸಿದರೆ, ಪ್ರತಿ ಡೋಸ್ ಕೊವಾಕ್ಸಿನ್‌ನ ಬೆಲೆ 600ರೂ ಗಳಷ್ಟು ಅಧಿಕವಾಗಿರುವುದರಿಂದ, ಭಾರತ್ ಬಯೋಟೆಕ್, ಕೊವಾಕ್ಸಿನ್ ಲಸಿಕೆಯ ಸಂಶೋಧನೆ ಮತ್ತು ವೈದ್ಯಕೀಯ ಪ್ರಯೋಗಗಳಿಗಾಗಿ ಖರ್ಚು ಮಾಡಿದ 350 ಕೋಟಿ ರೂ ಗಳನ್ನು ಕೇವಲ 23 ದಿನಗಳಲ್ಲಿ ಗಳಿಸಿಕೊಳ್ಳಲಿದೆ! ಹಾಗಾದರೆ, ಖಾಸಗಿ ಆಸ್ಪತ್ರೆಗಳಿಗೆ ಎಸ್.ಐ.ಐ ತನ್ನ ಲಸಿಕೆಯನ್ನು ಮಾರಲು ಉದ್ದೇಶಿಸಿರುವ ಮಟ್ಟಕ್ಕಿಂತ ಎರಡು ಪಟ್ಟು ಹೆಚ್ಚು ಬೆಲೆಯನ್ನು ಖಾಯಮ್ಮಾಗಿ ನಿಗದಿಪಡಿಸಲು ಭಾರತ್ ಬಯೋಟೆಕ್‌ಗೆ ಇರುವ ಸಮರ್ಥನೆಯಾದರೂ ಏನು?

ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಶನ್‌ನಿಂದ ಎಸ್.ಐ.ಐ. 300 ಮಿಲಿಯನ್ ಡಾಲರ್ ಧನ ಸಹಾಯ ಪಡೆದಿದೆ. ತನಗೆ ಅಂತಹ ಯಾವುದೇ ಸಹಾಯ ದೊರಕದ ಕಾರಣದಿಂದಾಗಿ ತನ್ನ ಬಂಡವಾಳ ವೆಚ್ಚಗಳು (ಅಂದರೆ, ಭೂಮಿ, ಕಟ್ಟಡ, ಯಂತ್ರಗಳು ಮುಂತಾದ ವೆಚ್ಚಗಳು) ಹೆಚ್ಚಾಗಿವೆ. ಅವುಗಳನ್ನು ಹೆಚ್ಚಿನ ಬೆಲೆಗಳ ಮೂಲಕವೇ ತುಂಬಿಸಿಕೊಳ್ಳಬೇಕಾಗುತ್ತದೆ ಎಂದು ಭಾರತ್ ಬಯೋಟೆಕ್ ವಾದಿಸುತ್ತದೆ. ಈಗ ನಾವು ಭಾರತ್ ಬಯೋಟೆಕ್ ತನ್ನ ಲಸಿಕೆಗಳನ್ನು ಕೇಂದ್ರಕ್ಕೆ, ರಾಜ್ಯಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಅದೇ ಅನುಪಾತದಲ್ಲಿ ಮಾರುತ್ತದೆ ಎಂದು ಊಹಿಸಿಕೊಂಡರೆ, ಕೊವಾಕ್ಸಿನ್‌ನ ತೂಗಿ ಅಳೆದ ಸರಾಸರಿ ಬೆಲೆ 525 ರೂ ಆಗುತ್ತದೆ. ಅದೇ ರೀತಿಯಲ್ಲಿ, ಕೋವಿಶೀಲ್ಡ್‌ನ ತೂಗಿ ಅಳೆದ ಸರಾಸರಿ ಲೆಕ್ಕದ ಬೆಲೆಯು 325 ರೂ ಗೆ ಬರುತ್ತದೆ. 200 ರೂ ಗಳ ಬೆಲೆ ಅಂತರದಲ್ಲಿ ಮತ್ತು ತಿಂಗಳಿಗೆ ಮೂರು ಕೋಟಿ ಡೋಸ್‌ಗಳ ಉತ್ಪಾದನಾ ಮಟ್ಟದಲ್ಲಿ, ತನ್ನ ಸ್ವಂತ ಮೂಲಗಳಿಂದ ಖರ್ಚು ಮಾಡಿದ $300 ಮಿಲಿಯನ್ ಬಂಡವಾಳ ವೆಚ್ಚಗಳನ್ನು ನಾಲ್ಕು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಭಾರತ್ ಬಯೋಟೆಕ್ ತುಂಬಿಸಿಕೊಳ್ಳಲಿದೆ. ಖರ್ಚು ಮಾಡಿದ

ಪುಟ 14 ನೋಡಿ

# ಲಸಿಕೆ ಬೆಲೆಯಲ್ಲೂ ಹಗರಣ!

ಪುಟ 13 ರಿಂದ

ಬಂಡವಾಳ ವೆಚ್ಚಗಳನ್ನು ನಾಲ್ಕು ತಿಂಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಪಡೆಯುವುದು ಸಾಧ್ಯವಿರುವಾಗ, ಲಸಿಕೆಯ ಬೆಲೆಯನ್ನು ಖಾಯವ್ಮಾಗಿ ಹೆಚ್ಚಿನ ಮಟ್ಟದಲ್ಲಿಡುವುದು ದುರಾಸೆಯೇ. ಸುಲಿಗೆಯೇ.

ವಾಸ್ತವವಾಗಿ, ಎಸ್.ಐ.ಐ. ಮತ್ತು ಭಾರತ್ ಬಯೋಟೆಕ್ ಈ ಎರಡೂ ಸಂಸ್ಥೆಗಳು ಮಂಡಿಸಿರುವ ಪ್ರತಿಯೊಂದು ವಾದವೂ ಅಪ್ರಾಮಾಣಿಕ ವಾದವೇ. ವೇಗವಾಗಿ ರೂಪಾಂತರಗೊಳ್ಳುತ್ತಿರುವ ವೈರಸ್‌ಗೆ ಅನುಗುಣವಾಗಿ ಹೊಸ ಲಸಿಕೆಯನ್ನು ನಿರಂತರವಾಗಿ ಶೋಧಿಸಬೇಕಾಗುತ್ತದೆ ಎಂಬ ನೆಲೆಯಲ್ಲಿ ಹೆಚ್ಚಿನ ದರ ನಿಗದಿಯನ್ನು ಅವರು ಸಮರ್ಥಿಸಿಕೊಳ್ಳುತ್ತಾರೆ. ಈ ಸಮರ್ಥನೆಗೆ ಅರ್ಥವಿಲ್ಲ. ಏಕೆಂದರೆ, ಈ ಉದ್ದೇಶಕ್ಕಾಗಿ ಮೀಸಲಿಡುವ ಹಣವೆಷ್ಟು ಎಂಬುದರ ಬಗ್ಗೆ ಅವರು ಯಾವುದೇ ಅಂಕಿಅಂಶವನ್ನೂ ಒದಗಿಸಿಲ್ಲ. ಅಂತೆಯೇ, ಲಸಿಕೆ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು ಹೆಚ್ಚುವರಿ ಹೂಡಿಕೆ ಮಾಡಬೇಕಾಗಿದೆ ಎಂಬ ನೆಲೆಯ ಹೆಚ್ಚಿನ ದರ ನಿಗದಿಗೂ ಯಾವ ಸಮರ್ಥನೆಯೂ ಇಲ್ಲ. ಏಕೆಂದರೆ, ಈ ಉದ್ದೇಶಕ್ಕಾಗಿಯೇ ಸರ್ಕಾರದಿಂದ ಈ ಎರಡೂ ಸಂಸ್ಥೆಗಳು ಹಣ ಪಡೆಯುತ್ತವೆ – ಎಸ್.ಐ.ಐ ಗಾಗಿ ಕೇಂದ್ರ ಸರ್ಕಾರವು 3,000 ಕೋಟಿ ರೂ.ಗಳನ್ನು ತೆಗೆದಿಟ್ಟಿದೆ, ಜೊತೆಗೆ, ಭಾರತ್ ಬಯೋಟೆಕ್ 1,500 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಪಡೆಯಲಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಲಸಿಕೆ ತಯಾರಿಸುವ ಈ ಎರಡೂ ಸಂಸ್ಥೆಗಳು ಕೊರೊನಾ ಬಿಕ್ಕಟ್ಟನ್ನು ಲಾಭದ ಹಪಾಹಪಿಗಾಗಿ ಬಳಸಿಕೊಳ್ಳುತ್ತಿವೆ. ಈ ಅಂಶವು ಕೇಂದ್ರ ಸರ್ಕಾರಕ್ಕೆ ತಿಳಿದಿಲ್ಲವೆಂದರೆ, ಅದು ಸಂಪೂರ್ಣವಾಗಿ ಅಸಮರ್ಥವಾಗಿದೆ ಎಂದಾಗುತ್ತದೆ. ಒಂದು ವೇಳೆ ತಿಳಿದಿದ್ದರೆ, ಈ ವಂಚನೆಯಲ್ಲಿ ಭಾಗಿಯಾಗಿದೆ ಎಂದಾಗುತ್ತದೆ. ಹಾಗಾಗಿ, ಈ ಬಗ್ಗೆ ಒಂದು ತನಿಖೆ ನಡೆಸುವ ಅಗತ್ಯವಿದೆ.

**ನಾಲ್ಕು ಮಾರ್ಗಗಳಿವೆ**

ಈ ಹಿನ್ನೆಲೆಯಲ್ಲಿ ಸರ್ಕಾರವು ಮಾಡಬೇಕಾಗಿರುವುದು ಏನು ಎಂಬ ಪ್ರಶ್ನೆ ಎದುರಾಗುತ್ತದೆ. ಈ ಸಂಬಂಧವಾಗಿ, ಧೈರ್ಯದ ಪ್ರಮಾಣದ ಇಳಿಕೆಯ ಕ್ರಮದಲ್ಲಿ ನಾಲ್ಕು ಅನ್ಯ ಮಾರ್ಗಗಳನ್ನು ಸೂಚಿಸಬಹುದು.

ಮೊದಲನೆಯದು, ಕೋವಿಡ್–ಲಸಿಕೆಯ ಉತ್ಪಾದನೆಯನ್ನು ರಾಷ್ಟ್ರೀಕರಣ ಮಾಡುವುದೇ ಅತ್ಯುತ್ತಮ ಕ್ರಮ.

ಎರಡನೆಯದು, ಮೊದಲನೆಯದು ಕೈಲಾಗದಿದ್ದರೆ, ಲಸಿಕೆಗಳ ಅತಿಯಾದ ಬೆಲೆಯನ್ನು ತಡೆಗಟ್ಟುವ ಸಲುವಾಗಿ, ಬಿಕ್ಕಟ್ಟು ಕೊನೆಗೊಳ್ಳುವವರೆಗೆ, ಮತ್ತು, ಬಿಕ್ಕಟ್ಟು ಮುಗಿದ ನಂತರ ಅವುಗಳನ್ನು ಹಿಂದಿರುಗಿಸುವ ಭರವಸೆಯೊಂದಿಗೆ, ಸರ್ಕಾರವು ಎಸ್.ಐ.ಐ ಮತ್ತು ಭಾರತ್ ಬಯೋಟೆಕ್ ಈ ಎರಡೂ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು. ಸ್ಪೇನ್ ನಂತಹ ಯುರೋಪಿನ ದೇಶಗಳು ಖಾಸಗಿ ಆಸ್ಪತ್ರೆಗಳನ್ನು ಸ್ವಾಧೀನಪಡಿಸಿಕೊಂಡಿದ್ದವು ಎಂಬುದನ್ನು ಜ್ಞಾಪಿಸಿಕೊಳ್ಳಬಹುದು.

ಮೂರನೆಯದು, ಕೃಷಿ ವೆಚ್ಚಗಳು ಮತ್ತು ಬೆಲೆ ಆಯೋಗದ ಮಾದರಿಯಲ್ಲಿ, ಲಸಿಕೆ ಉತ್ಪಾದನಾ ವೆಚ್ಚಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರವು ಪಾವತಿಸಬೇಕಾದ ಬೆಲೆಯನ್ನು ಶಿಫಾರಸು ಮಾಡುವ ಒಂದು ಆಯೋಗವನ್ನು ಸ್ಥಾಪಿಸುವುದು (ಆಸ್ಟ್ರಾಜೆನೆಕಾದೊಂದಿಗಿನ ಹೊಂದಾಣಿಕೆಯ ಪ್ರಕಾರ ಕೆಲವು ದೇಶಗಳು ಲಸಿಕೆಯನ್ನು ಕೊಳ್ಳಲು ಒಂದಕ್ಕಿಂತ ಹೆಚ್ಚು ಬೃಹತ್ ಖರೀದಿದಾರರನ್ನು ನೇಮಿಸಿರುವ ಕ್ರಮದ ಅನುಸರಣೆಯೂ ಸೇರಿದಂತೆ).

ಅಂತಿಮವಾಗಿ, ಪ್ರಸ್ತುತ ಲಸಿಕೆ ತಯಾರಕರ ಏಕಸ್ವಾಮ್ಯವನ್ನು ಮುರಿಯುವುದು. ಕಡ್ಡಾಯ ಪರವಾನಗಿ(ಕಂಪಲ್ಸರಿ ಲೈಸೆನ್ಸಿಂಗ್) ಅಧಿಕಾರವನ್ನು ಬಳಸಿಕೊಂಡು ಸ್ಪರ್ಧಾತ್ಮಕ ಬಿಡ್ ಮೂಲಕ ಹೊಸ ಉತ್ಪಾದಕರಿಗೆ ಅನುಮತಿ ಕೊಡುವುದು. ಲಸಿಕೆಯನ್ನು ತಯಾರಿಸಿ ಅದನ್ನು ಅತಿ ಕಡಿಮೆ ಬೆಲೆಯಲ್ಲಿ ಮಾರುವ ಕಂಪೆನಿಯನ್ನು ಆಯ್ಕೆ ಮಾಡಿಕೊಳ್ಳಬೇಕು.

# ಉತ್ತರಪ್ರದೇಶ ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲೂ ಬಿಜೆಪಿಗೆ ಹಿನ್ನಡೆ

ಬಿಜೆಪಿಯ ಹೊಸ ಮಾದರಿ ರಾಜ್ಯ ಉತ್ತರಪ್ರದೇಶದಲ್ಲೂ ಜನಗಳು ಯೋಗಿ ಆದಿತ್ಯನಾಥ ಸರಕಾರದ ಕೊರೊನಾ ನಿರ್ವಹಣೆಯ ವಿರುದ್ಧ ತಮ್ಮ ಕ್ರೋಧವನ್ನು ವ್ಯಕ್ತಪಡಿಸುತ್ತಿರುವಂತೆ ಕಾಣುತ್ತದೆ. ಕಳೆದ ವಾರ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಗಳ ಪ್ರಕಟವಾಗುತ್ತಿರುವ ಫಲಿತಾಂಶಗಳ ಪ್ರಕಾರ ಸಮಾಜವಾದಿ ಪಾರ್ಟಿ ಅದಕ್ಕಿಂತ ಮುಂದಿದೆ. ಅದು 760 ಜಿಲ್ಲಾ ಪಂಚಾಯತ್ ಸ್ಥಾನಗಳನ್ನು ಪಡೆದಿದ್ದರೆ, ಬಿಜೆಪಿ 750 ವಾರ್ಡುಗಳಲ್ಲಿ ಗೆದ್ದಿದೆ. ಬಿಎಸ್‌ಪಿ 381 ಕಡೆ ಗೆದ್ದಿದ್ದರೆ ಕಾಂಗ್ರೆಸ್ 76 ವಾರ್ಡುಗಳನ್ನು ಪಡೆದಿದೆ. ಈ ಚುನಾವಣೆಗಳು ಪಕ್ಷಗಳ ಆಧಾರದಲ್ಲಿ ನಡೆಯುವದಿಲ್ಲ. ಆದರೆ ಪ್ರತಿಯೊಂದು ಪಕ್ಷವೂ ತಂತಮ್ಮ ಅಭ್ಯರ್ಥಿಗಳೆಂದೇ ಪ್ರಚಾರ ನಡೆಸುತ್ತಾರೆ.

ಬಿಜೆಪಿಗೆ ಬಹಳ ಆತಂಕ ಉಂಟುಮಾಡಿರುವ ಸಂಗತಿಯೆಂದರೆ, ಅಯೋಧ್ಯೆ, ಮಥುರಾ, ಪ್ರಯಾಗ, ರಾಜಧಾನಿ ಲಕ್ನೌ ಮಾತ್ರವಲ್ಲ ಪ್ರಧಾನ ಮಂತ್ರಿಗಳ ಕ್ಷೇತ್ರ ವಾರಣಾಸಿಯಲ್ಲೂ ಅದಕ್ಕೆ ತೀವ್ರ ಹಿನ್ನಡೆಯಾಗಿದೆ.

ಅಯೋಧ್ಯೆಯ 40 ವಾರ್ಡುಗಳಲ್ಲಿ ಬಿಜೆಪಿ ಗೆದ್ದಿರುವುದು ಕೇವಲ 6, ಸಮಾಜವಾದಿ ಪಾರ್ಟಿ 24 ಗೆದ್ದಿರುವುದಾಗಿ ಹೇಳಿಕೊಂಡಿದೆ. ಬಿಜೆಪಿ ಹಲವರಿಗೆ ತನ್ನ ಟಿಕೆಟ್ ನಿರಾಕರಿಸಿತ್ತು. ಅವರಲ್ಲಿ ಸ್ಪರ್ಧಿಸಿದ್ದ ಕೆಲವರು ಗೆದ್ದಿದ್ದಾರೆ. ಬಿಜೆಪಿ ಈಗ ಅವರು ತಮ್ಮ ಅಭ್ಯರ್ಥಿಗಳೇಂದೇ ಹೇಳುತ್ತಿದೆಯಂತೆ.

ಇನ್ನೊಂದು ಮಂದಿರ–ಮಸೀದಿಯ ಪ್ರಶ್ನೆ ಎತ್ತಿರುವ ಮಥುರಾದಲ್ಲಿ ಬಿಎಸ್‌ಪಿ ಮುಂದಿದೆ, ಅದು 12 ವಾರ್ಡುಗಳನ್ನು ಪಡೆದಿದೆ. ಬಿಜೆಪಿ 9 ನ್ನು ಪಡೆದಿದೆ, ಆರ್‌ಎಲ್‌ಡಿ 8ನ್ನು ಪಡೆದಿದೆ.

ರಾಜಧಾನಿ ಲಕ್ನೌನಲ್ಲಿ ಎಸ್.ಪಿ.25ರಲ್ಲಿ ಮುಂದಿದ್ದರೆ, ಬಿಜೆಪಿ ಕೇವಲ 3 ರಲ್ಲಿ ಮುಂದಿದೆ.

ಎಲ್ಲಕ್ಕೂ ಮಿಗಿಲಾಗಿ, ಪ್ರಧಾನಿಗಳ ಕ್ಷೇತ್ರವಾದ ವಾರಣಾಸಿಯ 40ರಲ್ಲಿ ಬಿಜೆಪಿಗೆ ದಕ್ಕಿರುವುದು ಕೇವಲ 8.

ಮುಂದಿನ ವರ್ಷ ಇಲ್ಲಿ ವಿಧಾನಸಭಾ ಚುನಾವಣೆಗಳು ನಡೆಲಿದ್ದು ಈ ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಸೆಮಿಫೈನಲ್ ಎಂದು ಕಾಣಲಾಗುತ್ತಿದೆ.

# .....ಕಾರ್ಮಿಕ ವರ್ಗದ ಹೋರಾಟಗಳು 1971-77

ಪುಟ 12 ರಿಂದ

ಹೋರಾಟದ ನೆರಳಿನಲ್ಲಿ, ಎ.ಐ.ಆರ್.ಎಫ್. ನ ವಾರ್ಷಿಕ ಸಮ್ಮೇಳನ ನಡೆಯಿತು ಮತ್ತು ಯುನೈಟೆಡ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ಅಧ್ಯಕ್ಷರಾಗಿದ್ದ ಜಾರ್ಜ್ ಫರ್ನಾಂಡೀಸ್ ಎ.ಐ.ಆರ್.ಎಫ್. ಅಧ್ಯಕ್ಷರಾಗಿ ಆಯ್ಕೆಯಾದರು.

ಈ ಬದಲಾದ ಹಿನ್ನೆಲೆಯಲ್ಲಿ, ಕಾರ್ಮಿಕರ ಕುಂದುಕೊರತೆಗಳ ಪರಿಹಾರಕ್ಕಾಗಿ ಎ.ಐ.ಆರ್.ಎಫ್. ರೈಲ್ವೆ ಒಕ್ಕೂಟಗಳ ಜಂಟಿ ಸಮಾವೇಶ ಫೆಬ್ರವರಿ 27, 1974 ರಂದು ನವದೆಹಲಿಯಲ್ಲಿ ನಡೆದು, ಎನ್.ಸಿ.ಸಿ.ಆರ್. ಎಂದು ಜನಪ್ರಿಯವಾಗಿ ಕರೆಯಲಾದ, ರೈಲ್ವೆಕಾರ್ಮಿಕರ ಹೋರಾಟದ ರಾಷ್ಟ್ರೀಯ ಸಮನ್ವಯ ಸಮಿತಿಯನ್ನು ರಚಿಸಲಾಯಿತು.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಅಗತ್ಯ ಆಧಾರಿತ ಕನಿಷ್ಠ ವೇತನ, ಎಲ್ಲರಿಗೂ ಬೋನಸ್, ಜೀವನ ವೆಚ್ಚ ಸೂಚ್ಯಂಕದ ಏರಿಕೆಯ ಸಂಪೂರ್ಣ ತಟಸ್ಥೀಕರಣ, ಇತ್ಯಾದಿ, ಬೇಡಿಕೆಗಳ ಮೇಲೆ ಏಪ್ರಿಲ್ 9, 1974 ರಂದು ಒಂದು ದಿನದ ದೇಶವ್ಯಾಪಿ ಮುಷ್ಕರಕ್ಕೆ ನಿರ್ಧರಿಸಿತ್ತು.

**ತೀವ್ರ ದಮನದ ಮಧ್ಯೆ ಮುಷ್ಕರ ಪ್ರಾರಂಭ**

ಏತನ್ಮಧ್ಯೆ ಎನ್‌ಸಿಸಿಆರ್ ಮತ್ತು ವಿಭಿನ್ನ ರೈಲ್ವೆ ಮತ್ತು ಕೇಂದ್ರ ಸರ್ಕಾರಿ ನೌಕರರ ಸಂಘಗಳು ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಲು 23 ಏಪ್ರಿಲ್ 1974 ರಂದು ನೋಟಿಸ್ ನೀಡಿದವು ಮತ್ತು 8 ಮೇ 1974 ರಿಂದ ಮುಷ್ಕರ ಪ್ರಾರಂಭವಾಯಿತು.

ಸರ್ಕಾರ ಭಾರಿ ಪ್ರಮಾಣದಲ್ಲಿ ದಮನಕ್ಕೆ ಇಳಿಯಿತು. ಅಗತ್ಯ ಸೇವೆ ನಿರ್ವಹಣೆ ಸುಗ್ರೀವಾಜ್ಞೆ ಅಡಿ ಮುಷ್ಕರವನ್ನು ನಿಷೇಧಿಸಲಾಯಿತು. ಮತ್ತು ಅದೇ ಸುಗ್ರಿವಾಜ್ಞೆ ಮತ್ತು ಆಂತರಿಕ ಭದ್ರತಾ ಕಾಯ್ದೆ (ಮಿಸಾ) ಅಡಿಯಲ್ಲಿ 50.000 ಕ್ಕೂ ಹೆಚ್ಚು ರೈಲ್ವೆ ಮತ್ತು ಕೇಂದ್ರ ಸರ್ಕಾರಿ ನೌಕರರನ್ನು ಬಂಧಿಸಲಾಯಿತು. ಅನೇಕ ರೈಲ್ವೆ ನೌಕರರನ್ನು ಸಾಮೂಹಿಕ ವಿಚಾರಣೆಗೆ ಒಳಪಡಿಸಲಾಯಿತು ಮತ್ತು ಒಂದು ವರ್ಷದ ಕಠಿಣ ಜೈಲು ಶಿಕ್ಷೆ ವಿಧಿಸಲಾಯಿತು. ಆತ್ಮರಕ್ಷಣೆಗೆ ಯಾವುದೇ ಅವಕಾಶವಿಲ್ಲದೆ 3000 ಕಾರ್ಮಿಕರನ್ನು ನಿಯಮ (II) / 149 ರ ಅಡಿಯಲ್ಲಿ ಸೇವೆಯಿಂದ ವಜಾಗೊಳಿಸಲಾಯಿತು. ರೈಲ್ವೆ ಕಾಲನಿಗಳನ್ನು ಪೊಲೀಸ್ ಭಯೋತ್ಪಾದಕ ಆಳ್ವಿಕೆಗೆ ಒಳಪಡಿಸಲಾಯಿತು. ಮನೆಗಳ ಮೇಲೆ ದಾಳಿ ನಡೆಸಲಾಯಿತು, ಮಹಿಳೆಯರನ್ನು ದೌರ್ಜನ್ಯಕ್ಕೆ ಒಳಪಡಿಸಲಾಯಿತು ಮತ್ತು ಪುರುಷರನ್ನು ಪ್ರತೀಕಾರದಿಂದ ದೈಹಿಕವಾಗಿ ಹಿಂಸಿಸಲಾಯಿತು ಮತ್ತು ಕಾರ್ಮಿಕರ ಚಲನೆ ಮತ್ತು ಸಜ್ಜುಗೊಳಿಸುವಿಕೆಯನ್ನು ತಡೆಗಟ್ಟಲು ರೈಲ್ವೆ ಕಾಲನಿಗಳಲ್ಲಿ ಕರ್ಫ್ಯೂ ವಿಧಿಸಲಾಯಿತು. 5000 ಕೇಂದ್ರ ಕಾರ್ಮಿಕರನ್ನು ಸಹ ಸೇವೆಯಿಂದ ತೆಗೆದು ಹಾಕಲಾಯಿತು. .

ಕೇಂದ್ರ ಸರ್ಕಾರಿ ನೌಕರರ ಇತರ ಕ್ಷೇತ್ರಗಳಲ್ಲಿ, ಕೆಲವು ಅಡೆತಡೆಗಳ ಹೊರತಾಗಿಯೂ, ರೈಲ್ವೆ ಕಾರ್ಮಿಕರು ಮುಷ್ಕರವನ್ನು ಪ್ರಾರಂಭಿಸಿದ ಒಂದು ದಿನದ ನಂತರ 9 ಮೇ 1974 ರಂದು ಮುಷ್ಕರ ಪ್ರಾರಂಭವಾಯಿತು. ರೈಲ್ವೆ ಕಾರ್ಮಿಕರು ಮತ್ತು ಕೇಂದ್ರ ಸರ್ಕಾರಿ ನೌಕರರ ಐಕ್ಯ ಮುಷ್ಕರವು ಎಲ್ಲಾ ಕಾರ್ಮಿಕ ಸಂಘಗಳಿಂದ ವ್ಯಾಪಕವಾದ ಬೆಂಬಲವನ್ನು ಪಡೆಯಿತು. ಸೌಹಾರ್ದ ಕಾರ್ಯಾಚರಣೆಗಳು ಮತ್ತು ಸಕ್ರಿಯ ಸಹಾಯ ಮತ್ತು ಸಹಕಾರವನ್ನು ದೇಶದ ವಿವಿಧ ಭಾಗಗಳಲ್ಲಿ ಆಯೋಜಿಸಲಾಯಿತು.

ಆದರೆ ತಳಮಟ್ಟದಲ್ಲಿ ಸಮರ್ಪಕ ಸಿದ್ಧತೆ ಇಲ್ಲದಿರುವುದು ಮತ್ತು ಇತರ ಕೊರತೆಗಳಿಂದಾಗಿ, ಕೇಂದ್ರ ಸರ್ಕಾರಿ ನೌಕರರ ಮುಷ್ಕರವು ಪ್ರಾರಂಭವಾದ ಕೂಡಲೇ ಕುಸಿಯಲು ಪ್ರಾರಂಭಿಸಿತು ಮತ್ತು ಹೀಗಾಗಿ ಕೇಂದ್ರ ಸರ್ಕಾರಿ ನೌಕರರ ಮುಷ್ಕರವನ್ನು 10 ಮೇ 1974 ರಂದು ಹಿಂತೆಗೆದುಕೊಳ್ಳಲಾಯಿತು.

ರೈಲ್ವೆ ಕಾರ್ಮಿಕರ ಮುಷ್ಕರವನ್ನು ನಡೆಸುವಲ್ಲಿ ಸಹ; ಸ್ಪಷ್ಟ ನ್ಯೂನತೆಗಳು ಕಂಡುಬಂದವು.. ಕೇಂದ್ರ ನೌಕರರು ಮುಷ್ಕರವನ್ನು ಹಿಂತೆಗೆದುಕೊಂಡಿದ್ದು ಈ ನಿರಾಶೆಯನ್ನು ಮತ್ತಷ್ಟು ಹೆಚ್ಚಿಸಿತು. ಈ ಸನ್ನಿವೇಶಗಳಲ್ಲಿ, ವಿವಿಧ ಕಾರ್ಮಿಕ ಸಂಘಗಳು ಮೇ 15, 1974 ರಂದು ದೇಶವ್ಯಾಪಿ ಸೌಹಾರ್ದ ಮುಷ್ಕರಕ್ಕೆ ಕರೆ ನೀಡಿದವು. ಈ ಯಶಸ್ವಿ ಐಕ್ಯ ಮುಷ್ಕರವು ಅಭೂತಪೂರ್ವ ಹಿಂಸೆಯ ಹಿನ್ನೆಲೆಯಲ್ಲಿ ರೈಲ್ವೆ ಕಾರ್ಮಿಕರ ಸ್ಥೈರ್ಯವನ್ನು ಉಳಿಸಿಕೊಳ್ಳಲು ಹೆಚ್ಚು ಸಹಾಯಕವಾಯಿತು. ಆದರೆ ಅಂತಿಮವಾಗಿ, ಪಶ್ಚಿಮ ರೈಲ್ವೆ ಮತ್ತು ಇತರ ವಿಭಾಗಗಳಂತಹ ವಿವಿಧ ಕೇಂದ್ರಗಳಲ್ಲಿ ಮುಷ್ಕರ ವಿಫಲಗೊಳ್ಳಲು ಪ್ರಾರಂಭಿಸಿದಾಗ, ಈ ಸಮಯದಲ್ಲಿ ಬಂಧನದಲ್ಲಿದ್ದ ಜಾರ್ಜ್ ಫರ್ನಾಂಡೀಸ್ 29 ಮೇ 1974 ರಿಂದ ಮುಷ್ಕರವನ್ನು ರದ್ದುಗೊಳಿಸಿದರು.

ಆದರೂ ಸುಮಾರು ಇಪ್ಪತ್ತು ಲಕ್ಷ ರೈಲ್ವೆ ಕಾರ್ಮಿಕರು ಸಾಧಿಸಿದ ಏಕತೆ ಮತ್ತು ಅವರಲ್ಲಿ ಒಂದು ದೊಡ್ಡ ವಿಭಾಗವು ತೋರಿಸಿದ ಧೈರ್ಯ ಮತ್ತು ದೃಢ ನಿಶ್ಚಯವು ಭಾರತದ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ಹೊಸ ಇತಿಹಾಸವನ್ನು ಸೃಷ್ಟಿಸಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇದು ನಿಜಕ್ಕೂ ಅತಿದೊಡ್ಡ ಶ್ರಮಜೀವಿ ಕಾರ್ಯಾಚರಣೆಯಾಗಿತ್ತು.

**ವೇತನ ಸ್ತಂಭನಕ್ಕೆ ಸರ್ಕಾರದ ಪ್ರಯತ್ನ ಮತ್ತು ಕಾರ್ಮಿಕ– ವರ್ಗದ ಬೃಹತ್ ಪ್ರತಿರೋಧ**

ಅದಾಗಲೇ ಸರ್ಕಾರವು 1973 ರ ಫೆಬ್ರವರಿಯಲ್ಲಿ ವೇತನ ನೀತಿ ಕುರಿತು ಅಂದಿನ ಯೋಜನಾ ಆಯೋಗದ ಸದಸ್ಯರಾದ ಡಾ. ಸುಖಮೊಯ್ ಚಕ್ರವರ್ತಿ ನೇತೃತ್ವದ ಸಮಿತಿಯನ್ನು ನೇಮಿಸಿತ್ತು. ಸಂಘಟಿತ ಕಾರ್ಮಿಕರು ಈಗಾಗಲೇ ಬಡತನ ರೇಖೆಗಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದಾರೆ ಎಂದು ವರದಿ ಮತ್ತೊಂದು ಒಪ್ಪಲಾಗದ ಹೇಳಿಕೆ ಮಾಡಿತು. 'ಬಡತನ ರೇಖೆ' ಯನ್ನು ಯೋಜನಾ ಆಯೋಗವು ಏಕಪಕ್ಷೀಯವಾಗಿ 1960 ಬೆಲೆ–ಸೂಚ್ಯಂಕದಲ್ಲಿ ತಿಂಗಳಿಗೆ ರೂ.20 ರೂ.ಎಂದು ನಿಗದಿಪಡಿಸಿತು. ವಾಸ್ತವವಾಗಿ ವರದಿಯನ್ನು ಸಿದ್ಧಪಡಿಸುವ ಸಮಯದಲ್ಲಿ ಹೆಚ್ಚಿನ ಅಸಂಘಟಿತ ಕಾರ್ಮಿಕರು ಈ ಕನಿಷ್ಠಕ್ಕಿಂತ ಕಡಿಮೆ ವೇತನವನ್ನು ಪಡೆಯುತ್ತಿದ್ದರು, ವರದಿಯು ಅವರ ವೇತನ ಹೆಚ್ಚಳಕ್ಕೆ ಶಿಫಾರಸು ಮಾಡಲಿಲ್ಲ.

ಈ ವರದಿಯ ಸೈದ್ಧಾಂತಿಕ ಆಯುಧವನ್ನು ಹೊಂದಿದ ಸರ್ಕಾರವು ಅಧ್ಯಕ್ಷೀಯ ಸುಗ್ರೀವಾಜ್ಞೆಯ ಮೂಲಕ ಕಾರ್ಮಿಕರ ವಿರುದ್ಧ ತನ್ನ ಆಕ್ರಮಣವನ್ನು ಪ್ರಾರಂಭಿಸಿತು. ಹಣದುಬ್ಬರ ಮತ್ತು ಬೆಲೆ ಏರಿಕೆಯನ್ನು ತಡೆಯಲು 500 ಕೋಟಿ ರೂಪಾಯಿಗಳನ್ನು ಚಲಾವಣೆಯಿಂದ ಹಿಂದೆಗೆದುಕೊಳ್ಳಬೇಕೆಂಬ ನೆಪದ ಮೇರೆಗೆ ಸುಗ್ರೀವಾಜ್ಞೆಯನ್ನು ಸಮರ್ಥಿಸಲು ಸರ್ಕಾರ ಪ್ರಯತ್ನಿಸಿತು.

ಸಮಾವೇಶದಲ್ಲಿ ರಚಿಸಲಾದ ರಾಷ್ಟ್ರೀಯ ಪ್ರಚಾರ ಸಮಿತಿಯ ಸಭೆಯು ಕಾರ್ಮಿಕ ವರ್ಗಕ್ಕೆ ವೇತನ ಸ್ಥಂಭನದ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಲು ಮತ್ತು ಮೇ 15, 1975 ರಂದು 'ವೇತನ ಸ್ಥಂಭನ, ತುರ್ತು–ಪರಿಸ್ಥಿತಿ, ಮತ್ತು ವಿಕ್ಟಿಮೈಜೇಶನ್ ವಿರುದ್ಧ ರಾಷ್ಟ್ರೀಯ ಪ್ರತಿಭಟನಾ ದಿನ ಆಚರಿಸಲು ನಿರ್ಧರಿಸಿತು.

ವೇತನ–ಸ್ಥಂಭನದ ವಿರುದ್ಧ ಪ್ರತಿಭಟನಾ ರ್‍ಯಾಲಿಗಳು ಮತ್ತು ಸ್ಥಳೀಯ ಸಮಾವೇಶಗಳು ನಡೆದವು. ಏಪ್ರಿಲ್ 17, 1975 ರಂದು ಜೀವ ವಿಮೆ ಮತ್ತು ಸಾಮಾನ್ಯ ವಿಮಾ ನೌಕರರು ವೇತನ–ಸ್ಥಂಭನದ ವಿರುದ್ಧ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಆಚರಿಸಿದರು.

ಜಯ ಪ್ರಕಾಶ್ ನಾರಾಯಣ್ ಅವರ ರಾಷ್ಟ್ರೀಯ ಸಮನ್ವಯ ಸಮಿತಿ ಮತ್ತು 1974–75ರ ಅವಧಿಯಲ್ಲಿ 'ಸಂಪೂರ್ಣ–ಕ್ರಾಂತಿ' ಎಂಬ ಅವರ ಘೋಷಣೆ, ಇಂದಿರಾ ಕಾಂಗ್ರೆಸ್ ಆಡಳಿತದ ವಿರುದ್ಧ ಮಾತ್ರ ನಿರ್ದೇಶಿಸಲ್ಪಟ್ಟಿದ್ದಿಲ್ಲ, ಅದು ಎಡ ಐಕ್ಯತೆಯ ವಿರುದ್ಧವೂ ತನ್ನ ನಿಲುವನ್ನು ಹೊಂದಿತ್ತು ಎಂಬುದನ್ನು ಅರಿತುಕೊಳ್ಳಬೇಕು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ (ಐ) ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯಲ್ಲಿ ತೊಡಗಿದ್ದಾಗ ಅದು ಮಾರ್ಕ್ಸ್‌ವಾದಿಗಳ ವಿಷಯದ ಕುರಿತು ಎಂದಿಗೂ ಸಹಾನುಭೂತಿ ತೋರಿಸಿರಲಿಲ್ಲ. ಹೀಗಾದರೂ, ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಿದಾಗ, ಇಂದಿರಾ ಕಾಂಗ್ರೆಸ್ ಸರ್ಕಾರವು ಎಡಪಕ್ಷಗಳ ವಿರುದ್ಧ ಮಾತ್ರವಲ್ಲ, ಜೆಪಿಯವರ ರಾಷ್ಟ್ರೀಯ ಸಮನ್ವಯ ಸಮಿತಿಯೊಳಗಿನ ಪಕ್ಷಗಳ ವಿರುದ್ಧವೂ ದಬ್ಬಾಳಿಕೆ ಮತ್ತು ಭಯೋತ್ಪಾದನೆಯನ್ನು ಹರಿಬಿಟ್ಟಿತು, ಆಗ ಅವರಿಗೆ ಸರ್ವಾಧಿಕಾರದ ವಿರುದ್ಧ ಮತ್ತು ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ರಕ್ಷಣೆಗಾಗಿ ತಮ್ಮನ್ನು ತೊಡಗಿಸಿಕೊಳ್ಳುವುದರ ಹೊರತುಪಡಿಸಿ ಬೇರೆ ದಾರಿಯಿರಲಿಲ್ಲ ಈ ಪರಿಸ್ಥಿತಿಯಲ್ಲಿಯೇ ಸರ್ವಾಧಿಕಾರಶಾಹಿಯ ವಿರುದ್ಧ ವ್ಯಾಪಕವಾದ ಮೈತ್ರಿ ಮತ್ತು ಪ್ರಜಾಪ್ರಭುತ್ವದ ಪುನಃಸ್ಥಾಪನೆಗಾಗಿ ನಿಜವಾದ ಸಾಧ್ಯತೆ ಸೃಷ್ಟಿಯಾಯಿತು.

ಮೇ 1974 ರ ರೈಲ್ವೆ ಮುಷ್ಕರದ ನಂತರ, ಎಡ ಐಕ್ಯತೆ ಮತ್ತು ಕಾರ್ಮಿಕ–ವರ್ಗದ ಐಕ್ಯ ಚಳವಳಿಯು ತೀವ್ರವಾದ ಒತ್ತಡಗಳಿಗೆ ಒಳಗಾದಾಗ, ತುರ್ತುಸ್ಥಿತಿ ಅವಧಿಯಲ್ಲಿ ಮತ್ತು ನಂತರ– ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ವರ್ಗದ ಐಕ್ಯ ಚಳವಳಿಯ ಪ್ರಗತಿಗೆ ಸಂಬಂಧಿಸಿದ ಸಂಕೀರ್ಣತೆಗಳು, ಪ್ರಜಾಪ್ರಭುತ್ವದ ಪುನಸ್ಥಾಪನೆ ಮತ್ತು ಕಾರ್ಮಿಕ ವರ್ಗದ ಆರ್ಥಿಕ ಹಿತಾಸಕ್ತಿಗಳ ಪ್ರಚಾರವನ್ನು ಈ ನಿರ್ದಿಷ್ಟ ರಾಜಕೀಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು.

## ಪ.ಬಂಗಾಳ: ಬಿಜೆಪಿಗೆ ಭಾರೀ ಸೋಲು ಪುಟ 11 ರಿಂದ

ಅವರ ರಾಜಕೀಯ ಅಭಿಪ್ರಾಯ ಬೇಧವಿಲ್ಲದೆ ಎಲ್ಲರಲ್ಲೂ ಆಕ್ರೋಶವನ್ನು ತಂದಿತು. ಬಿಜೆಪಿ ಯನ್ನು ಸೋಲಿಸಬೇಕಾದರೆ ತೃಣಮೂಲ ಉತ್ತಮ ಅಸ್ತ್ರ ಎಂದು ಜನ ನಿರ್ಧರಿಸಿದರು. ಧ್ರುವೀಕರಣದ ಸಂದರ್ಭದಲ್ಲಿ ಮೂರನೇ ರಂಗ ಅಥವಾ ಪಕ್ಷಕ್ಕೆ ನಷ್ಟವಾಗುವುದು ನಮ್ಮ ಈಗಿನ ಚುನಾವಣಾ ವ್ಯವಸ್ಥೆಯಲ್ಲಿ ಸಾಮಾನ್ಯ. ಹಾಗಾಗಿಈ ಚುನಾವಣೆಯಲ್ಲಿ ಜನತೆ ಉತ್ತಮ ಆಡಳಿತ ಕೊಡುತ್ತಾರೆ ಎಂದು ತೃಣಮೂಲವನ್ನು ಆಯ್ಕೆ ಮಾಡಲಿಲ್ಲ. ಬಿಜೆಪಿಯನ್ನು ಸೋಲಿಸಲು ಆಯ್ಕೆ ಮಾಡಿದರು. ಮೇಲೆ ಹೇಳಿದ ಕಾರಣಗಳಿಗೆ ಬಿಜೆಪಿ 2019ರಲ್ಲಿ ಗೆದ್ದುಕೊಂಡಿದ್ದ ಜನವಿಭಾಗಗಳಲ್ಲಿ ಸಾಕಷ್ಟು ಕುಸಿತ ಅನುಭವಿಸಿತು. ಈ ಜನವಿಭಾಗಗಳು ತೃಣಮೂಲವನ್ನು ಬೆಂಬಲಿಸಿದವು. ಸಂಯುಕ್ತ ಮೋರ್ಚಾದ ಕಟ್ಟಾ ಬೆಂಬಲಿಗರನ್ನು ಬಿಟ್ಟರೆ, ಉಳಿದವರು ಬಿಜೆಪಿ ಸೋಲಿಸಲು ತೃಣಮೂಲವನ್ನು ಬೆಂಬಲಿಸಿದರು. ಹಿಂದಿನ ಚುನಾವಣೆಯಲ್ಲಿ ಬಿಜೆಪಿಗೆ ಹೋಗಿದ್ದ ತೃಣಮೂಲ ವಿರೋಧಿ ಜನವಿಭಾಗಗಳು ಇದರಿಂದಾಗಿ ಸಂಯುಕ್ತ ಮೋರ್ಚಾಗೆ ವಾಪಸು ಬರುವ ಬದಲು ತೃಣಮೂಲಕ್ಕೆ ಹೋದವು.

ಕಳಪೆ ಆಡಳಿತ, ಭ್ರಷ್ಟಾಚಾರ, ಹಿಂಸಾಚಾರ, ಪ್ರಜಾಪ್ರಭುತ್ವದ ಅಭಾವ, ಜನರ ಸಂಕಷ್ಟಗಳನ್ನು ವಾಸ್ತವವಾಗಿ ಪರಿಹರಿಸದ ಬರಿಯ ಸೋಗಿನ ಕಲ್ಯಾಣ ಯೋಜನೆಗಳನ್ನು ಘೋಷಿಸುವ ತೃಣಮೂಲ;ಮತ್ತು ಬಿಜೆಪಿಯ ಕೋಮುವಾದ, ಕಟು ನವ–ಉದಾರವಾದಿ ನೀತಿಗಳು, ರಾಜ್ಯಗಳ ಹಕ್ಕುಗಳ ಮೇಲೆ ದಾಳಿ – ಎರಡನ್ನೂ ವಿರೋಧಿಸಿದ ಎಡರಂಗದ ಸಂಯುಕ್ತ ಮೋರ್ಚಾದ ಅಜೆಂಡಾವನ್ನು ಯಾಕೆ ಜನರು ಆಯ್ಕೆ ಮಾಡಲಿಲ್ಲ ಎಂಬ ಪ್ರಶ್ನೆ ಉಳಿಯುತ್ತದೆ. ಇಂದಿನ ಚುನಾವಣೆಗಳು ಹಣಬಲ, ತೋಳ್ಬಲ, ಮಾಧ್ಯಮ ಬಲ ಮತ್ತು ಅಗಾಧ ಸಂಪನ್ಮೂಲಗಳ ಆಟ. ಬಿಜೆಪಿ ಮತ್ತು ತೃಣಮೂಲ ಎರಡಕ್ಕೂ ಇವು ಬೇಕಾದಷ್ಟು ಪ್ರಮಾಣದಲ್ಲಿ ಇವೆ. ಅಲ್ಲದೆ ಆಳುವ ವರ್ಗಗಳ ಸೈದ್ಧಾಂತಿಕ, ಭೌತಿಕ ಬೆಂಬಲವಿದೆ. ಎಡಪಕ್ಷಗಳು ಮತ್ತು ಸಂಯುಕ್ತ ಮೋರ್ಚಾಕ್ಕೆ ಇದು ಇಲ್ಲ. ಚುನಾವಣೆಗಳು ಜಾತಿ–ಬುಡಕಟ್ಟು–ಮತಧರ್ಮ ಗಳ ಐಡೆಂಟಿಟಿ ಮತ್ತು ಧ್ರುವೀಕರಣದ ರಾಜಕಾರಣದ ಆಟ ಕೂಡಾ. ಇಂತಹ ರಾಜಕಾರಣವನ್ನು ಮಾಡಲೊಪ್ಪದ ಎಡಪಕ್ಷಗಳು ಈ ಆಟದಲ್ಲಿ ಸೋಲುವ ಸಾಧ್ಯತೆಯೇ ಹೆಚ್ಚು. ಆದರೆ ಬಿಜೆಪಿಯ ಈ ಭಾರೀ ಸೋಲಿನ ಫಲಿತಾಂಶ ಬರುವುದರಲ್ಲಿ ಎಡಪಕ್ಷಗಳ ಮತ್ತು ಸಂಯುಕ್ತ ಮೋರ್ಚಾದ ಪಾತ್ರವಿಲ್ಲ ಎಂದು ಹೇಳುವಂತಿಲ್ಲ. ಮೊದಲನೆಯದಾಗಿ ಕೋಮು–ಧ್ರುವೀಕರಣ ಮತ್ತು ಅದರ ಜೊತೆ ಕೋಮು ರಾಜಕಾರಣದ ಸಂಕಥನ ಬಲವಾಗಿ ಮುನ್ನೆಲೆಗೆ ಬಂದಿದ್ದರೂ, ಎಡರಂಗದ ಹಲವು ದಶಕಗಳ ಸೆಕ್ಯುಲರ್ ರಾಜಕಾರಣದ ಪರಂಪರೆ ಮತ್ತು ಈಗಲೂ ಕೋಮುವಾದದ ವಿರುದ್ಧ ರಾಜಿಯಿಲ್ಲದ ಪ್ರಚಾರಾಂದೋಲನ ಈಗಿನ ಕೋಮು ರಾಜಕಾರಣದ ಅಲೆ ಬಿಜೆಪಿಯನ್ನು ಅಧಿಕಾರಕ್ಕೆ ತರುವುದನ್ನು ತಡೆಯಲು ಸಾಧ್ಯವಾಗುವಷ್ಟು ಬಲವಾಗಿತ್ತು. ಲೋಕನೀತಿ ಚುನಾವಣೋತ್ತರ ಸಮೀಕ್ಷೆಯಲ್ಲಿ ಬಿಜೆಪಿ ಮತದಾರರು ಸೇರಿದಂತೆ ರಾಷ್ಟ್ರೀಯ ಸರಾಸರಿಗಿಂತ ಎಷ್ಟೋ ಹೆಚ್ಚು ಪ್ರಮಾಣದ ಜನ ಸೆಕ್ಯುಲರ್–ಅಲ್ಪಸಂಖ್ಯಾತರ ಕುರಿತು ನೀತಿ ಸಂಬಂಧಿತ ಪ್ರಶ್ನೆಗಳಿಗೆ (ಅಯೋಧ್ಯಾ ಮಂದಿರ, ಅಲ್ಪಸಂಖ್ಯಾತರಿಗೆ ರಕ್ಷಣೆ, ಸಿಎಎ–ಎನ್.ಆರ್.ಸಿ ಇತ್ಯಾದಿ) ಸೆಕ್ಯುಕರ್ ಉತ್ತರ ನೀಡಿದ್ದಾರೆ ಎನ್ನುವ ಮೂಲಕ ದೃಢಪಡಿಸಿದೆ.ಮಾತ್ರವಲ್ಲ, ತೃಣಮೂಲದ ಕಳಪೆ ಆಡಳಿತ, ಭ್ರಷ್ಟಾಚಾರ, ಹಿಂಸಾಚಾರ, ಪ್ರಜಾಪ್ರಭುತ್ವದ ಅಭಾವ, ಜನರ ಸಂಕಷ್ಟಗಳನ್ನು ಮುನ್ನೆಲೆಗೆ ತರುವ ಎಡರಂಗ ಮತ್ತು ಸಂಯುಕ್ತ ಮೋರ್ಚಾ ಪ್ರಯತ್ನ ಮತ್ತು ಅದರ ಸುತ್ತ ಪ್ರಬಲ ಪ್ರಚಾರವು, ಬಿಜೆಪಿಯ ಕೋಮು–ಜಾತಿ ಐಡೆಂಟಿಟಿ ರಾಜಕಾರಣವು ತೃಣಮೂಲ–ವಿರೋಧಿ ಅತೃಪ್ತಿಯ ಪೂರ್ಣ ಲಾಭ ಪಡೆಯುವುದನ್ನು ತಡೆಯುವ ಮೂಲಕವೂ ಬಿಜೆಪಿ ಸೋಲಿನಲ್ಲಿ ಕೊಡುಗೆ ನೀಡಿದೆ.

## ಡಾ. ಗುಂಡ್ಮಿ ಭಾಸ್ಕರ ಮಯ್ಯರ ಕ್ಲಾಸು ಇನ್ನಿಲ್ಲ!..... ಪುಟ 16 ರಿಂದ

ಬರವಣಿಗೆಗಳ ಮೇಲೆ ಹಿಂದಿ ಭಾಷೆಯ ಬರಹಗಾರರಲ್ಲಿ ರಾಹುಲ್ ಸಾಂಕೃತ್ಯಾಯನ, ಡಾ. ರಾಮವಿಲಾಸ ಶರ್ಮ, ಮುಕ್ತಿಬೋಧಾ ಅಲ್ಲದೆ ಕ್ನನಡದ ಲೇಖಕರಾದ ಶಂ.ಬಾ.ಜೋಶಿ ಮತ್ತು ಶಿವರಾಮ ಕಾರಂತರ ಪ್ರಭಾವವನ್ನು ಕಾಣಬಹುದು.

ಅವರ ಕೃತಿಗಳಲ್ಲಿ ಸ್ವತಂತ್ರ ಚಿಂತನೆ ಹಾಗೂ ವಿಮರ್ಶೆಗಳಲ್ಲದೆ, ಹಿಂದಿಯಿಂದ ಅನುವಾದಿಸಲ್ಪಟ್ಟ ಕೃತಿಗಳು ಸಾಕಷ್ಟಿವೆ. 'ಜ್ಯೋತಿಷ್ಯ ವೈಜ್ಞಾನಿಕವೇ?' (ಹಲವು ಲೇಖಕರು) 'ಧರ್ಮದರ್ಶನ ಸದಾಚಾರ' (ಸಾಂಕೃತ್ಯಾಯನ), ಧರ್ಮದರ್ಶನದ ವರ್ಗ ಇತಿಹಾಸ (ಗೋರಾ, ಸಾಂಕೃತ್ಯಾಯನ), ಮಾರ್ಕ್ಸ್‌ವಾದ ಮತ್ತು ಸೌಂದರ್ಯಶಾಸ್ತ್ರ (ಇ.ಎಂ.ಎಸ್), ಮಾರ್ಕ್ಸ್‌ವಾದಿ ದರ್ಶನ (ಹರ್‌ಕಿಶನ್ ಸಿಂಗ್ ಸುರ್ಜೀತ್) ಹರಿಶಂಕರ ಪರಸಾಯಿ ಅವರ ಆಯ್ದ ಕತೆಗಳ 2 ಸಂಕಲನಗಳು, ಖ್ಯಾತ ಹಿಂದಿ ಸಂಪಾದಕರಾದ ಕನ್ನಡಿಗ ನಾರಾಯಣ ದತ್ತ, 1857 ರ ದಂಗೆಯನ್ನು ಸ್ವತಃ ಕಂಡ ವಿಷ್ಣುಭಟ್ ಗೋಡ್ಸೆಯ 'ನನ್ನ ಪ್ರವಾಸ', ಭಾರತೀಯ ಭಾಷಾ ಕುಟುಂಬಗಳು (ರಾಮವಿಲಾಸ ಶರ್ಮ), ಈಚೆಗೆ ಅನುವಾದಿಸಿರುವ 'ಡಾ. ರಾಮವಿಲಾಸ ಶರ್ಮ – ವ್ಯಕ್ತಿ ಚಿತ್ರ' – ಇತರ ಅನುವಾದಿತ ಕೃತಿಗಳಲ್ಲಿ ಮುಖ್ಯವಾಗಿರುವವು.

'ಋಗ್ವೇದ ಮತ್ತು ಜನಸಂಸ್ಕೃತಿ', 'ವಾದ ಪ್ರತಿವಾದ ಮತ್ತು ಸಂವಾದ', 'ವಿಮರ್ಶೆಯ ಪರಾಮರ್ಶೆ ಮತ್ತು ಪರಾಮರ್ಶೆಯ ವಿಮರ್ಶೆ', 'ಜೈನ ದರ್ಶನ್ ಏಕ್ ಅವಲೋಕನ್', 'ಶಂಬಾ:ವ್ಯಕ್ತಿತ್ವ ಔರ್ ಕೃತಿತ್ವ', 'ರಾಹುಲ ಸಾಂಕೃತ್ಯಾಯನ' (ವ್ಯಕ್ತಿಚಿತ್ರ), 'ಅಜನಬೀಪನ್ :ಏಕ್ ಸೈದ್ಧಾಂತಿಕ್ ಅನುಶೀಲನ್', 'ಮಾರ್ಕ್ಸ್‌ವಾದಿ ವರ್ಗದೃಷ್ಟಿ', 'ನಿಕಷಕೊಡ್ಡಿದ ನಿರ್ಣಯಗಳು' – ಈ ಕೃತಿಗಳಲ್ಲಿ ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಮಾಡಿದ ಪ್ರಬುದ್ಧ ವಿಶ್ಲೇಷಣೆಯನ್ನು ಗುರುತಿಸಬಹುದಾಗಿದೆ.

ಜಾಗತೀಕರಣವನ್ನು ವಿಶ್ಲೇಷಿಸಿ ಮಾಡಿದ ಬರಹಗಳು 'ಸಾಮ್ರಾಜ್ಯಶಾಹಿಯ ದವಡೆಯಲ್ಲಿ ಭಾರತ', 'ಜಾಗತೀಕರಣದ ನಾಗಪಾಶ', 'ಬಹುರಾಷ್ಟ್ರೀಯ ಆರ್ಥಿಕತೆಯ ಪರಿಣಾಮಗಳು' ಪುಸ್ತಕಗಳಲ್ಲಿ ಮೂಡಿಬಂದಿದೆ.

'ಅಜನಬೀಪನ್' ಈ ಕೃತಿ 'ಪರಕೀಯತೆ' (Alienation) ಯನ್ನು ಪಾಶ್ಚಾತ್ಯ, ಪೌರಾತ್ಯ ತತ್ವಶಾಸ್ತ್ರ, ರಾಜಕೀಯಶಾಸ್ತ್ರ, ಸಮಾಜಶಾಸ್ತ್ರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಅತ್ಯಪೂರ್ವ ಕೃತಿಯಾಗಿದೆ. 2002 ರಲ್ಲಿ ಈ ಕೃತಿಗೆ ಪ್ರಾಪ್ತವಾದ ಕೇಂದ್ರ ಸರ್ಕಾರದ ಪ್ರಶಸ್ತಿಯನ್ನು ಅಂದಿನ ಪ್ರಧಾನಿಗಳ ಕೈಗಳಿಂದಲೇ ಭಾಸ್ಕರ ಮಯ್ಯರು ಸ್ವೀಕರಿಸಿದರು. ಅವರಿಗೆ ಪ್ರಾಪ್ತವಾದ ಇನ್ನೊಂದು ಪ್ರಶಸ್ತಿಯೆಂದರೆ 2016ರಲ್ಲಿ ಬೆಂಗಳೂರು ವಿಚಾರವಾದಿ ಸಂಘವು ಪ್ರದಾನಿಸಿದ 'ಕರ್ನಾಟಕ ಮಹಾವಿಚಾರ ರತ್ನ' ಪುರಸ್ಕಾರ.

ಭಾಸ್ಕರ ಮಯ್ಯರು ಒಬ್ಬ Activist ಕೂಡಾ. 1970–80 ರ ದಶಕದಲ್ಲಿ ಕುಂದಾಪುರದಲ್ಲಿ ಅವರು ವಿಚಾರವಾದಿ ಸಂಘ ರಚಿಸಿಕೊಂಡು, ವಿದ್ಯಾರ್ಥಿಗಳನ್ನು ಒಡಗೂಡಿಸಿ ಹೋಟೆಲುಗಳಲ್ಲಿ ಠಾಣೆ ಊರುವ ಜ್ಯೋತಿಷಿಗಳಿಗೆ ಸವಾಲು ಎಸೆದಿದ್ದಾರೆ. ಭಾರೀ ಯಜ್ಞವೊಂದನ್ನು ವಿರೋಧಿಸಿ, ಜಾತಿ ಸಮುದಾಯವೊಂದರ ಆಕ್ರೋಶಕ್ಕೂ ಕಾರಣರಾಗಿದ್ದರು. ಬಳಿಕ ಉಡುಪಿಯಲ್ಲಿ ರಚನೆಗೊಂಡ ವಿಚಾರವಾದಿ ಸಂಘದ ಅಧ್ಯಕ್ಷರಾಗಿ 2–3 ವರ್ಷಗಳ ಕಾಲ ತಿಂಗಳಿಗೊಂದು ಕಾರ್ಯಕ್ರಮ ರೂಪಿಸಿದ್ದರು. ತಮ್ಮ ಊರಿನ ಸಾಣೆಕಲ್ಲು ಕಾರ್ಮಿಕರ ಸಂಘಟನೆ ಮಾಡಿ ಹೋರಾಟಕ್ಕೆ ಮಾರ್ಗದರ್ಶನ ನೀಡಿದ್ದರು. 20 ನಿವೇಶನರಹಿತ ದಲಿತ ಕುಟುಂಬಗಳನ್ನು ಸರ್ಕಾರಿ ಜಾಗವೊಂದರಲ್ಲಿ ಕುಳ್ಳಿರಿಸಿ ಅವರಿಂದ ಹೋರಾಟ ಮಾಡಿಸಿ ಅಲ್ಲಿನ ಭೂಮಾಲಿಕರ ವಿರೋಧವನ್ನು ಎದುರಿಸಿಯೂ, ಬಡ ದಲಿತರಿಗೆ ನಿವೇಶನ ಸಿಗುವಂತೆ ಮಾಡಿದ್ದರು. ಆ ಜಾಗದಲ್ಲಿ ಆ ಕುಟುಂಬಗಳು ಇವತ್ತಿಗೂ ಉತ್ತಮ ಮನೆಗಳಲ್ಲಿ ವಾಸವಾಗಿವೆ.

ಶೈಕ್ಷಣಿಕ ವಲಯಗಳಲ್ಲೂ ಅವರು ತಮ್ಮ ಪುರೋಗಾಮಿ ಚಟುವಟಿಕೆಗಳಿಂದಾಗಿ ಆಡಳಿತ ಮಂಡಳಿಯವರಿಂದ, ಪ್ರತಿಗಾಮಿ ಸಹೋದ್ಯೋಗಿಗಳಿಂದ ವಿರೋಧ ಎದುರಿಸಿದ್ದಿದೆ. ಮಂಗಳೂರು ವಿಶ್ವವಿದ್ಯಾಲಯದ ಹಿಂದಿ ಬೋರ್ಡ್ ಆಫ್ ಸ್ಟಡೀಸ್ ಸದಸ್ಯರಾಗಿ, ಅಧ್ಯಕ್ಷರಾಗಿ, ಹಿಂದಿ ಪಠ್ಯಕ್ರಮವನ್ನು ತೀವ್ರ ಪರಿಷ್ಕರಣೆಗೆ ಒಳಪಡಿಸಿದಾಗ, ಅದರಲ್ಲೂ ವ್ಯಾಕರಣ ಅಧ್ಯಯನದಲ್ಲಿ ಅಪ್ರಯೋಜಕ ಹಳೆಯ ಅಭ್ಯಾಸ ಕ್ರಮವನ್ನು ಕೈಬಿಟ್ಟು ಅಧ್ಯಯನದಲ್ಲಿ Functinal Grammer ನ್ನು ಚಾಲ್ತಿಗೆ ತಂದಾಗ, ಹಿಂದೀ ಉಪನ್ಯಾಸಕರೇ ಅದನ್ನು ವಿರೋಧಿಸಿದ್ದರೂ, ಅವರು ಬದಲಾವಣೆಯನ್ನು ಕೈಬಿಡಲಿಲ್ಲ. ಹಿಂದಿ ಉಪಪಠ್ಯದಲ್ಲಿ ಪ್ರಾದೇಶಿಕ ಕನ್ನಡ ಭಾಷೆಯ ಕೃತಿಗಳನ್ನು – ಹಿಂದಿಯಲ್ಲಿ ಅನುವಾದಗೊಂಡುದನ್ನು ಸಿಲೆಬಸ್‌ನಲ್ಲಿ ಅಳವಡಿಸಿದಾಗಲೂ ವಿರೋಧ ಬಂತು. ಅದರಲ್ಲೂ ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ' ದ ಅನುವಾದ ಕೃತಿಗೆ ವಿರೋಧ ಬಂದರೂ, ಅದನ್ನು ಪಠ್ಯಕ್ರಮದಲ್ಲಿ ಅವರು ಕೈಬಿಡದೆ ಗೆಲ್ಲಿಸಿಬಿಟ್ಟರು. ಹರಿಶಂಕರ ಪರಸಾಯಿ ಅವರ ವಿಡಂಬನ ಕೃತಿಗಳನ್ನು ಪ್ರತಿಗಾಮಿ ಶಿಕ್ಷಕರ ವಿರೋಧದ ನಡುವೆಯೂ, ವಿದ್ಯಾರ್ಥಿಗಳು ಓದುವಂತೆ ಮಾಡಿದರು.

ಎಸ್.ಎಫ್.ಐ ವಿದ್ಯಾರ್ಥಿ ಚಳುವಳಿ, ಸಮುದಾಯ ಸಂಘಟನೆ, ಡಿವೈಎಫ್‌ಐ ಯುವ ಸಂಘಟನೆ, 1970–80 ರಲ್ಲಿ ಕುಂದಾಪುರದಲ್ಲಿ ಮೂಡಿ ಬರುವಲ್ಲಿ ಜಿ. ಭಾಸ್ಕರ ಮಯ್ಯರು ವಿದ್ಯಾರ್ಥಿ, ಯುವಜನರಿಗೆ ಕೊಟ್ಟ ಮಾರ್ಗದರ್ಶನವೂ ಕಾರಣವಾಗಿದೆ. ದ.ಕ. ಜಿಲ್ಲೆಯಲ್ಲಿ ಬಂಡಾಯ ಹಾಗೂ ಸಮುದಾಯ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿಯೂ ಅವರ ಪಾತ್ರವಿದೆ. ಅವರು ಹಲವು ಪ್ರಗತಿಪರ ಸಂಘಟನೆಗಳ ತರಬೇತಿ ಶಿಬಿರಗಳಲ್ಲಿ ಕ್ಲಾಸು ಮಾಡಲು ಅತ್ಯಂತ ಹೆಚ್ಚು ಬೇಡಿಕೆಯಲ್ಲಿದ್ದ ಮಾಸ್ತರು. ಆದರೆ ಅವರ ಕ್ಲಾಸು ಇನ್ನು ಇರುವುದಿಲ್ಲ.

ದ್ವಂದ್ವಮಾನ ಭೌತವಾದವೇ ನಿಜವಾದ ವಿಚಾರವಾದ ಮತ್ತು ಮಾನವೀಯತೆಯ ಶಿಖರ ಎಂದು ಜಿ. ಭಾಸ್ಕರ್ ಮಯ್ಯ ಅವರು ಬರಹವೊಂದರಲ್ಲಿ ನಿರೂಪಿಸಿದ್ದಾರೆ. ಇಂಥ ಅಪೂರ್ವ ವಿದ್ವಾಂಸರು ಹಾಗೂ ಹೋರಾಟಗಾರರನ್ನು ಕೋವಿಡ್ ಬಲಿತೆಗೆದುಕೊಂಡಿರುವ ಈ ಸನ್ನಿವೇಶದಲ್ಲಿ ಕನ್ನಡ ಸಾಂಸ್ಕೃತಿಕ ವಲಯವರನ್ನು ಗುರುತಿಸಿ ಗೌರವಿಸಬೇಕಾಗಿದೆ.

## ಪ್ರಜಾಪ್ರಭುತ್ವ, ಪ್ರಗತಿಪರ ಸಾಂಸ್ಕೃತಿಕ ಚಳುವಳಿಗೆ ತುಂಬಲಾರದ ನಷ್ಟ...... ಪುಟ 16 ರಿಂದ

ವಿಠಲ ಭಂಡಾರಿ ಖ್ಯಾತ ವಿಚಾರವಾದಿ, ಸಂಘಟಕ, ಹಲವು ಚಳುವಳಿಗಳ ಮುಂದಾಳು, ಸಿದ್ದಾಪುರ ಎಂ.ಜಿ.ಸಿ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಎಸ್.ಎಫ್.ಐ ನ ಜೊತೆ ಗುರುತಿಸಿಕೊಂಡ ವಿಠ್ಠಲ ಭಂಡಾರಿಯವರು ಚಳುವಳಿಯ ಜೊತೆಗೇ ಬೆಳೆದು ಬಂದವರು.

ಸಾಹಿತ್ಯ, ಸಂಸ್ಕೃತಿ ಚಿಂತಕರಾಗಿದ್ದ ಅವರು 'ಚಿಂತನ ಉತ್ತರ ಕನ್ನಡ' ದ ಸಂಚಾಲಕರಲ್ಲೊಬ್ಬರು. ನಿರಂತರವಾಗಿ ಪ್ರಗತಿಪರ ಚಳುವಳಿಗಳ ಮುಂಚೂಣಿಯಲ್ಲಿರುತ್ತಿದ್ದ ವಿಠ್ಠಲ ಭಂಡಾರಿ ಅತ್ಯುತ್ತಮ ಸಂಘಟಕರಾಗಿದ್ದರು. ಆರ್.ವಿ.ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರದ ಕಾರ್ಯದರ್ಶಿಗಳಾಗಿದ್ದ ಅವರು ಪ್ರತಿವರ್ಷ ನಡೆಸುತ್ತಿದ್ದ 'ಸಹಯಾನ ಸಾಹಿತ್ಯೋತ್ಸವ' ನಾಡಿನ ಗಮನ ಸೆಳೆದಿದೆ. 'ಬಂಡಾಯ ಪ್ರಕಾಶನ' 'ಸಹಯಾನ' ದಿಂದ ಹಲವಾರು ಪುಸ್ತಕಗಳನ್ನ ಪ್ರಕಾಶಿಸಿದ್ದರು. 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಕ್ರಿಯಾಶೀಲ ಮುಂದಾಳುವಾಗಿದ್ದರು. ಇತ್ತೀಚೆಗೆ 'ಸಂವಿಧಾನ ಓದು' ಕಾರ್ಯಕ್ರಮದೊಂದಿಗೆ ರಾಜ್ಯದ ತುಂಬ ಸುತ್ತುತ್ತಿದ್ದ ಅವರು ಯುವಜನತೆಯ ಜೊತೆ ಓಡಾಡುತ್ತ ಸಂವಿಧಾನ ದ ಮಹತ್ವದ ಅರಿವು ಮೂಡಿಸುವಲ್ಲಿ ಸಫಲರಾಗಿದ್ದರು. ವಿಠ್ಠಲ ಭಂಡಾರಿ ಯವರ ನಿಧನ ನಿಜಕ್ಕೂ ಸಾಂಸ್ಕೃತಿಕ ಲೋಕದ ನಷ್ಟ.

*–ಕಿರಣ ಭಟ್ ಹೊನ್ನಾವರ, ರಂಗ ನಿರ್ದೇಶಕರು*

ಎಂಟೊಂಬತ್ತು ವರ್ಷಗಳ ಹಿಂದೆ ಪರಿಚಯ ಆದಾಗಿನಿಂದಲೂ ವಿಠ್ಠಲ್ ಭಂಡಾರಿ ಬಗ್ಗೆ ನನಗೆ ಒಂದು ರೀತಿಯ ಅಭಿಮಾನ ಮತ್ತು ಮೆಚ್ಚುಗೆ ಇತ್ತು. ಸದಾ ನಗುಮುಖದ ಕನ್ನಡ ಅಧ್ಯಾಪಕರು ಮತ್ತು ಲೇಖಕರು. ಬಹಳ ಚೆನ್ನಾಗಿ ಭಾಷಣ ಮಾಡುತ್ತಿದ್ದರು ಮತ್ತು ವಿಚಾರ ಮಂಡಿಸುತ್ತಿದ್ದರು. ಅವರ ತಂದೆಯವರ ನೆನಪಿನಲ್ಲಿ ಹೊನ್ನಾವರದ ಬಳಿಯ ಅವರ ಹುಟ್ಟೂರಿನಲ್ಲಿ ಅವರ ಕುಟುಂಬ ಪ್ರತಿವರ್ಷ ನಡೆಸುತ್ತಿದ್ದ ಕಾರ್ಯಕ್ರಮಕ್ಕೆ ಒಮ್ಮೆ ನನ್ನನ್ನೂ ಆಹ್ವಾನಿಸಿದ್ದರು. ಸಜ್ಜನ, ಸಂಭಾವಿತ. ಇಂದು ಕೋವಿಡ್‌ಗೆ ಬಲಿಯಾಗಿದ್ದಾರೆ. ವಿಠ್ಠಲ್ ಭಂಡಾರಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

*–ರವಿ ಕೃಷ್ಣಾರೆಡ್ಡಿ, KRS ರಾಜ್ಯಾಧ್ಯಕ್ಷರು*

ಉತ್ತರಕನ್ನಡದ ಚಿಕ್ಕ ಹಳ್ಳಿ ಕೆರೆಕೋಣದಲ್ಲಿ ವಿಚಾರವಾದಿ ಕುಟುಂಬದಲ್ಲಿ ಹುಟ್ಟಿದ ವಿಠಲ ಭಂಡಾರಿ ಆರಂಭದಿಂದಲೂ ತಮ್ಮ ತಂದೆ ಆರ್ ವಿ ಭಂಡಾರಿಯವರ ಮಾರ್ಗದರ್ಶನದಲ್ಲಿ ವೈಜ್ಞಾನಿಕ ಚಿಂತನೆ ಮತ್ತು ಸಾಹಿತ್ಯದಲ್ಲಿ ಆಸಕ್ತಿಯನ್ನು ರೂಢಿಸಿಕೊಂಡಿದ್ದವರು. ಕಾಲದೊಂದಿಗೆ ಹೆಜ್ಜೆಯಿಡುತ್ತಾ ಯುವಜನರನ್ನು ತಲುಪುವ ಹೊಸ ಪರಿಭಾಷೆಗಳನ್ನು ರೂಢಿಸಿಕೊಂಡು ಸದಾ ಯುವಜನರ ಜೊತೆಗೆ ಒಡನಾಡುತ್ತಾ ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದವರು.

ತಮ್ಮ ಮನೆಯಲ್ಲೇ ಒಂದು ಪುಟ್ಟ ಗ್ರಂಥಾಲಯವನ್ನು ಹೊಂದಿದ್ದ ವಿಠಲ ಭಂಡಾರಿಯವರು ವಿಶೇಷವಾಗಿ ಯುವಜನರಲ್ಲಿ ಓದಿನ ಆಸಕ್ತಿ ಬಿತ್ತುತ್ತಿದ್ದರು, ತಾವೇ ಪುಸ್ತಕಗಳನ್ನು ಕೊಟ್ಟು ಓದಿಸುತ್ತಿದ್ದರು ಕೂಡಾ. ಬಂಡಾಯ ಪ್ರಕಾಶನದ ಮೂಲಕ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದ ವಿಠಲ್, ತಮ್ಮ ತಂದೆ ಆರ್.ವಿ.ಭಂಡಾರಿಯವರ ಎಲ್ಲ ಪುಸ್ತಕಗಳನ್ನೂ ಕಾಪಿರೈಟ್ ಮುಕ್ತಗೊಳಿಸಿ ಡಿಜಿಟಲ್ ಮಾಧ್ಯಮದಲ್ಲಿ ಪ್ರಕಟಿಸಲು ಸಂಚಿ ಫೌಂಡೇಶನ್‌ಗೆ ನೀಡಿದ್ದರು. ಜಸ್ಟಿಸ್ ನಾಗಮೋಹನ ದಾಸ್ ಅವರ "ಸಂವಿಧಾನ ಓದು" ಪುಸ್ತಕವನ್ನು ಪ್ರಕಟಿಸಿ ಸಾವಿರಾರು ಸಂಖ್ಯೆಯಲ್ಲಿ ರಾಜ್ಯದ ಉದ್ದಗಲ ತಲುಪಿಸಿ ಒಂದು ಬೃಹತ್ ಅಭಿಯಾನವನ್ನೆ ನಡೆಸಿದ್ದರು.

**BGVS** ರಾಜ್ಯ ಸಮಿತಿಯ ಸಂಸ್ಥಾಪಕ ಜಂಟಿ ಕಾರ್ಯದರ್ಶಿಯಾಗಿ ಜನವಿಜ್ಞಾನ ಚಳವಳಿಯನ್ನ ಕಟ್ಟಲು ರಾಜ್ಯಾದ್ಯಂತ ದುಡಿದಿದ್ದ ವಿಠಲ ಭಂಡಾರಿ, "ಸಹಯಾನ" ಕಾರ್ಯಕ್ರಮಗಳ ಮೂಲಕ ಯುವ ಜನರನ್ನು ಒಂದೆಡೆ ಒಗ್ಗೂಡಿಸಿ ಕಲೆ, ಸಾಹಿತ್ಯ, ವೈಚಾರಿಕ ಚರ್ಚೆಗಳಿಗೆ ಚಾಲನೆ ನೀಡುತ್ತಿದ್ದರು. ಐಕ್ಯತಾ ರ‍್ಯಾಲಿ, ಸೋಶಿಯಲ್ ಮೀಡಿಯಾ ಬರಹ ಕಮ್ಮಟ, ಕೋಶ ಓದು ದೇಶ ನೋಡು ವಾರ್ಷಿಕ ಅಭಿಯಾನಗಳು, ಮಹಿಳಾ ಸಮ್ಮೇಳನ, ಹೀಗೆ ರಾಜ್ಯದ ಯಾವ ಭಾಗದಲ್ಲಿ ಯಾವುದೇ ಜೀವಪರ ಮತ್ತು ವೈಚಾರಿಕ ಕಾರ್ಯಕ್ರಮಗಳು ನಡೆದರೂ ಅಲ್ಲಿ ಹಾಜರಿದ್ದು ಕೈಜೋಡಿಸುತ್ತಿದ್ದ, ಮಾರ್ಗದರ್ಶನ ಮಾಡುತ್ತಿದ್ದ ವಿಠಲ ಭಂಡಾರಿ ಇನ್ನು ನೆನಪು ಮಾತ್ರ. ಕೋವಿಡ್ ಸೋಂಕಿಗೆ ಬಲಿಯಾಗಿ (ಮೇ 7ರ ಸಂಜೆ) ನಮ್ಮನ್ನು ಅಗಲಿದ ವಿಠಲ ಭಂಡಾರಿಯವರನ್ನು ಸಂಚಿ ಫೌಂಡೇಶನ್ ಮತ್ತು ಸಂಚಯ ಬಳಗ ಗೌರವದಿಂದ ನೆನೆಯುತ್ತದೆ.


*–ಸಂಚಿ ಫೌಂಡೇಶನ್ ಮತ್ತು ಸಂಚಯ ಬಳಗ*

JANASHAKTHI KANNADA VARA PATRIKE May 10-16, 2021 Price: Rs. 10/- Date of Publication: 7 May 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

# ಡಾ. ವಿಠ್ಠಲ ಭಂಡಾರಿ ಇನ್ನು ನೆನಪು ಮಾತ್ರ!



ವಿದ್ಯಾರ್ಥಿ ಜೀವನದಿಂದಲೇ ದಶಕಗಳ ಕಾಲ ಎಡ–ಪ್ರಗತಿಪರ ಚಳುವಳಿಯೊಂದಿಗೆ ಸದಾಕಾಲ ಗುರುತಿಸಿಕೊಂಡಿದ್ದ ವಿಠ್ಠಲ ಭಂಡಾರಿ ಅವರು ಮೇ 7ರಂದು ನಮ್ಮನ್ನಗಲಿದ್ದಾರೆ. ಜೂನ್ 27, 1970ರಂದು ಜನಿಸಿದ ವಿಠ್ಠಲ್ ಭಂಡಾರಿ ಅವರಿಗೆ 51 ವರ್ಷ ವಯಸ್ಸಾಗಿತ್ತು. ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ ಮೂಲಕ ಅವರ ಹೋರಾಟದ



ಜೀವನವು ಪ್ರಾರಂಭವಾಯಿತು. ಡಿ.ವೈ.ಎಫ್.ಐ ನಲ್ಲೂ ತೊಡಗಿಸಿಕೊಂಡಿದ್ದ ಅವರು ಬಂಡಾಯ, ಚಿಂತನ, ಸಹಯಾನ, ಸಮುದಾಯ ಕರ್ನಾಟಕ ಗಳ ಮೂಲಕ ಕರ್ನಾಟಕದ ಸಾಂಸ್ಕೃತಿಕ ಚಳುವಳಿಯ ಒಬ್ಬ ಪ್ರಮುಖ ನಾಯಕರಾಗಿ ಹೊಮ್ಮಿದ್ದರು. ಅವರು ಉತ್ತರ ಕನ್ನಡ ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲೂ ಬಂಡಾಯ ಚಳುವಳಿಯ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದ ಮತ್ತು ಸಾಹಿತಿ, ವಿಚಾರವಾದಿ ಆಗಿದ್ದ ಡಾ. ಆರ್ ವಿ ಭಂಡಾರಿ ಅವರ ಪುತ್ರ.

ನ್ಯಾಯಮೂರ್ತಿ ನಾಗಮೋಹನ್ ದಾಸ್ ರಚಿಸಿದ ಕೃತಿ 'ಸಂವಿಧಾನ ಓದು' ಅಭಿಯಾನದ ಮೂಲಕ ಇತ್ತೀಚಿನ ವರ್ಷಗಳಲ್ಲಿ ಇಡೀ ರಾಜ್ಯಾದ್ಯಂತ ಸಂಚರಿಸಿ ಸಂವಿಧಾನದ ಬಗ್ಗೆ ಅರಿವನ್ನು ಮೂಡಿಸುವಲ್ಲಿ ಅವರ ದಣಿವರಿಯದ ಕೆಲಸ ಇಡೀ ರಾಜ್ಯದ ಗಮನ ಸೆಳೆದಿತ್ತು. ಕೆಲವು ದಿನಗಳ ಹಿಂದೆ ಕೋವಿಡ್ ಪಾಸಿಟಿವ್ ಆಗಿದ್ದರಿಂದ ಶಿವಮೊಗ್ಗದಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ವೈದ್ಯರ ಚಿಕಿತ್ಸೆಯು ಸತತವಾಗಿ ಮುಂದುವರೆದಿತ್ತು. ಹಲವು ದಿನಗಳ ಕಾಲ ಐಸಿಯು ನಲ್ಲಿ ವೆಂಟಿಲೇಟರ್ ನಲ್ಲಿ ಇದ್ದ ಅವರು ಅಂತಿಮವಾಗಿ ಹೃದಯ ಸ್ತಂಭನದಿಂದ ನಿಧನ ಹೊಂದಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಕ್ಕಳ ರಂಗ ಶಿಬಿರ, ಕವಿಗೋಷ್ಠಿ, ಪುಸ್ತಕ ಓದು ಕಮ್ಮಟ, ಕಾವ್ಯ ಕಮ್ಮಟ, ವಿಚಾರ ಸಂಕಿರಣಗಳು, ಪುಸ್ತಕ ಬಿಡುಗಡೆ, ಹೊನ್ನಾವರದ ಕೆರೆಕೋಣದಲ್ಲಿ ನಡೆಯುವ 'ಹೊಸ ತಲೆಮಾರು' ಸರಣಿಯ ವಾರ್ಷಿಕ ಸಹಯಾನ ಸಾಹಿತ್ಯೋತ್ಸವ, ಮತ್ತು ಇತರ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಎಡ–ಪ್ರಜಾಸತ್ತಾತ್ಮಕ ಸಾಂಸ್ಕೃತಿಕ ಚಳುವಳಿಗೆ ಸ್ಥಳೀಯವಾಗಿ ಬೇರುಬಿಟ್ಟ ವಿಶ್ವಾತ್ಮಕ ಆಶಯದ ಒಂದು ಹೊಸ ಮಾದರಿಯನ್ನು ರೂಪಿಸಿದ್ದರು. ಜನನುಡಿ, "ಕೋಶ ಓದು, ದೇಶ ನೋಡು" ನಂತಹ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಸಿದ್ದಾಪುರದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು ವೃತ್ತಿ ಜೀವನದಲ್ಲಿಯೂ ಅವರು ಗಂಭೀರವಾಗಿ ತೊಡಗಿಸಿಕೊಂಡು ವಿದ್ಯಾರ್ಥಿಗಳ ಮೆಚ್ಚಿನ ಅಧ್ಯಾಪಕರಾಗಿದ್ದರು. ಹಂಪಿ ವಿ.ವಿ ಯಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದ ಅವರು ಉತ್ತಮ ಲೇಖಕರೂ ಸಂಶೋಧಕರೂ ಆಗಿದ್ದರು. ಅವರು ಪುಸ್ತಕ ಪ್ರಕಟಣೆಯಲ್ಲಿ ತೊಡಗಿಸಿಕೊಂಡಿದ್ದು ಬಂಡಾಯ ಪ್ರಕಾಶನ, ಚಿಂತನ ಉ.ಕ ಗಳ ಮೂಲಕ ಹಲವು ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದರು.

ವಿಠಲ ಭಂಡಾರಿ ಅವರ ನಿಧನಕ್ಕೆ ಪ್ರಗತಿಪರ ಸಾಹಿತಿಗಳು, ಜನಪರ ಸಾಹಿತಿಗಳು, ಅಧ್ಯಾಪಕ ವರ್ಗ, ವಿದ್ಯಾರ್ಥಿಗಳು, ಎಡ–ಪ್ರಗತಿಪರ ಚಳುವಳಿಗಳು ಸಂಘಟನೆಗಳ ನಾಯಕರು ಸಂತಾಪವನ್ನು ಸೂಚಿಸಿದ್ದಾರೆ.

## ಪ್ರಜಾಪ್ರಭುತ್ವ, ಪ್ರಗತಿಪರ ಸಾಂಸ್ಕೃತಿಕ ಚಳುವಳಿಗೆ ತುಂಬಲಾರದ ನಷ್ಟ

'ಸಂವಿಧಾನ ಓದು ಪುಸ್ತಕವನ್ನು ಬರೆಯಬೇಕು ಎಂದು ನನ್ನನ್ನು ಪ್ರೇರೇಪಿಸಿದವರೇ ವಿಠಲ ಭಂಡಾರಿಯವರು. ಆ ಪುಸ್ತಕವನ್ನು ಸಹಯಾನ ಸಂಸ್ಥೆಯೇ ಪ್ರಕಟಿಸಿತು. ರಾಜ್ಯದಾದ್ಯಂತ ಅಭಿಯಾನಕ್ಕಾಗಿ ಜೊತೆಯಾಗಿ ಉತ್ಸುಕತೆಯಿಂದ ನನ್ನ ಜೊತೆ ಸುತ್ತಾಡಿದರು.. .. 2018ರ ಫೆಬ್ರುವರಿಯಲ್ಲಿ ಪುಸ್ತಕದ ವಿಚಾರನ್ನು ಅವರು ನನ್ನ ತಲೆಗೆ ತುಂಬಿದರು. ಅದೇ ವರ್ಷ ಆ.15 ರಂದು ಪುಸ್ತಕ ಬಿಡುಗಡೆಯಾಯಿತು. ಸುಪ್ರಿಂ ಕೋರ್ಟ್‌ನಲ್ಲಿ ವಕೀಲಿ ನಿರ್ವಹಿಸುತ್ತಿದ್ದ ನನ್ನನ್ನು ಅಭಿಯಾನದ ಸಲುವಾಗಿಯೇ ಕರೆದುಕೊಂಡು ಬಂದರು.. .. ಕೆರೆಕೋಣದಲ್ಲಿ ಸಹಯಾನದ ಉದ್ಘಾಟನೆಗೆ, ಅದರ ದಶಮಾನೋತ್ಸವ ಸಮಾರಂಭದ ಉದ್ಘಾಟನೆಗೆ ನನ್ನನ್ನೇ ಕರೆಸಿದ್ದರು. ಅವರ ನಿಧನದ ಸುದ್ದಿಯನ್ನು ನಂಬಲಾಗುತ್ತಿಲ್ಲ. ಅವರ ನಿಧನ ರಾಜ್ಯದ ಪ್ರಜಾಪ್ರಭುತ್ವ ಚಳವಳಿಗೆ ದೊಡ್ಡ ನಷ್ಟ..'

*–ನ್ಯಾಯಮೂರ್ತಿ ನಾಗಮೋಹನ ದಾಸ್*

ವಿಠ್ಠಲ ಭಂಡಾರಿ ವೇದಿಕೆಯಲ್ಲಷ್ಟೇ ಕಾಣಿಸಿಕೊಳ್ಳುತ್ತಿದ್ದ ಚಿಂತಕರಾಗಿರಲಿಲ್ಲ, ನೇಪಥ್ಯದಲ್ಲಿ ದುಡಿಯುತ್ತಿದ್ದ ಸಂಘಟಕರಾಗಿದ್ದರು. ಈ ಕಾರಣದಿಂದಾಗಿ ಅವರ ಅಗಲಿಕೆ ತುಂಬಲಾರದ ನಷ್ಟ, ಅವರ ಸ್ಥಾನವನ್ನು ತುಂಬುವುದು ಕೂಡಾ ಕಷ್ಟ. ಅವರು ಸದಾ ಸ್ಮರಣೀಯ.

*–ದಿನೇಶ್ ಅಮೀನ್ ಮಟ್ಟು, ಹಿರಿಯ ಪತ್ರಕರ್ತರು*

ಕನಸುಗಳನ್ನು ಹೊತ್ತು ನಾಡಿನಾದ್ಯಂತ ಜನಜಾಗೃತಿಗಾಗಿ ತನ್ನ ಆರೋಗ್ಯವನ್ನೂ ಲೆಕ್ಕಿಸದೇ ತಿರುಗಾಡುತ್ತಿದ್ದ ವಿಠ್ಠಲ ಇಷ್ಟು ಬೇಗ ನಮ್ಮನ್ನಗಲಬಾರದಿತ್ತು. ದೇಶದ ಕಟ್ಟ ಕಡೆಯ ಪ್ರಜೆಗೂ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನೀಡಿದ ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನಗಳು ಶುರುವಾದಾಗ, "ಸಮುದಾಯ ಕರ್ನಾಟಕ" ಕೈಗೊಂಡ 'ಸಮುದಾಯ ಓದು ಅಭಿಯಾನ'ದ ಭಾಗವಾಗಿ ಕರ್ನಾಟಕದ ವಿಶ್ರಾಂತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರು ಬರೆದ ಸಂವಿಧಾನ ಕುರಿತ ಸರಳ ಪುಸ್ತಕಗಳನ್ನು ಹೊತ್ತು ಕರ್ನಾಟಕದಾದ್ಯಂತ ನೂರಾರು ಸಭೆಗಳನ್ನು, ಬಹಳ ಮುಖ್ಯವಾಗಿ ಕಾಲೇಜುಗಳ ಯುವಜನರಿಗೆ, ನಡೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದ ಗೆಳೆಯ ವಿಠ್ಠಲ ಭಂಡಾರಿ ಸಾಮಾಜಿಕ ಚಳುವಳಿಗಾರರೆಲ್ಲರಿಗೂ ಮಾದರಿಯಾಗಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಎಲ್ಲರ ಮನಸ್ಸನ್ನೂ ಸೂರೆಗೊಂಡಿದ್ದರು. ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದ ಮಹಾತ್ಮಾ ಗಾಂಧಿ ಶತಾಬ್ಧಿ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ತಮ್ಮ ಸೇವೆ ಸಲ್ಲಿಸುತ್ತಿದ್ದರು ಡಾ.ವಿಠ್ಠಲ ಭಂಡಾರಿ. ವಿಠ್ಠಲ ಅವರ ಕನಸುಗಳನ್ನು ನನಸು ಮಾಡುವುದರ ಮೂಲಕ ನಮ್ಮ ಶ್ರದ್ಧಾಂಜಲಿ ಸಲ್ಲಿಸೋಣ.

*–ಟಿ.ಸುರೇಂದ್ರರಾವ್, ಸಮುದಾಯ ಕರ್ನಾಟಕ*

ವಿಠಲ್ ಭಂಡಾರಿ ಸರ್ ಇನ್ನಿಲ್ಲ ಅನ್ನೋದನ್ನ ನಂಬಲಿಕ್ಕೆ ಆಗ್ತಿಲ್ಲ. ನಾನು ಕಾರವಾರದ ವಿಜಯ ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ದೊಡ ದೈರ್ಯ ಅಂತ ಇದ್ದವರು ವಿಠಲ್ ಭಂಡಾರಿ ಮತ್ತು ಯಮುನಾ ಗಾಂವ್ಕರ್. ಯಾವುದೇ ವಿಷಯದ ತುಂಬಾ ಅಥೆಂಟಿಕ್ ಆಗಿ ಮಾತನಾಡಬಲ್ಲ ಮೇಷ್ಟು, ಸಾವಿರಾರು ವಿದ್ಯಾರ್ಥಿಗಳಿಗೆ ಸಾಹಿತ್ಯ, ಚಳವಳಿಗಳ ಹುಚ್ಚು ಹಿಡಿಸುತ್ತಿದ್ದವರು. ಎಲ್ಲೆಲ್ಲಿಂದಲೋ ಉತ್ತರ ಕನ್ನಡ ಜಿಲ್ಲೆಯ ಡೈವರ್ಸಿಟಿಯನ್ನು ನೋಡಲು ಬರುತ್ತಿದ್ದವರಿಗೆಲ್ಲ ತಮ್ಮ ಮನೆಯಲ್ಲಿ ಉಳಿಸಿಕೊಂಡು ಜಿಲ್ಲೆಯಾದ್ಯಂತ ಓಡಾಡಿ ತೋರಿಸುತ್ತಿದ್ದವರು. ಜನನುಡಿ, ಮೇ ಸಾಹಿತ್ಯ ಮೇಳಗಳಂಥ ಎಲ್ಲ ಜೀವಪರ ಕಾರ್ಯಕ್ರಮಗಳೆಲ್ಲಲ್ಲ ಕಾಣಿಸಿಕೊಳ್ಳುತ್ತಿದ್ದವರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೀವಪರ ಕಾಳಜಿಗಳಿಗೆ ಧಕ್ಕೆ ಬಂದಾಗ ಮೊದಲು ದನಿ ಎತ್ತುತ್ತಿದ್ದವರು ವಿಠಲ್ ಸರ್ ಇನ್ನಿಲ್ಲ ವೆಂದರೆ ನಂಬಲಿಕ್ಕಾಗುತ್ತಿಲ್ಲ.

*–ಹನುಮಂತ ಹಾಲಗೇರಿ, ಯುವ ಸಾಹಿತಿ*

ಪುಟ 15 ನೋಡಿ

# ಡಾ. ಗುಂಡ್ಮಿ ಭಾಸ್ಕರ ಮಯ್ಯರ ಕ್ಲಾಸು ಇನ್ನಿಲ್ಲ!

**ವಾಸುದೇವ ಉಚ್ಚಿಲ್**



– ಮೇ 6, 2021 ರಂದು ನಿಧನರಾದ ಕಾ.ಗುಂಡ್ಮಿ ಭಾಸ್ಕರ ಮಯ್ಯ ಅವರು 1977 ರಿಂದ ನನ್ನ ಗೆಳೆಯರಾಗಿದ್ದಾರೆ. ಅವರು ಕುಂದಾಪುರ ಕಾಲೇಜಿನಲ್ಲಿ ಹಿಂದಿ ಉಪನ್ಯಾಸಕನಾಗಿ ಸೇರಿಕೊಂಡ ಕಾಲದಲ್ಲೇ, ಅದೇ ಆಡಳಿತದ ಉಡುಪಿಯ ಕಾಲೇಜೊಂದರಲ್ಲಿ ನಾನೂ ಉಪನ್ಯಾಸಕನಾಗಿ ಸೇರಿಕೊಂಡಿದ್ದೆ.

1970ರ ದಶಕದ ಭಾಷಾ ಅಧ್ಯಾಪಕರಿಗೆ ಆ ವೇಳೆಗೆ ಕನ್ನಡದಲ್ಲಿ ಪ್ರಚಲಿತವಿದ್ದ ನವ್ಯ ಸಾಹಿತ್ಯದ, ಲೋಹಿಯಾ ಚಿಂತನೆಯ, ಕಾರಂತರ ವಿಚಾರಧಾರೆಯ ಪರಿಚಯವಿತ್ತು. ಭಾಸ್ಕರ ಮಯ್ಯರ ಗೆಳೆತನದಲ್ಲಿ ಹೆಚ್ಚೆಚ್ಚು ವಿಚಾರವಾದವನ್ನು ನಾವು ಬೆಳೆಸಿಕೊಂಡೆವು. ಅವರು ಮತ್ತು ಆ ದಿನಗಳ ಇತರ ಸಾಹಿತ್ಯಕ ಗೆಳೆಯರಿಂದ ನಾವೂ ಮಾರ್ಕ್ಸ್‌ವಾದದ ಬಗೆಗೂ ಆಕರ್ಷಿತರಾಗಿ ಅದನ್ನೂ ಅಧ್ಯಯನ ಮಾಡಿದೆವು.

ಅಲ್ಲಿಂದ ಸಾಗಿದ ಜೀವನ ಪಯಣದಲ್ಲಿ ಜಿ. ಭಾಸ್ಕರ ಮಯ್ಯರು ಪ್ರಬುದ್ಧ ವಿದ್ವಾಂಸರಾಗಿ ಬೆಳೆದುದನ್ನು, ನಮ್ಮೆಲ್ಲರನ್ನು ಪ್ರಭಾವಿಸಿ ಬೆಳೆಸಿದ್ದನ್ನು ನಾವು ಅನುಭವಿಸಿದ್ದೇವೆ. ಬಹುಶಃ ಅವರ ವ್ಯಕ್ತಿತ್ವವನ್ನು ವಿಚಾರವಾದಿ, ವಿದ್ವಾಂಸ, ಲೇಖಕ, ಮಾರ್ಕ್ಸ್‌ವಾದಿ ಹಾಗೂ Activist ಆಗಿ ಪರಿಚಯಿಸಬಹುದಾಗಿದೆ.

ಉಡುಪಿ ತಾಲೂಕಿನ ಗುಂಡ್ಮಿ ಎಂಬ ಹಳ್ಳಿಯವರಾದ ಇವರು ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಬಿ.ಎಸ್‌ಸಿ. ವಿದ್ಯಾಭ್ಯಾಸ ಮಾಡುವಾಗಲೇ ಹಿಂದಿ, ಸಂಸ್ಕೃತ, ಕನ್ನಡ ಭಾಷೆಗಳ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದ್ದರು. ವಿಚಾರವಾದಿ (Rational) ನೆಲೆಯಲ್ಲಿ ಆರಂಭಗೊಂಡ ಅವರ ವೈಚಾರಿಕತೆ, ಅವರು ಯಾವ ಭಾಷೆ, ಶಿಸ್ತುಗಳನ್ನು ಅಧ್ಯಯನ ಮಾಡಿದರೂ, ವಸ್ತುನಿಷ್ಠವಾದ ಅರಿವಿಗೆ ಎಡೆಮಾಡಿಕೊಟ್ಟಿತು. ಒಂದೇ ಸಮನೆ ಓದುವ ಹಸಿವು ಅವರನ್ನು ಹಲವು ಶಾಸ್ತ್ರಗಳ ಆಳವಾದ ಅಧ್ಯಯನದ ಕಡೆಗೆ ಸಾಗಿಸಿತು. ಅವರು ಕಾಲೇಜು ಅಧ್ಯಾಪಕರಾದ ಮೇಲೂ ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಬೇರೆ ಬೇರೆ ಸ್ನಾತಕೋತ್ತರ ಪದವಿಗಾಗಿ ಓದುತ್ತಿದ್ದರು. ಪದವಿಗಾಗಿ ತಾನು ಓದುವುದಲ್ಲ, ತಾನು ಜ್ಞಾನ ಸಂಪಾದನೆಗಾಗಿ ಓದುತ್ತಿದ್ದೇನೆ ಎಂದು ಅವರು ನಮ್ಮಲ್ಲಿ ಹೇಳಿದ್ದುಂಟು. ಈ ಓದಿನ ಹಸಿವಿನಿಂದಾಗಿಯೇ ಅವರು ಹಿಂದಿ, ಸಂಸ್ಕೃತ, ತತ್ವಶಾಸ್ತ್ರ, ಜೈನಾಲಜಿ, ಪ್ರಾಕೃತ, ಇಂಗ್ಲೀಷ್‌ಗಳಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. ಮೊದಲೇ ಗಳಿಸಿದ್ದ ಬಿ.ಎಸ್.ಸಿ ಮತ್ತು ಬಿ.ಎಡ್ ಪದವಿಗಳೊಂದಿಗೆ ಕನ್ನಡ ಮತ್ತು Human Right ನಲ್ಲೂ ಡಿಪ್ಲೋಮಾ ಪದವಿ ಪಡೆದರು. ಮೈಸೂರು ವಿ.ವಿ.ಯಿಂದ ಹಿಂದಿಯಲ್ಲಿ ಪಿ.ಹೆಚ್.ಡಿ ಪಡೆದರು. ಈ ವಿಸ್ತಾರವಾದ ಓದು ಅಧ್ಯಯನದಿಂದಾಗಿ ಅವರಿಗೆ ಪ್ರಾಚೀನ, ಪೌರಾತ್ಯ, ಪಶ್ಚಿಮದ ತತ್ತ್ವಶಾಸ್ತ್ರ ಹಾಗೂ ಇತರ ಜ್ಞಾನಶಿಸ್ತುಗಳಲ್ಲಿ ಆಳವಾದ ಪಾಂಡಿತ್ಯ ಒದಗಿತು. ಕನ್ನಡದಲ್ಲಿ ಅವರು ಬರೆದ 32 ಪುಸ್ತಕಗಳಲ್ಲಿ ಹಾಗೂ ಹಿಂದಿಯಲ್ಲಿ ಬರೆದ 20 ಪುಸ್ತಕಗಳಲ್ಲಿ ಅವರ ವಿದ್ವತ್ತಿನ ಆಳವನ್ನು ನಾವು ಗುರುತಿಸಬಹುದು. ಮತ್ತು ಆ ಆಳವನ್ನು ತಲುಪಲು ಅವರು ಬೆಳಕಾಗಿ ಬಳಸಿದ ಮಾರ್ಕ್ಸ್‌ವಾದದ ಪ್ರಭೆಯನ್ನು ನಾವು ಗುರುತಿಸಬಹುದು.

ಭಾಸ್ಕರ ಮಯ್ಯರ ಚಿಂತನೆ ಹಾಗೂ

ಪುಟ 15 ನೋಡಿ

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**